ಭಾರತೀಯ ಸಾಹಿತ್ಯದ ನಿರ್ಮಾಣಕಾರರು

ತೋರು ದತ್

ಮೂಲ :

ಪದ್ಮಿನಿ ಸೆನ್ ಗುಪ್ತ

ಅನುವಾದ :

ಚಿ. ನ. ಮಂಗಳ

ಸಾಹಿತ್ಯ ಅಕಾದೆಮಿ

ಹೊಸ ದೆಹಲಿ

TORU DUTT—Kannada translation by C. N. Mangala of Padmini Sen Gupta's English monograph of the same name. Sahitya Akademi, New Delhi, 1972.

Price Rs. 2-50

First edition: 1972

SAHITYA AKADEMI
Rabindra Bhavan, New Delhi-1
Regional Offices:
Madras-6, Calcutta-29 and Bombay-14

Published by Sahitya Akademi and Printed
at Wesley Press, Mysore

ಪರಿವಿಡಿ

೧. ವಿಶ್ವಕುವರಿ

ಬರಹದ ಭಾಷೆ ಮಾತೃಭಾಷೆಯಾಗಿರಲಿ ಇಲ್ಲದಿರಲಿ, ಕೆಲವು ಬರಹಗಾರರು ಮಾತ್ರ ಇಡೀ ವಿಶ್ವಕ್ಕೇ ಸೇರಿದವರು. ಅವರು ಯಾವ ದೇಶದಲ್ಲೇ ಹುಟ್ಟಿರಲಿ, ಆ ದೇಶ ಅವರ ಮೇಲೆ ತನ್ನ ಅಚ್ಚೊತ್ತಿರಲಿ, ಅವರ ಬರವಣಿಗೆ ಮಾತ್ರ ವಿಶ್ವವ್ಯಾಪಕ.

ತೋರುದತ್ ಇಂತಹ ಒಬ್ಬ ಅಸಾಧಾರಣ ಮಹಿಳೆ. 'ಗಂಗಾನದಿಯ ಹಸಿರು ಕಣಿವೆ'ಯ ಮಗಳಾಗಿ ಭಾರತೀಯಳಾಗಿಯೇ ಇದ್ದರೂ ಸಹ ಸಂಕುಚಿತ ರಾಷ್ಟ್ರೀಯ ಮನೋಭಾವವಾಗಲಿ, ಭಾಷಾನಿರ್ಬಂಧಗಳಾಗಲಿ, ಮಾನಸಿಕ ಅಡ್ಡಿ ಆತಂಕಗಳಾಗಲಿ ಅವಳ ಮನಸ್ಸನ್ನು ಮಸುಕುಗೊಳಿಸಲಿಲ್ಲ. ತನ್ನ ತನವನ್ನು ತಾನು ಕಂಡು ಸಂತೋಷಪಟ್ಟರೂ ತನಗೆ ವಿದ್ಯೆ ಕಲಿಸಿದ ಇಂಗ್ಲಿಷ್, ಫ್ರೆಂಚ್, ಈ ಎರಡು ಪರಭಾಷೆಗಳ ಸಾಹಿತ್ಯ ಸಾಗರದಾಳಕ್ಕೆ ಹೋಗಿ ಮಿಂದು ಬಂದಳು. ತನಗೆ ಸ್ಫೂರ್ತಿಯಿತ್ತ ದೇಶಗಳಿಗೆ ತಾನು ಋಣಿ ಎಂದು ಹೇಳಲು ಸ್ವಲ್ಪವೂ ಹಿಂಜರಿಯಲಿಲ್ಲ. ವಿಶ್ವಸಾಹಿತ್ಯದಲ್ಲಿ ತನ್ನ ದೇಶಕ್ಕೂ ಸ್ಥಾನಗಳಿಸಿ ಕೊಟ್ಟ ಮೊದಲಿಗರಲ್ಲಿ ಒಬ್ಬಳು ಈಕೆ. ಬಂಗಾಳಿ ಭಾಷೆಯಲ್ಲಿ ಒಂದಕ್ಷರ ಬರೆಯದಿದ್ದರೂ ಈಕೆಯ ದೇಶಾಭಿಮಾನ ಒಂದು ಗುಲಗಂಜಿಯಷ್ಟೂ ಕಡಿಮೆಯಾಗಿರಲಿಲ್ಲ.

ಭಾರತೀಯರಿಗೆ ಐರೋಪ್ಯ ವಿದ್ಯಾಭ್ಯಾಸವನ್ನು ಕೊಡುವ ಕಾರ್ಯವನ್ನು ತ್ವರಿತಗೊಳಿಸಿ ಅಭಿವೃದ್ಧಿಪಡಿಸುವುದು, ವಿದ್ಯಾಭ್ಯಾಸಕ್ಕೆ ಮೀಸಲಾಗಿರುವ ಹಣವನ್ನೆಲ್ಲ ಆಂಗ್ಲ ವಿದ್ಯಾಭ್ಯಾಸಕ್ಕಾಗಿಯೇ ಖರ್ಚುಮಾಡುವುದು ಇವುಗಳಿಗೆ ಸಂಬಂಧಿಸಿದ್ದು ಮೆಕಾಲೆ ವರದಿ ಹಾಗೂ ಲಾರ್ಡ್ ವಿಲಿಯಂ ಬೆಂಟಿಂಕನ ತೀರ್ಪು. ಈ ತೀರ್ಪುಗಳು ಭಾರತ ಚರಿತ್ರೆಯನ್ನು ಮಂಜಾಗಿಸಿದ್ದ ಕಾಲದಲ್ಲಿ ಹುಟ್ಟಿದವಳು ತೋರುದತ್.

ಭಾರತೀಯರು ಆಂಗ್ಲ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತು. ಪರಕೀಯರು ಅವರ ಭಾಷೆಯನ್ನು ಭಾರತೀಯರ ಮೇಲೆ ಹೇರಿ ಭಾರತೀಯರಿಗೆಸಗುತ್ತಿದ್ದ ಘೋರ ಅಪರಾಧವನ್ನು ಅರಿಯದೆ ವಿದ್ಯಾವಂತ ಭಾರತೀಯರೆಲ್ಲ ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಒಳಗಾದರು. ಪರಿಸ್ಥಿತಿ ಹೀಗಿದ್ದುದರಿಂದ ಕ್ರಿಯಾತ್ಮಕ ಬರವಣಿಗೆಗೆ ಮಾತೃಭಾಷೆಯನ್ನೇ ಬಳಸಬೇಕೆನ್ನುವ ಪಂಡಿತರ ಕ್ಷಮೆಕೋರಬೇಕಾಗಿರಲಿಲ್ಲ ತೋರುದತ್. ಆದರೆ ತನ್ನದೇ ಆದ ಪೌರಸ್ತ್ಯ ಸಾಹಿತ್ಯ ಸಂಸ್ಕೃತಿಗಳ ಹಿನ್ನೆಲೆ ಎಷ್ಟು ಅಮೂಲ್ಯವಾದದ್ದು ಎಂಬುದನ್ನೂ ತಾನು ಚಿಕ್ಕಂದಿನಲ್ಲೇ ಕಲಿತ ಫ್ರೆಂಚ್ ಹಾಗೂ ಇಂಗ್ಲಿಷ್ ಭಾಷಾ ಸಾಹಿತ್ಯಗಳೊಂದಿಗೆ ಇದನ್ನು ಸಮನ್ವಯಗೊಳಿಸುವುದು ಎಷ್ಟು ಅವಶ್ಯವೆಂಬುದನ್ನೂ ಅರಿಯಲು ಅವಳು ತಡಮಾಡಲಿಲ್ಲ. ತನ್ನ ತಂದೆಯ ಸಹಾಯದಿಂದ ತಾನೂ ಬೇಗನೆ ಸಂಸ್ಕೃತ ಭಾಷೆ ಸಾಹಿತ್ಯಗಳ ಅಧ್ಯಯನದಲ್ಲಿ ತೊಡಗಿದಳು. ಕಾಲಾವಕಾಶವಿದ್ದಿದ್ದರೆ ತೋರು,

ತನ್ನ ಕ್ರಿಯಾತ್ಮಕ ಬರವಣಿಗೆಯಲ್ಲಿ ಹೆಚ್ಚು ಹೆಚ್ಚು ಭಾರತೀಯಳಾಗುತ್ತಿದ್ದಳೆಂಬುದರಲ್ಲಿ ಸಂದೇಹವಿಲ್ಲ. ಆದರೆ ಪರದೇಶದಲ್ಲಿ ಚಿಗುರಿ ಇಲ್ಲಿಗೆ ಬಂದು ವಿಕಸಿತವಾಗುವುದರಲ್ಲಿದ್ದ ಈ ನವುರು ನಾಜೂಕಿನ ಗಾನದ ಕುಡಿಯನ್ನು ವಿಧಿ ಚಿಕ್ಕಂದಿನಲ್ಲೇ ಕೊಂಡೊಯ್ಯಿತು. ಜೀವಿಸಿದ್ದ ಅಲ್ಪ ಕಾಲದಲ್ಲೇ ತನ್ನ ನಾಡಿನ ಭವ್ಯ ಪರಂಪರೆಯಿಂದ ತಾನು ಹೆಚ್ಚು ಹೆಚ್ಚು ಆಕರ್ಷಿತಳಾಗುತ್ತಿದ್ದಳೆಂಬುದಕ್ಕೆ ಸಾಕಷ್ಟು ನಿದರ್ಶನಗಳನ್ನು ಕೊಟ್ಟಿದ್ದಳು. ಅಲ್ಲದೆ ಕ್ರೈಸ್ತ ಧರ್ಮದಿಂದ ಹೊರಹೊಮ್ಮಿದ ಆಲೋಚನೆಗಳು, ಭಾವನೆಗಳು ಪರಕೀಯವಲ್ಲವೆಂದೂ ಯಾವ ಭಗವಂತನಿಗೆ ಯೆಹೂದ್ಯ, ಯೆಹೂದ್ಯೇತರ, ಬಂದಿ, ಮುಕ್ತ, ಆಂಗ್ಲ, ಬಂಗಾಳಿ ಮೊದಲಾದ ಭೇದ ಭಾವಗಳಿಲ್ಲವೊ ಆತನಿಗೆ ಅವು ಸೇರಿದ್ದೆಂದೂ ಅಭಿಪ್ರಾಯಪಟ್ಟಿದ್ದಳು.

ತೋರುವನ್ನು ಸ್ಮರಿಸಿಕೊಂಡಾಗಲೆಲ್ಲ 'ತೋರು ಬದುಕಿದ್ದರೆ ಹೇಗಾಗಬಲ್ಲವಳಾಗಿದ್ದಳು.' ಎಂಬ ಭಾವನೆ ನಮ್ಮನ್ನು ಕಾಡಿಸದಿರಲಾರದು. ನಮ್ಮ ಈ ಸ್ಮರಣೆಯ ಹಿಂದಿರುವ ಭಾವನೆಯನ್ನು ತೋರುವೇ ತನ್ನ ಸಹೋದರಿ ಅರು ಕಾಲವಾದಾಗ ತಾನು ಬರೆದ ಪ್ರಸಿದ್ಧ ನುಡಿಗಳಲ್ಲಿ ಭವಿಷ್ಯವಾಣಿಯಾಗಿ ನುಡಿದಿದ್ದಳು.

'ನೋವನ್ನು ತೋಡಿಕೊಳ್ಳುವ ಮಾತು ಮತ್ತೆ ಬರೆಹದ ನುಡಿಗಳಲ್ಲಿ
ಬಲು ನೋವುಗೊಡುವಂಥವಿವು. ಹೀಗದಾಗಬಹುದಿತ್ತೆಂಬುಲಿ'

ತೋರು ಕಾಲವಾದಾಗ ಅವಳಿಗೆ ಇಪ್ಪತ್ತೊಂದು ವರುಷ ಮಾತ್ರವೇ ಆಗಿದ್ದರೂ ವಿಮರ್ಶಕರೊಬ್ಬರು ಹೇಳಿರುವ ಮಾತುಗಳು ಅವಳಿಗೆ ಸಲ್ಲವು. 'ಅವಳ ಬರಹಗಳೆಲ್ಲ ಆಂಗ್ಲ ಭಾಷೆಯಲ್ಲೋ ಇಲ್ಲವೆ ಫ್ರೆಂಚ್ ಭಾಷೆಯಲ್ಲೊ ಇರುವುದರಿಂದ ಈ ದ್ವಿಭಾಷತ್ವ ನಾವು ಅವಳನ್ನು ಅಪರಿಚಿತಳನ್ನಾಗಿ ಕಾಣಲು, ಪರಿತ್ಯಜಿಸಲು ಕಾರಣವಾಗಿ ಅವಳ ಜೀವನದ ದಾರುಣತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಈ ವಿಸ್ಮೃತಿಯಿಂದ ಅವಳನ್ನು ರಕ್ಷಿಸಬೇಕಾದರೆ — ರಕ್ಷಿಸಬೇಕು ನಿಜ — ಅವಳ ರಕ್ಷಕ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಮಾತೃಭಾಷೆಯಿಂದ ಇಮ್ಮಡಿ ದೂರದಲ್ಲಿರುವ ಪರನೆಲೆಯನ್ನು ತೋರು ತಾನೆ ಆರಿಸಿಕೊಂಡಿದ್ದಳು.' ಇದು ಒಬ್ಬ ವಿಮರ್ಶಕರ ಮಾತು.

ಆದರೆ ತೋರು ಎಂದೂ 'ಪರಿತ್ಯಕ್ತೆ'ಯಾಗಿಲ್ಲ. ಭಾರತದ ಪತ್ರಿಕೆಗಳಲ್ಲಿ ತೋರುವನ್ನು ಸ್ಮರಿಸುವಷ್ಟು ಆಂಗ್ಲ ಭಾಷೆಯಲ್ಲಿ ಕೃತಿ ರಚಿಸಿದ ಬೇರೆ ಯಾರನ್ನೂ ಸ್ಮರಿಸುವುದಿಲ್ಲ ಎನ್ನಬಹುದು. ಭಾರತದ ವ್ಯಕ್ತಿ ಸೂಚಿಯಲ್ಲಿ ತೋರು ಪ್ರತಿಷ್ಠಿತರಲ್ಲೊಬ್ಬಳಾಗಿದ್ದಾಳೆ. ಬಂಗಾಳಿ, ಫ್ರೆಂಚ್, ಇಂಗ್ಲಿಷ್ ಈ ಭಾಷೆಗಳಲ್ಲಿ ತೋರುವಿನ ಜೀವನ ಚರಿತ್ರೆಯನ್ನು ಬರೆದಿರುವವರೂ ವಿರಳವಲ್ಲ. ತೋರು ಕಾಲದ ಪರೀಕ್ಷೆಯಲ್ಲಿ ಜಯ ಗಳಿಸಿದ್ದಾಳೆ. ನೂರು ವರುಷಗಳಿಗಿಂತ ಹಿಂದೆ ಹುಟ್ಟಿದರೂ ಇಂದಿಗೂ ನೂರು ವರುಷಗಳಿಗಿಂತ ಬಹುಮಟ್ಟಿಗೆ ಜೀವಂತವಾಗಿದ್ದಾಳೆ. ಕಾಲವನ್ನು ಮೀರಿನಿಂತು ಶ್ರೇಷ್ಠ ಲೇಖಕಳೆನಿಸಿದ್ದಾಳೆ.

ಉಳಿಸಿ ಹೋಗಿರುವಷ್ಟರಲ್ಲೇ ಇಷ್ಟೊಂದು ಜನಪ್ರಿಯತೆಯನ್ನು ಗಳಿಸಿರುವ ತೋರು ಬದುಕಿ ಉಳಿದಿದ್ದರೆ ಇನ್ನೆಷ್ಟು ಮಹತ್ವವನ್ನು ಪಡೆಯುತ್ತಿದ್ದಳೊ ಎಂದು ಯಾರಾದರೂ ಯೋಚಿಸಬಹುದು. ಅಥವಾ ಅವಳ ಪ್ರತಿಭೆ ಪಾಂಡಿತ್ಯ ಕ್ಷೀಣಿಸಿ ಹೋಗುತ್ತಿತ್ತೊ? ಅವಳದ್ದು ಅಲ್ಪಕಾಲದಲ್ಲಿಯೇ ನಂದಿಹೋದ ಪ್ರತಿಭಾ ಜ್ಯೋತಿಯೊ? ಇಲ್ಲವೆ ಬದುಕಿ

ಉಳಿದಿದ್ದರೆ ಬರವಣಿಗೆಯಲ್ಲಿ ಅಂದಿನವರೆಗೂ ಪ್ರಕಟಗೊಂಡ ಯೌವನದ ನವಚೇತನ ನಶಿಸಿಹೋಗುತ್ತಿತ್ತೊ? ಈಗಿರುವಂತೆ ಅವಳ ಬರವಣಿಗೆ ಸ್ವಲ್ಪವೇ ಇರುವುದರಿಂದ, ಹೆಚ್ಚು ಬರೆಯಲು ಅವಳು ಬದುಕಿ ಉಳಿಯಲಿಲ್ಲವಾದ್ದರಿಂದ ಅವಳನ್ನು ಅತ್ಯಂತ ಶ್ರೇಷ್ಠ ಬರಹಗಾರರಲ್ಲಿ ಒಬ್ಬಳೆಂದು ಹೇಳಲಾಗುವುದಿಲ್ಲ. ತೋರುವಿನ ವ್ಯಕ್ತಿತ್ವವನ್ನಾಗಲಿ ಬರವಣಿಗೆಯನ್ನಾಗಲಿ ವಿಮರ್ಶಿಸಿದಾಗ ಅವಳ ಇಡೀ ಜೀವನವನ್ನು, ಆ ಜೀವನದ ಅಲ್ಪಾವಧಿಯನ್ನು ಅಲ್ಲಿನ ನೋವು ನಲಿವನ್ನು, ಕಾವ್ಯ ಪ್ರತಿಭೆಯನ್ನು ಪಾಂಡಿತ್ಯವನ್ನು ಕುರಿತು ಯಾವಾಗಲೂ ಯೋಚಿಸುತ್ತೇವೆ. ನಮ್ಮ ಮೌಲ್ಯಮಾಪನಕ್ಕೆ ತೋರುವಿನ ಪತ್ರಗಳೂ ಅವಳ ಸ್ನೇಹ ಸಂಪತ್ತು ಇವೂ ಸಹಾಯಮಾಡುತ್ತವೆ. ಅವಳ ಜೀವನ ವನ್ನೂ ಸಾಹಿತ್ಯ ಸೃಷ್ಟಿಯನ್ನೂ ಬೇರ್ಪಡಿಸಿ ನೋಡಲಾಗುವುದಿಲ್ಲ. ಅವಳ ಕವನ ಗಳನ್ನು ಅವಳ ಬದುಕಿನ ಒಂದು ಭಾಗವೆಂದು ಪರಿಗಣಿಸದಿದ್ದಲ್ಲಿ ಆ ಕವನಗಳು ಮಾತ್ರವೇ ಕಾಲನ ಪರೀಕ್ಷೆಯಲ್ಲಿ ಜಯಗಳಿಸುತ್ತಿರಲಿಲ್ಲವೇನೊ. ಆದರೆ ಅವಳ ಜೀವನ, ಕಾವ್ಯ ಸಂಪತ್ತು ಇವೆರಡೂ ಒಟ್ಟುಗೂಡಿ ಅಸಾಧಾರಣ ಪ್ರತಿಭೆಯ ಯುವತಿಯೊಬ್ಬಳನ್ನು ಪರಿಚಯ ಮಾಡಿಕೊಡುತ್ತವೆ. ವಿಲ್‌ಫ್ರೆಡ್ ಓವನ್ ಕಾವ್ಯವನ್ನು ಕುರಿತು ಹೇಳಿರುವ ಮಾತನ್ನು ತೋರುವಿನ ಕಾವ್ಯಕ್ಕೂ ಅನ್ವಯಿಸಿ ತೋರುವಿನ ಜೀವನದ ಕನಿಕರದ ಕಥೆಯಲ್ಲಿಯೇ ಇದೆ ಅವಳ ಕಾವ್ಯಧಾರೆ ಎಂದುಕೊಳ್ಳಬಹುದು.

ಅವಳ ಕರುಣಾಜನಕ ಜೀವನದೊಂದಿಗೆ ನಿಕಟ ಸಂಪರ್ಕ ಹೊಂದಿರುವದರಿಂದಲೇ ಅವಳ ಕಾವ್ಯ ಮೆಚ್ಚುಗೆಗೆ ಪಾತ್ರವಾಗಿದೆ ಎನ್ನುವ ವಿಮರ್ಶಕರೂ ಉಂಟು. ತೋರು ವಿನ ಜೀವನದಲ್ಲಿ ಸೌಂದರ್ಯ, ದುರಂತ ಇವೆರಡೂ ಮಾರಕವಾಗಿ ಸಂಘರ್ಶಿಸಿದವು. ಅವಳ ಕಾವ್ಯವನ್ನು ಕುರಿತು ವಿಚಾರ ಮಾಡುವಾಗ ಅವಳ ಕಾವ್ಯವನ್ನು ಕುರಿತಾದ ಮೆಚ್ಚುಗೆಗೂ ಸಿ. ಎಸ್. ಲೀವಿಸ್ ಹೇಳಿರುವಂಥ 'ಕವಿ ಮೆಚ್ಚುಗೆ'ಗೂ ಮಧ್ಯೆ ಗೆರೆ ಯೆಳೆಯುವುದು ಕಷ್ಟ. ಎಮಿಲಿ ಬ್ರಾಂಟೆಯ ಕವನಗಳನ್ನೂ ಅವಳ ಕಾದಂಬರಿ 'ಉದರಿಂಗ್ ಹೈಟ್ಸ್' ಅನ್ನೂ ಓದಿದಾಗ ನಾವು ಅನೇಕ ರೀತಿಯಲ್ಲಿ ಯೋಚಿಸ ಲಾರಂಭಿಸುತ್ತೇವೆ. ಹೇಗಾಗಬಹುದಾಗಿತ್ತು, ಹೀಗಾಗಬಹುದಾಗಿತ್ತೆ ಎಂಬಿವೇ ಪ್ರಶ್ನೆ ಗಳು ಎದ್ದು ನಾವು ಮುಗ್ಧರಾಗುತ್ತೇವೆ, ಖಿನ್ನರೂ ಆಗುತ್ತೇವೆ. ತೋರುವಿನ ಬಗ್ಗೆಯೂ ಇದೇ ರೀತಿಯಾಗುತ್ತದೆ. ತೋರು ಒಮ್ಮೆ ಒಂದು ಕವನವನ್ನು ಓದಿದಳು. ಅವಳೇ ಬರೆಯಬಹುದಾಗಿದ್ದಂಥ ಕವನ ಅದು. ಅದನ್ನು ಓದಿ ಅವಳು ಭಾಷಾಂತರಿಸಿದಾಗ ಭಾಷಾಂತರ ಹೊಯ್ದಾಡುವಂತೆ ಕಂಡರೂ ಸ್ಫುಟವಾಗಿ ಬಂದಿತ್ತು.

'ನನ್ನ ಅಂತಃಪ್ರೇರಣೆ' ಎಂಬ ಕವನವದು.

'ಭುವಿಯ ಮೇಲಿನ ಭಿಕಾರಿ
ರೋಗಿ ಕುರೂಪಿ ಕುಬ್ಜೆ
ಹುಟ್ಟಿನಿಂದಲೇ ಶಾಪಗ್ರಸ್ತೆ
ಎಲ್ಲರಿಂದಲೂ ಪರಿತ್ಯಕ್ತೆ!
ತುಟಿಬಿರಿದು ಹೊರಟಿತೊಂದು ಕೂಗು

ಬೇಗುದಿಯ ನೋವು
ಹಾಡು ಹಾಡೆಂದ ದೇವ
ಕೂಗಿಗುತ್ತರವಾಗಿ
ಹಾಡು, ಅಯ್ಯೋ ಪಾಪ ಮಗು
ಹಾಡೆಂದ ದೇವ ನನಗೆ ಹತ್ತಿರವಾಗಿ.'

ನೋವು, ನರಳಾಟ, ಕಣ್ಣಿಗೆ ಕಾಣದ ವಿಧಿಯಾಟದ ಕಪ್ಪು ಛಾಯೆ ಇವು ತೋರುವನ್ನು ನೆರಳಿನಂತೆ ಹಿಂಬಾಲಿಸುವ ಒಡನಾಡಿಗಳಾಗಿದ್ದವು. ಈ ಮಾತುಗಳನ್ನು ಹೇಳಿರುವಂಥ ವಿಮರ್ಶಕರೇ 'ಕಾವ್ಯವೇ ಪ್ರಮಾಣ ನಿಜ. ಆದರೆ ಕವಿಯೂ ನಮ್ಮ ಗಮನ ಸೆಳೆಯುತ್ತಾಳೆ, ಎಂದಿದ್ದಾರೆ.'

ತೋರು ಭಾಷಾ ವಿದುಷಿಯಾಗಿದ್ದಳು. ಮೂರು ಭಾಷೆಗಳನ್ನು ಕಲಿತು ಒಂದರಿಂದ ಇನ್ನೊಂದಕ್ಕೆ ಭಾಷಾಂತರಿಸಿ ಪವಾಡವನ್ನೇ ಮಾಡಿದಳೆನ್ನಬಹುದು. ಫ್ರೆಂಚ್ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯವನ್ನೂ ಪ್ರಭುತ್ವವನ್ನೂ ಗಳಿಸಿದ ಮೇಲೆ ಸಂಸ್ಕೃತ ಭಾಷೆ ಸಾಹಿತ್ಯಗಳ ಅಧ್ಯಯನವನ್ನು ಆರಂಭಿಸಿದಳು. ಕೇವಲ ಹತ್ತೇ ತಿಂಗಳಲ್ಲಿ ಸಂಸ್ಕೃತವನ್ನು ಓದಲು ಭಾಷಾಂತರಿಸಲು ಕಲಿತಳು. ಭಾರತೀಯ ಪ್ರಾಚೀನ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಬೇಕೆಂದು ತಾನು ಕೈಗೊಂಡ ನಿರ್ಧಾರದ ಬಗೆಗೆ ತನ್ನ ಆಂಗ್ಲ ಗೆಳತಿ ಮೇರಿ ಮಾರ್ಟಿನಳಿಗೆ ಕಾಗದ ಬರೆದು ಹೀಗೆ ಹೇಳಿದಳು: 'ಮಹೋನ್ನತ ಕಾವ್ಯಗಳಾದ ರಾಮಾಯಣ, ಮಹಾಭಾರತಗಳನ್ನು ಮೂಲದಲ್ಲೇ ಓದಲು ನನಗೆ ತುಂಬ ಆಸೆ. ಕೇಂಬ್ರಿಡ್ಜ್‌ಗೆ ನಾನು ಮರಳಿ ಭೇಟಿ ಕೊಡುವ ವೇಳೆಗೆ ನಾನು ಸಂಸ್ಕೃತ ಪಂಡಿತೆಯೇ ಆಗಿರುತ್ತೇನೆ. ನಾನು ಮರಳಿ ಬರಲು ಎಷ್ಟೊಂದು ಹಾತೊರೆಯುತ್ತಿದ್ದೇನೊ.' ಪಾಶ್ಚಾತ್ಯ ಜಗತ್ತಿನ ಸ್ವತಂತ್ರ ಜೀವನಕ್ಕಾಗಿ ಹಂಬಲಿಸಿ ತೋರು ತನ್ನ ಅಭಿಲಾಷೆಯನ್ನು ಮೇಲಿಂದ ಮೇಲೆ ವ್ಯಕ್ತಪಡಿಸುತ್ತಿದ್ದಳಾದರೂ ಬೇಗ ಅವಳು ತನ್ನ ಭಾರತೀಯ ವಾತಾವರಣಕ್ಕೆ ಹಿಂದಿರುಗುತ್ತಿದ್ದಳು. 'ಬಂಗಾಳಿ ಬಲ್ಲವರಿಗೆ ಸಂಸ್ಕೃತವನ್ನು ಓದುವುದು ಅರ್ಥ ಮಾಡಿಕೊಳ್ಳುವುದು ಕಷ್ಟವಲ್ಲ.' ತೋರು ಬಂಗಾಳಿಯನ್ನು ನಿರರ್ಗಳವಾಗಿ ಮಾತನಾಡ ಬಲ್ಲವಳಾಗಿದ್ದಳೆಂಬುದಕ್ಕೆ ಇದು ಸಾಕ್ಷಿ. ಆದರೆ ಬಂಗಾಳಿ ಲಿಪಿಯಮೇಲೆ ಅವಳು ಪ್ರಭುತ್ವ ಪಡೆಯಲೇ ಇಲ್ಲ. ತೋರು ಬರೆದ ಒಂದು ಕಾಗದದಲ್ಲಿ ಅವಳ ಬರವಣಿಗೆ ಮಕ್ಕಳ ಬರವಣಿಗೆಯ ಹಾಗಿದೆ, ತಪ್ಪುಗಳೂ ಇವೆ. ತನ್ನ ಹೆಸರನ್ನೇ ತಪ್ಪಾಗಿ ಬರೆದಿದ್ದಾಳೆ ಅವಳು.

1875 ರ ಡಿಸೆಂಬರ್ ಮಾಹೆಯಲ್ಲಷ್ಟೇ ಸಂಸ್ಕೃತವನ್ನು ಕಲಿಯಲು ಮೊದಲು ಮಾಡಿದರೂ 1876 ರ ಸೆಪ್ಟೆಂಬರ್ ತಿಂಗಳ ಹೊತ್ತಿಗಾಗಲೇ ತೋರು ಮೇರಿಗೆ ಬರೆದ ಪತ್ರವೊಂದರಲ್ಲಿ ಹೇಳಿರುವ ಮಾತು ಆಶ್ಚರ್ಯವನ್ನುಂಟುಮಾಡುತ್ತದೆ. 'ಈಸಲ ಇನ್ನೊಂದು ಗೊಂಚಲನ್ನು ಕಟ್ಟಿ ತರುತ್ತೇನೆ ಎಂದು ಕೊಂಡಿದ್ದೇನೆ. ಈ ಗೊಂಚಲಾದರೊ ಫ್ರೆಂಚ್ ಹೊಲಗಳಲ್ಲಿ ಕಟ್ಟಿದ್ದಲ್ಲ. ಇದು ಸಂಸ್ಕೃತ ಭೂಮಿಯ ಫಲ. ನಾನು ಇನ್ನೂ ಈಗ ಎರಡು ತೆನೆಗಳನ್ನು ಮಾತ್ರ ಸಂಗ್ರಹಿಸಿದ್ದೇನೆ.'

'ಹಿಂದುಸ್ಥಾನದ ಲಾವಣಿಗಳು ಹಾಗೂ ಪುರಾಣ ಕಥೆಗಳು' ಅವಳ ಮರಣಾನಂತರ 1878 ರಲ್ಲಿ ಪ್ರಕಟವಾಯಿತು. ತೋರುವಿನ ದೃಷ್ಟಿಪಥದಲ್ಲಾದ ಬದಲಾವಣೆ ಇಲ್ಲಿ ಸ್ಪಷ್ಟವಾಗಿದೆ. ಫ್ರೆಂಚ್ ಹಾಗೂ ಇಂಗ್ಲಿಷ್ ಬಗೆಗಿದ್ದ ಒಲವು ಸಂಸ್ಕೃತದ ಕಡೆ ವಾಲಿದೆ. ತೋರು ಭಾರತದಲ್ಲಿ ಹೆಚ್ಚು ತಲ್ಲೀನಳಾಗಿದ್ದಾಳೆ. ಅವಳ ಕೃತಿಗಳಲ್ಲಿ ಅತ್ಯಂತ ಪರಿಪಕ್ವವಾದದ್ದು 'ಲಾವಣಿಗಳು'. ಕೃತಿಯ ವಸ್ತು ಭಾರತೀಯ. ಈ ಕೃತಿಯಲ್ಲಿ ಅವಳು ತನ್ನ ಹಿರಿಮೆಯನ್ನು ತೋರಿಸಿದ್ದಾಳೆ. ತೋರು ಇಲ್ಲಿ ಐರೋಪ್ಯ ಸಾಹಿತ್ಯದೊಡನೆ ಧೀರೋದಾತ್ತವಾಗಿ ಸ್ಪರ್ಧಿಸಿ ವಿಫಲಳಾಗಿಲ್ಲ. ಆದರೆ ಸ್ಫೂರ್ತಿಗಾಗಿ ತನ್ನ ನಾಡಿನ ಕಡೆಗೆ ತಿರುಗಿದ್ದಾಳೆ. 'ಪ್ರಹ್ಲಾದ' ಹಾಗೂ 'ಸಾವಿತ್ರಿ' ಈ ಕಥೆಗಳಲ್ಲಿ ಏಷ್ಯದ ಅಂತಃ ಪ್ರಜ್ಞೆಯನ್ನು ತೋರು ಒಳಹೊಕ್ಕು ನೋಡಿ ಪರಿಚಯಮಾಡಿಕೊಟ್ಟಿರುವಂತೆ ಯಾವ ಆಧುನಿಕ ಪೌರ್ವಾತ್ಯನೂ ಮಾಡಿಲ್ಲ. 'ಜೋಗಧ್ಯಉಮ' ಎಂಬ ಕಾಲ್ಪನಿಕ ಧಾರ್ಮಿಕ ಲಾವಣಿಯೂ ಅಷ್ಟೆ. ಈ ಕಥೆಗಳನ್ನು ಓದಿದಾಗ ತೋರು ತನ್ನ ಮಾತೃ ಜನಾಂಗದ ಯಾವ ಹಾಡುಗಳನ್ನು ಕೇಳಿ ಆನಂದಬಾಷ್ಪ ಸುರಿಸುತ್ತಿದ್ದಳೊ ಅವನ್ನು ತನಗೆ ತಾನೆ ಹೇಳಿಕೊಳ್ಳುತ್ತಿರುವಂತೆ ಕಾಣುತ್ತದೆ. ತೋರುವಿನ 'ಹಿಂದೂ' ಗುಣಗಳನ್ನು ಕುರಿತು ವಿಮರ್ಶಕರು ಮತ್ತೆ ಮತ್ತೆ ಬರೆದಿದ್ದಾರೆ. 'ಸಂಸ್ಕೃತಿಯ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು' ಎಂದು ಅವಳನ್ನು ಹೊಗಳಿದ್ದಾರೆ.

ತೋರು ತರುಣ ಪ್ರತಿಭಾನ್ವಿತೆ. ಇಂಗ್ಲೆಂಡ್ ಫ್ರಾನ್ಸ್ ದೇಶಗಳ ಪ್ರೇಮಿ. ಈ ಎರಡು ದೇಶಭಾಷೆಗಳಲ್ಲೂ ಪ್ರವೀಣೆ. ಆದರೆ ತನ್ನ ಪ್ರತಿಮಾವಿಧಾನದಲ್ಲಿ, ಯೋಚನಾ ಲಹರಿಯಲ್ಲಿ ವ್ಯಕ್ತಿತ್ವದಲ್ಲಿ ಮೂಲತಃ ಭಾರತೀಯಳು. ಭಾರತವನ್ನು ಬಿಟ್ಟರೆ ಅವಳಿಗೆ ಪ್ರಿಯವಾದ ದೇಶ ಫ್ರಾನ್ಸ್. ಇಂಗ್ಲೆಂಡಿನಲ್ಲಿ ಮಹಿಳೆಯರಿಗೆ ಭಾರತದಲ್ಲಿದ್ದ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವಿದ್ದುದರಿಂದ ಅಲ್ಲಿ ನೆಲೆಸಲು ಬಯಸಿದಳು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಬಂಗಾಳದ ಮಹಿಳೆಯರಲ್ಲನೇಕರು 'ಪರದಾ' ಪದ್ಧತಿಯನ್ನು ಅನುಸರಿಸುತ್ತಿದ್ದರು. ತಾನು ವಿದೇಶದಲ್ಲಿದ್ದಾಗ ಯಾವ ಸ್ವಾತಂತ್ರ್ಯವನ್ನು ಕಂಡು ಮೆಚ್ಚಿದ್ದಳೊ ಆ ಸ್ವತಂತ್ರ ವಾತಾವರಣಕ್ಕೆ ಈ ಪರದಾ ಪದ್ಧತಿ ಅಡ್ಡಿ ಎಂದು ತೋರು ಮನಗಂಡಳು. ತೋರು ಅಂತರರಾಷ್ಟ್ರೀಯ ಪ್ರಪಂಚದೊಳಗೆ ಹಾಸುಹೊಕ್ಕಾಗಿ ಸೇರಿ ತನ್ನ ಹಿಂದೂ ಹಿನ್ನೆಲೆಯೊಂದಿಗೆ ಕ್ರೈಸ್ತ ಧರ್ಮವನ್ನು ಸಮನ್ವಯಗೊಳಿಸಿದಳು. ಇದು ಬಹುಶಃ ಅವಳ ಅತ್ಯಂತ ಹಿರಿಯ ಸಾಧನೆ. ಆದರೆ ನಮಗಾದರೊ ಗಾಸ್ ಹೇಳಿರುವಂತೆ 'ಅವಳ ಬಾಲಿಶ ವಿಷಯಗಳೊಂದಿಗೆ ವಿಷ್ಣು ಶಿವ ಇವರಲ್ಲಿಯ ನಂಬಿಕೆಯೂ ಬದಿಗೊತ್ತಲ್ಪಟ್ಟು ಅದಕ್ಕಿಂತ ಪರಿಶುದ್ಧವಾದ ನಂಬಿಕೆಯೊಂದು ಅವಳಲ್ಲಿ ಮೂಡಿತು' ಎಂದೆನಿಸುವುದಿಲ್ಲ. ತನಗೆ ವೈಯಕ್ತಿಕವಾಗಿ ಹೆಚ್ಚು ತೃಪ್ತಿಯನ್ನು ಕೊಡುವ ಒಂದು ಧರ್ಮವನ್ನು ತಾನು ಮೈಗೂಡಿಸಿಕೊಂಡೆನೆಂದು ಅವಳಿಗೆ ಎನಿಸಿದರೂ ಅವಳೆಂದೂ ವಿಷ್ಣು ಶಿವ ಇವರನ್ನು ಬಾಲಿಶ ವಸ್ತುಗಳೆಂದಾಗಲಿ, ವಿಷಯವೆಂದಾಗಲಿ ಪರಿಗಣಿಸಲಿಲ್ಲ. ಹಿಂದೂ ದೇವತೆಗಳು, ನಾಯಕ ನಾಯಕಿಯರು ಇವರ ಬಗ್ಗೆ ತೋರುವಿಗೆ ಆಳವಾದ ಗೌರವವಿದ್ದುದರಿಂದಲೇ ಅವಳು ಹಿಂದೂ ಪುರಾಣಗಳತ್ತ ಒಲವಿನಿಂದ ತಿರುಗಿದಳು. ತೋರುವಿನ ಬಗ್ಗೆ ಬರೆದ ಪರಿಚಯಾತ್ಮಕ ಸ್ಮರಣ ಲೇಖನದಲ್ಲಿ ಗಾಸ್

ತಾನೇ 'ತೋರುವಿನ ಲಾವಣಿಗಳಲ್ಲಿ ವೇದ ಗಾಂಭೀರ್ಯವಿದೆ, ಮನೋಧರ್ಮದಲ್ಲಿ ಸರಳತೆಯಿದೆ. ಇವುಗಳಲ್ಲಿ ಸಣ್ಣತನವಾಗಲಿ, ಅಲ್ಪತೆಯಾಗಲಿ ಇಲ್ಲ' ಎಂದಿದ್ದಾನೆ. ವೇದಗಳಲ್ಲಿನ ಪ್ರಾಚೀನ ದೇವತೆಗಳ ಬಗೆಗೂ ಅವಳು ಆಸಕ್ತಿ ಹೊಂದಿದ್ದಳು.

ತೋರು ಫ್ರಾನ್ಸ್ ಹಾಗೂ ಇಂಗ್ಲೆಂಡ್ ದೇಶಗಳ ಸಂಸ್ಕೃತಿಯೊಂದಿಗೆ ಭಾರತೀಯ ಸಂಸ್ಕೃತಿಯನ್ನು ವಿಲೀನಗೊಳಿಸಿದ್ದಳು. 'ತನ್ನ ಸ್ವಯಂ ಪ್ರತಿಭೆಯಿಂದ ಇಂಗ್ಲೆಂಡಿನ ಮಹಾಕವಿ ಸಮೂಹದಲ್ಲಿ ಸ್ಥಾನಪಡೆವ ಹಕ್ಕು ಗಳಿಸಿದಳು.' ಅವಳ ಕುಶಲ ಕಲೆಗಾರಿಕೆ ಅದ್ಭುತವಾಗಿತ್ತಲ್ಲದೆ ಇಡೀ ವಿಶ್ವ ದೇವರ ಕುಟುಂಬ ಎಂಬುದನ್ನು ವಿಶ್ವಕ್ಕೆ ತೋರಿಸಿದಳು.

ಫ್ರೆಂಚ್ ಬರಹಗಾರ ಹಾಗೂ ವಿಮರ್ಶಕ ಜೇಮ್ಸ್ ಡಾರ್‌ಮೆಸ್‌ಟೆಟರ್ ಹೀಗೆ ಹೇಳಿದ್ದಾನೆ, 'ಬಂಗಾಳದ ಈ ಕುವರಿ ಅಸಾಧಾರಣ ಪ್ರತಿಭಾನ್ವಿತೆ. ಹುಟ್ಟಿನಿಂದ ಸಂಪ್ರದಾಯದಿಂದ ಹಿಂದು. ವಿದ್ಯಾಭ್ಯಾಸದಿಂದ ಆಂಗ್ಲಳು. ಅಂತರಂಗದಲ್ಲಿ ಫ್ರೆಂಚ್, ಆಂಗ್ಲ ಭಾಷೆಯಲ್ಲಿ ಕವಿ. ಫ್ರೆಂಚ್ ಭಾಷೆಯಲ್ಲಿ ಕಾದಂಬರಿಗಾರ್ತಿ. ತನ್ನ ಹದಿನೆಂಟನೆಯ ವಯಸ್ಸಿಗೇ ಆಂಗ್ಲ ಕಾವ್ಯದ ಮೂಲಕ ಭಾರತಕ್ಕೆ ಫ್ರೆಂಚ್ ಕವಿಗಳ ಪರಿಚಯ ಮಾಡಿಕೊಟ್ಟಳು. ಮೂರು ದೇಶಗಳ ಸಂಪ್ರದಾಯ, ಅಂತರಾತ್ಮಗಳ ಸಮನ್ವಯ ಅವಳು. ಅವಳ ಮೇಧಾಶಕ್ತಿ ಸಂಪೂರ್ಣವಾಗಿ ಅರಳಿ ಅವಳ ಪ್ರತಿಭೆಯ ಅರುಣೋದಯವಾಗಬೇಕಾದ ಕಾಲದಲ್ಲಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಕಾಲವಾದ ಈಕೆ ಸಾಹಿತ್ಯ ಚರಿತ್ರೆಯಲ್ಲೇ ಅನುಪಮ ವ್ಯಕ್ತಿ.'

೨. ಬಂಗಾಳದ ಹಿನ್ನೆಲೆ

ಬ್ರಿಟಿಷರು ಬಂಗಾಳವನ್ನು ಗೆದ್ದಾಗ ನಿರೀಕ್ಷಿಸಿದಷ್ಟು ಮಟ್ಟಿನ ವಿರೋಧವನ್ನು ಜನ ವ್ಯಕ್ತಪಡಿಸಲಿಲ್ಲ. ಈ ವಿಜಯದ ಪರೋಕ್ಷ ಫಲವೆಂದರೆ ಭಾವನೆಗಳಲ್ಲೂ ಆದರ್ಶಗಳಲ್ಲೂ ಉಂಟಾದ ಕ್ರಾಂತಿ. ಬಂಗಾಳ ಬ್ರಿಟನ್ ಇವು ಒಂದುಗೂಡಿದ್ದರಿಂದ ಅನೇಕ ಬಂಗಾಳಿಗಳಿಗೆ ನಿದ್ರಿಸುತ್ತಿದ್ದ ಭಾರತವನ್ನು ಎಚ್ಚರಗೊಳಿಸಲು ವಿದೇಶದಿಂದ ಪ್ರಭಾವಿತವಾದ ನವೋದಯವಾದರೂ ಆಗಲೇಬೇಕೆನಿಸಿತು. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ, ತೋರುವಿನ ಭಾವನೆಗಳ ಮೇಲೂ ಬರವಣಿಗೆಯ ಮೇಲೂ ಅಸಾಧಾರಣ ಪ್ರಭಾವ ಬೀರಿದ ಫ್ರಾನ್ಸಿನ ಮಹಾಕ್ರಾಂತಿ, ವಿಜ್ಞಾನದ ಮುನ್ನಡೆ, ಭಾರತೀಯರಿಗೆ ಒಮ್ಮೆಗೇ ಪರಿಚಯವಾದ ಆಂಗ್ಲ ಹಾಗೂ ಫ್ರೆಂಚ್ ಸಾಹಿತ್ಯಗಳ ಶ್ರೀಮಂತ ಪರಂಪರೆ, ವಾಸ್ತವಾಂಶಗಳನ್ನೂ ಗೋಚರಸಾಧ್ಯ ವಿಷಯಗಳನ್ನೂ ಮಾತ್ರ ಅಂಗೀಕರಿಸುವ ಪ್ರಮಾಣವಾದ, ಡಾರ್ವಿನ್ ತತ್ವ, ಪ್ರಯೋಜಕತಾವಾದ, ವಿಕ್ಟೋರಿಯನ್ ಜೀವನದ ಅಸಾಮಾನ್ಯ ಬೌದ್ಧಿಕತೆ, ಅದರ ಸುಧಾರಕತೆಯ ಸೊಗಸು ಇವೆಲ್ಲವೂ

ಭಾರತದ ಮೇಲೂ ಅದರಲ್ಲೂ ಬಂಗಾಳದ ಮೇಲೂ ನೇರವಾದ ಪ್ರಭಾವವನ್ನು ಬೀರಿದವು.

'ಆಧುನಿಕ ಭಾರತದ ತಂದೆ' ಎನಿಸಿ ಪ್ರೇರಕ ಶಕ್ತಿಯಾಗಿದ್ದ ರಾಜಾರಾಮ್ ಮೋಹನ್‌ರಾಯ ತನಗೆ ಯೂರೋಪಿನೊಡನಿದ್ದ ಸಂಪರ್ಕದ ಸಹಾಯದಿಂದ, ಭಾರತದ ಮೇಲಿದ್ದ ಅಪಾರ ಮಮತೆಯ ಬಲದಿಂದ ನಾಡಿನಲ್ಲಿ ನವ ಚೇತನವನ್ನು ತುಂಬಿದನು. ಅಲ್ಲದೆ ಸಾಹಿತ್ಯದಲ್ಲಿ ಪಾಶ್ಚಾತ್ಯ ಪೌರ್ವಾತ್ಯಗಳನ್ನು ಸಮ್ಮಿಳನಗೊಳಿಸುವ ಒಂದು ಹೊಸ ಜಾಡನ್ನೇ ಆರಂಭಿಸಿದನು. ಆತನ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳು, ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯದ ಬಗ್ಗೆ ಆತಂಕ, ಪಾಶ್ಚಾತ್ಯ ದೇಶಗಳಲ್ಲಿನ ಸ್ವಾತಂತ್ರ್ಯ ವಿಕಸನ ಚಟುವಟಿಕೆಗಳ ಬಗ್ಗೆ ಇದ್ದ ಆಸ್ಥೆ ಇವು ಭಾರತದ ಮೇಲೆ ನೇರಪರಿಣಾಮ ಬೀರಿದವು. ಈತ ಫ್ರಾನ್ಸಿನ ಸ್ವಾತಂತ್ರ್ಯ ಧ್ವಜವನ್ನು ಕಂಡು ಹಿರಿ ಹಿರಿ ಹಿಗ್ಗಿ ಎಷ್ಟೆತ್ತರ ಹಾರಿದನೆಂದರೆ ಬಿದ್ದು ಕಾಲುಮುರಿದು ಕೊಂಡನೆಂದು ಹೇಳುತ್ತಾರೆ. ಈತ ನಮ್ಮ ದೇಶದಲ್ಲಾದ ಧಾರ್ಮಿಕ ಹಾಗೂ ಸಾಹಿತಿಕ ಸುಧಾರಣೆಗೆ ನಾಂದಿ ಹಾಡಿದ. ಬಂಗಾಳದ ಬೌದ್ಧಿಕ, ಧಾರ್ಮಿಕ, ಸಾಮಾಜಿಕ ರಂಗಗಳಲ್ಲಾದ ನವೋದಯಕ್ಕೆ ಕೇಂದ್ರಬಿಂದುವಾಗಿದ್ದ.

1817 ರಲ್ಲಿ ಬಂಗಾಳದ ಹಲವು ಸುಧಾರಕರೂ ದಾನಿಗಳೂ ಒಟ್ಟುಗೂಡಿ ತಮ್ಮ ಆಂಗ್ಲ ಹಿತಚಿಂತಕರ ಸಹಾಯದಿಂದ ಹಿಂದೂ ಕಾಲೇಜನ್ನು ಸ್ಥಾಪಿಸಿದರು. ನೂರು ವಿದ್ಯಾರ್ಥಿಗಳಿದ್ದ ಈ ಕಾಲೇಜು ಪ್ರಥಮ ಆಂಗ್ಲೋ—ಬಂಗಾಳಿ ಸಂಸ್ಥೆ, ಬಂಗಾಳದ ಪುನರುತ್ಥಾನಕ್ಕೆ ತಮ್ಮ ಜೀವನವನ್ನೇ ಧಾರೆಯೆರದ ಪಾದ್ರಿಗಳಾದ ಕ್ಯಾರಿ, ವಾರ್ಡ್, ಮಾರ್ಷ್‌ಮನ್ ಇವರಿಂದ ಮರುವರುಷ ಸಿರಾಮ್‌ಪೋರ್‌ಕಾಲೇಜು ಆರಂಭವಾಯಿತು. ಡಾ॥ ಡಫ್ ಇದರ ಪ್ರಥಮ ಪ್ರಿನ್ಸಿಪಾಲರು. ಅನಂತರ ಡೇವಿಡ್ ಲೆಸ್ಟರ್ ರಿಚರ್ಡ್‌ಸನ್ ಈ ಮುಖ್ಯ ಹುದ್ದೆಗೆ ಬಂದರು. ಕ್ಯಾರಿ ದತ್‌ಮನೆತನದ ಹಿರಿಯರೂ ತೋರುವಿನ ಮುತ್ತಜ್ಜನೂ ಆದ ನೀಲಮಣಿ ದತ್ತ ಅವರ ಆಪ್ತ ಸ್ನೇಹಿತ. ನೀಲಮಣಿ ದತ್ತ ಬಂಗಾಳದಲ್ಲಿ ಬ್ರಿಟಿಷ್ ರಾಜ್ಯದ ಸ್ಥಾಪನೆಯಾದ ತರುವಾಯದ ಅಂದರೆ ಹದಿನೆಂಟನೆಯ ಶತಮಾನದ ಉತ್ತರಾರ್ಧದ ವಿದ್ಯಾವಂತ ಭಾರತೀಯರಲ್ಲಿ ಒಬ್ಬರು. ರಾಜಾರಾಮ್ ಮೋಹನ್‌ರಾಯ ಮೊದಲಾದವರೊಡನೆ ಈತನೂ ಪಾದ್ರಿಗಳ ಜೊತೆಯಲ್ಲಿ ಸರಾಗವಾಗಿ ಸಹಜವಾಗಿ ಬೆರೆಯುತ್ತಿದ್ದರು. ಪಾದ್ರಿಗಳ ಪ್ರಭಾವ ಭಾರತೀಯರ ಮೇಲೆ ಎಷ್ಟರಮಟ್ಟಿಗಾಯಿತೆಂದರೆ ನೂತನವಾಗಿ ಮೈದೋರಿದ ಬೌಧಿಕ ಚಟುವಟಿಕೆಗೂ ಕ್ರೈಸ್ತಧರ್ಮಕ್ಕೂ ನಿಕಟಸಂಪರ್ಕವೇರ್ಪಟ್ಟಿತು. ಬೈಬಲನ್ನು ಮೂಲದಲ್ಲಿ ಓದಬೇಕೆಂದು ಸ್ವತಃ ರಾಜಾರಾಮ್ ಮೋಹನ್‌ರಾಯನೇ ಹೀಬ್ರೂ ಹಾಗೂ ಗ್ರೀಕ್ ಭಾಷೆಗಳನ್ನು ಕಲಿತನು. ಪರಭಾಷೆಗಳನ್ನು ಕಲಿಯಬೇಕೆಂಬ ಹಂಬಲ ತಲೆದೋರಿತು. ಗ್ರೀಕ್, ಲ್ಯಾಟಿನ್, ಫ್ರೆಂಚ್ ಹಾಗೂ ಜರ್ಮನ್ ಭಾಷೆಗಳನ್ನು ಪ್ರಾಜ್ಞರು ನಿಷ್ಠೆಯಿಂದ ಕಲಿತರು.

ನೀಲಮಣಿದತ್ತನು ಕ್ಯಾರಿ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳಿಂದ ಬಿಡಿಸಿಕೊಂಡು ಬರಲು ನೆರವಾದ. (ಆ ಕಾಲಕ್ಕೆ ಪಾದ್ರಿಗಳು ಭಾರತಕ್ಕೆ ಬರಲು ಅಷ್ಟು ಪ್ರೋತ್ಸಾಹವಿರಲಿಲ್ಲ) ಅಲ್ಲದೆ ಈ ಪ್ರಸಿದ್ಧ ಪಾದ್ರಿಗೆ ತನ್ನ ಮನೆಯಲ್ಲಿ ಆಶ್ರಯವಿತ್ತ. ಕ್ಯಾರಿ

ಅಸಹಾಯಕನಾಗಿದ್ದ. ಪತ್ನಿಗೆ ಹುಚ್ಚು. ಮಕ್ಕಳಿಗೆ ಕಾಯಿಲೆ. ಹಿಂದೂ ಮಾನ್ಯನೊಬ್ಬ ತನಗೆ ಮಾಡಿದ ಸಹಾಯವನ್ನು ಆತನೆಂದಿಗೂ ಮರೆಯಲಿಲ್ಲ. ಮಾನಿಕ್ ತೊಲ ರಸ್ತೆಯಲ್ಲಿದ್ದ ನೀಲಮಣಿಯ ಮನೆ ರಾಮ್‌ಬಾಗನ್‌ನಲ್ಲಿ ಕ್ಯಾರಿ ನೆಮ್ಮದಿಯ ಆಶ್ರಯಪಡೆದ. ಈ ಮನೆಯೇ ಮುಂದೆ ತೋರುವಿನ ಮನೆಯಾಯಿತು. ನೀಲಮಣಿ ಸುಧಾರಿತ ಶ್ರೀಮಂತ ಮನೆತನಕ್ಕೆ ಸೇರಿದವನು. ಪೂಜೆ ಪುನಸ್ಕಾರಗಳನ್ನು ಹೇರಳವಾಗಿ ಮಾಡಿ, ದಾನಧರ್ಮಗಳನ್ನು ಯಥೇಚ್ಛವಾಗಿ ಮಾಡಿ ಕೆಲವೇ ಕಾಲದಲ್ಲಿ ಬಿಡಿಗಾಸಿಲ್ಲದವನಾದ. ನೀಲಮಣಿಗೆ ಇಂಥ ಸ್ಥಿತಿ ಬಂದಾಗ ಕ್ಯಾರಿ ಸಹಾಯ ಮಾಡಿದನೆಂದು ಹೇಳುತ್ತಾರೆ. ಹೀಗೆ ತೋರು ಹುಟ್ಟುವುದಕ್ಕೂ ಮೂರು ತಲೆಮಾರುಗಳು ಹಿಂದಿನದು ತೋರುವಿನ ಮನೆತನಕ್ಕೂ ಪಾದ್ರಿಗಳಿಗೂ ನಡುವಿನ ಬಾಂಧವ್ಯ.

ಆಂಗ್ಲ ಭಾಷೆಯಲ್ಲಿ ಕೃತಿ ರಚಿಸುವುದರ ಕಡೆಗೆ ಭಾರತೀಯರು ಬೇಗ ಆಕರ್ಷಿತರಾದರು. ಹೀಗೆ ಆಕರ್ಷಿತರಾಗಿ ಕಾವ್ಯವನ್ನು ರಚಿಸಿದ ಮೊದಲಿಗರಲ್ಲಿ ಹೆನ್ರಿ ಲೂಯಿ ವಿವಿಯನ್ ಡೆರೋಜಿಯೊ (1809-1831) ಕೂಡ ಒಬ್ಬ. ಗುಮಾಸ್ತನಾಗಿದ್ದ ಈತ ಹಿಂದೂ ಕಾಲೇಜಿನಲ್ಲಿ ಆಂಗ್ಲ ಅಧ್ಯಾಪಕನಾದ. ತಾಯಿ ಭಾರತೀಯಳು. ತಂದೆ ಪೋರ್ಚುಗೀಸ್. 'ಜಂಘೀರದ ಫಕೀರ ಹಾಗೂ ಇತರ ಕವನಗಳು' ಈತನ ಪ್ರಸಿದ್ಧ ಕವನ ಗುಚ್ಛ. ಆಂಗ್ಲ ಭಾಷೆಯಲ್ಲಿ ಕಾವ್ಯ ರಚಿಸಿದ ಮೊದಲಿಗರಲ್ಲಿ ಒಬ್ಬನಾದ ಇವನನ್ನು ಹಿಂದೂ ಕಾಲೇಜಿನ ಪ್ರಿನ್ಸಿಪಾಲನೂ, ಕಲ್ಕತ್ತೆಯ ಸಾಹಿತ್ಯ ಗೆಜೆಟಿನ ಸಂಪಾದಕನೂ ಆದ ಡೇವಿಡ್ ಲೆಸ್ಟರ್ ರಿಚರ್ಡ್ಸನ್ ಬಹಳ ಮಟ್ಟಿಗೆ ಪ್ರೋತ್ಸಾಹಿಸಿರಬೇಕು. ರಿಚರ್ಡ್ಸನ್ನನ 'ಸಾಹಿತ್ಯದ ಎಲೆಗೊಂಚಲು' ಬಂಗಾಳದ ಸಮಕಾಲೀನ ಬರಹಗಾರರ ಮೇಲೆ ಅಸಾಧಾರಣ ಪ್ರಭಾವ ಬೀರಿತು. 1874ರ ಡಿಸೆಂಬರ್ ತಿಂಗಳ ಬೆಂಗಾಲ್ ಮ್ಯಾಗಜೈನಿನಲ್ಲಿ ತೋರು ಡೆರೋಜಿಯೋನ ಬಗೆಗೊಂದು ಲೇಖನ ಬರೆದಳು. ಡೆರೋಜಿಯೋನನ್ನು ಅನುಸರಿಸಿದ ಕಾಶಿಪ್ರಸಾದ್ ಘೋಷ್ ಆಂಗ್ಲ ಭಾಷೆಯಲ್ಲಿ ಕಾವ್ಯ ರಚಿಸಿದ ಪ್ರಥಮ ಬಂಗಾಳಿ. 1830ರಲ್ಲಿ 'ಷೇರ್ ಮತ್ತು ಇತರ ಕವನಗಳು' ಸಂಕಲನವನ್ನು ಪ್ರಕಟಿಸಿದ. 1835ಕ್ಕೆ ಮೊದಲು ಆಂಗ್ಲ ಭಾಷೆಯಲ್ಲಿ ಕಾವ್ಯರಚಿಸಿದವರೆಂದರೆ ಮೋಹನ್‌ಲಾಲ್, ಹಸನ್ ಅಲಿ ಮತ್ತು ಪಿ. ರಾಜಗೋಪಾಲ್. 1841ರಲ್ಲಿ ರಾಜ್‌ನಾರಾಯಣ್ ದತ್ತ ತನ್ನ 'ಉಸ್‌ಮಿನ್, ಒಂದು ಅರೇಬಿಯದ ಕಥೆ'ಯನ್ನು ರಿಚರ್ಡ್ಸನ್ನನಿಗೆ ಅರ್ಪಿಸಿದ. ಆತ ಅಲಂಕಾರಿಕ ಶೈಲಿಯ ದ್ವಿಪದಿಯಲ್ಲಿ ಕಾವ್ಯ ರಚಿಸಿದ.

ಮೈಕೇಲ್ ಮಧುಸೂದನ ದತ್ತನೂ (1822-1873) ಹಿಂದೂ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ. ಕಾಶಿಪ್ರಸಾದ್, ರಾಜ್‌ನಾರಾಯಣ್ ಇಬ್ಬರೂ ಮೈಕೇಲ್‌ನಿಗಿಂತ ಹಿಂದೆ ಅದೇ ಕಾಲೇಜಿನಲ್ಲಿ ಓದಿದವರಾಗಿದ್ದರು. ಮೈಕೇಲ್ ರಿಚರ್ಡ್ಸನ್ನನ ಅಚ್ಚುಮೆಚ್ಚಿನ ಶಿಷ್ಯ. 1843ರಲ್ಲಿ ಕ್ರೈಸ್ತ ಮತಾವಲಂಬಿಯಾಗಿ ಕೆಲವು ಕಾಲ ಕಲ್ಕತ್ತೆಯ ಬಿಷಪ್ ಕಾಲೇಜಿನಲ್ಲಿದ್ದು ಅನಂತರ 1849ರಲ್ಲಿ ಮದರಾಸಿಗೆ ಹೋದ. ಮೊದಲು ಆಂಗ್ಲ ಭಾಷೆಯಲ್ಲಿ ಬರೆದರೂ ಅನಂತರ ತನ್ನ ಮಾತೃ ಭಾಷೆಯಲ್ಲಿ ಬರೆಯಲಾರಂಭಿಸಿ ಬಂಗಾಳಿಯಲ್ಲಿ ಅತ್ಯಂತ ಶ್ರೇಷ್ಠ ಕವಿ ಹಾಗೂ ನಾಟಕಕಾರನೆನಿಸಿದ.

1876 ರಲ್ಲಿ ಗೆಳತಿ ಮೇರಿ ಮಾರ್ಟಿನಳಿಗೆ ಬರೆದ ಪತ್ರದಲ್ಲಿ ತೋರು ಹೀಗೆ ಬರೆದಿದ್ದಾಳೆ: 'ಬೆಂಗಾಲೀ ಎಂಬ ಪತ್ರಿಕೆ ನನ್ನ ಕವನ ಸಂಕಲನವನ್ನು ವಿಮರ್ಶಿಸುತ್ತ ನನ್ನ ಸಂಸ್ಕೃತಿಯನ್ನು ಪ್ರಶಂಸಿಸಿದೆ. 'ನಮ್ಮಲ್ಲಿನ ಅತ್ಯಂತ ವಿದ್ಯಾವಂತರಲ್ಲೂ ಕಾಣಲು ಸಿಗದ ಅಪರೂಪವಾದ ಸಂಸ್ಕೃತಿ' ಎಂದು ಹೇಳುತ್ತ ನನ್ನನ್ನು ಮೈಕೇಲ್ ಮಧುಸೂದನ ದತ್ತನ ಕುಟುಂಬದವಳೆಂದು ತಪ್ಪಾಗಿ ಬರೆದಿದೆ. ಈ ಪತ್ರಿಕೆಯಲ್ಲಿ ಹೆಸರಿಸಿರುವ ಮೈಕೇಲ್ ಮಧುಸೂದನ ದತ್ತರಿಗೂ ನನಗೂ ಯಾವ ಸಂಬಂಧವೂ ಇಲ್ಲ' ಎಂದಿದ್ದಾಳೆ. ಮೈಕೇಲ್ ಜೆಸ್ಸೂರ್ ಜಿಲ್ಲೆಯ ಸಗರ್‌ದರಿ ಹಳ್ಳಿಯವರು.

1851 ರಲ್ಲಿ ತೋರುವಿನ ತಂದೆಯ ಸಹೋದರ ಹರಚಂದ್ರ ಸಣ್ಣದೊಂದು ಕವನ ಸಂಕಲನವನ್ನೂ ಜೊತೆಗೆ ತಾತ್ವಿಕ, ನೈತಿಕ, ಕಾವ್ಯಾತ್ಮಕ ಬರವಣಿಗೆ ಎಂಬ ಕೃತಿಯನ್ನೂ ಪ್ರಕಟಿಸಿದ. ಗಿರೀಷ್ ಚಂದ್ರ ಎಂಬ ಇನ್ನೊಬ್ಬ ಸಹೋದರ 'ಚೆರಿ ಬ್ಲಾಸಮ್ಸ್' ಎಂಬ ಕೃತಿ ಬರೆದ. ಡಿ. ಎಫ್. ಎ. (ದತ್ ಫ್ಯಾಮಿಲಿ ಆಲ್ಬಂ—ದತ್ ಕುಟುಂಬ ಸಂಗ್ರಹ) ಎಂದು ಪ್ರಸಿದ್ಧವಾಗಿರುವ ಸಂಕಲನಕ್ಕೆ ಈ ಲೇಖಕರು ಮುಂದೆ ಲೇಖನಗಳನ್ನು ಬರೆದರು. ಇವನ್ನು 1920 ರಲ್ಲಿ ತೋರುವಿನ ತಂದೆ ಗೋವಿಂದ ಚಂದ್ರ ದತ್ತ ಪ್ರಕಟಿಸಿದನು. ಲಂಡನ್ನಿನಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಆತನ ಹಾಗೂ ಆತನ ಸೋದರಳಿಯ ಉಮೇಶ ಚಂದ್ರ ದತ್ತನ ಕವನಗಳು ಇದ್ದವು. ಇವನ್ನು ಲಾಂಗ್‌ಮನ್ಸ್ ಗ್ರೀನ್ ಸಂಸ್ಥೆ ಪ್ರಕಟಿಸಿತು. ಈ ಕೃತಿ ಅಷ್ಟೇನೂ ಮೆಚ್ಚುಗೆ ಗಳಿಸದಿದ್ದರೂ ಬಂಗಾಳದ ಬರಹಗಾರರನ್ನು ಆಕರ್ಷಿಸದೆ ಹೋಗಲಿಲ್ಲ. ಆದರೆ ಈ ಕೃತಿ ಆಂಗ್ಲ ಭಾಷೆಯಲ್ಲಿ ಕಾವ್ಯ ಬರೆಯಬೇಕೆನ್ನುವ ದತ್ತ ಕುಟುಂಬದ ಹಂಬಲವನ್ನು ಪ್ರಕಟಮಾಡಿದ್ದು ಹೊರತು ಇನ್ನೇನನ್ನೂ ಸಾಧಿಸಲಿಲ್ಲ. ಆದರೆ ಅದು ಬಂಗಾಳಿಗಳು ಆಂಗ್ಲ ಭಾಷೆಯಲ್ಲಿ ಬರೆದ ಕವನಗಳ ಮೊದಲ ಸಂಕಲನ. ಅಲ್ಲದೆ ಆಂಗ್ಲ ಭಾಷೆಯಲ್ಲಿ, ಸಂಪ್ರದಾಯ ಶೈಲಿಯಲ್ಲಿ ಬರೆದ ಕವನಗಳ ಪ್ರಥಮ ಪ್ರಾತಿನಿಧಿಕ ಕಾವ್ಯಪರಿಚಯ. ಇದರಂತೆಯೇ ಮೈಕೇಲ್ ಮಧುಸೂದನ ದತ್ತನ 'ಬಂದಿನಿ'. ದತ್ತ ಫ್ಯಾಮಿಲಿ ಆಲ್ಬಮಿನಲ್ಲಿ ಅರುವಿನ ಪದ್ಯಗಳಾಗಲಿ ತೋರುವಿನ ಕವನಗಳಾಗಲಿ ಇಲ್ಲ. ಆ ಕಾಲಕ್ಕೆ ಇಂಗ್ಲೆಂಡಿನಲ್ಲಿದ್ದ ಅರುವಾಗಲಿ ತೋರುವಾಗಲಿ ಕಾವ್ಯರಚನೆಯ ಬಗ್ಗೆ ಅಷ್ಟಾಗಿ ಯೋಚಿಸಿರಲಿಲ್ಲವೇನೊ. 1873 ರಲ್ಲಿ ಭಾರತಕ್ಕೆ ಹಿಂದಿರುಗಿ ಬಂದಮೇಲೆಯೇ ಅವರು ಕಾವ್ಯರಚನೆಯ ಬಗ್ಗೆ ಯೋಚಿಸಿದ್ದು. ಅವರು ಭಾರತಕ್ಕೆ ಮರಳಿದ ಕೂಡಲೆ ಬೆಂಗಾಲ್ ಮ್ಯಾಗಜೈನಿನಲ್ಲಿ ಬರೆಯಲಾರಂಭಿಸಿದರು. ಆದರೆ ಇಂಗ್ಲೆಂಡಿನಲ್ಲಿ ಇದ್ದಾಗಲೆ ಫ್ರೆಂಚ್ ಪದ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದ್ದರು.

ಡಿ. ಎಫ್. ಎ. ನಲ್ಲಿರುವ 197 ಕವನಗಳಲ್ಲಿ ಗೋವಿಂದ ಚಂದ್ರನದು 66 ಕವನಗಳು. ಉಮೇಶ ಚಂದ್ರನದು 73. ಗೋವಿಂದನದು ಹದಿನೇಳನೆಯ ಶತಮಾನದ ಶೈಲಿ. ಈ ಆಲ್ಬಮ್ ಪ್ರತಿಭಾವಂತ ಕುಟುಂಬವೊಂದರ ಸ್ಮಾರಕವಾಗಿ ಮಾತ್ರವಲ್ಲದೆ ಕಲ್ಕತ್ತೆಯಲ್ಲಿ ಆಂಗ್ಲ ಭಾಷೆಯ ಮೂಲಕ ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿತ್ತ ಆಂಗ್ಲ ಪ್ರಾಧ್ಯಾಪಕರ ವ್ಯಕ್ತಿತ್ವದ ಪ್ರಭಾವಕ್ಕೂ ನಿದರ್ಶನ. ಈ ಆಲ್ಬಮ್ ಬಗ್ಗೆ ತೋರುವಿಗೆ ಅಪಾರ ಮೆಚ್ಚುಗೆ. 'ಕ್ವೀನ್' ಪತ್ರಿಕೆ ತೋರುವಿನ 'ಗೊಂಚಲು' ಸಂಕಲನದ ಬಗ್ಗೆ ಮೇರಿ ಮಾರ್ಟಿನಳ ವಿಮರ್ಶೆಯನ್ನು ಪ್ರಕಟಿಸದೆ ಹೋದಾಗ ತೋರು ಹೀಗೆ ಬರೆದಳು.

'ಕ್ವೀನ್' ಪತ್ರಿಕೆ ನಿನ್ನ ವಿಮರ್ಶೆಯನ್ನು ಸ್ವೀಕರಿಸಲಿಲ್ಲವೆಂದು ಕೇಳಿ ಬೇಸರವಾಯಿತು. ಆದರೆ ಚಿಂತಿಸಬೇಡ. ಕ್ವೀನ್ ಬಗ್ಗೆ ನನಗೆ ಎಂದಿನಿಂದಲೂ ಅಂತಹ ಆದರವೇನೂ ಇಲ್ಲ. ಅದು ದತ್ ಫ್ಯಾಮಿಲಿ ಆಲ್ಬಮನ್ನು ಕುರಿತೂ ಕೂಡ ಅಷ್ಟೇನೂ ಮೆಚ್ಚುಗೆ ವ್ಯಕ್ತಪಡಿಸಲಿಲ್ಲ.' ಈ ಕುಟುಂಬದ ಇನ್ನೊಬ್ಬ ಕವಿ ಶಶಿಚಂದ್ರದತ್ತ ರಮೇಶ ಚಂದ್ರ ದತ್ತನ ಚಿಕ್ಕಪ್ಪ. 1878 ರಲ್ಲಿ ಈತ 'ಸುಮೇರು ದರ್ಶನ ಹಾಗೂ ಇತರ ಕವನಗಳು' ಎಂಬ ಕೃತಿಯನ್ನು ಪ್ರಕಟಿಸಿದ. ದತ್ತ ಕುಟುಂಬದ ಬರಹಗಾರರಲ್ಲಿ ರಮೇಶಚಂದ್ರದತ್ತ ಅತ್ಯಂತ ಪ್ರಸಿದ್ಧ. ತೋರುವಿನ ಬಂಧುವಾದ ರಮೇಶ್‌ದತ್ತಕುಟುಂಬಕ್ಕೆ ಹತ್ತಿರ ವಾಗಿದ್ದು ತರು ಅರು ಇವರ ಪ್ರತಿಭೆಯನ್ನು ಬಹಳವಾಗಿ ಮೆಚ್ಚಿಕೊಂಡಿದ್ದ.

ಹತ್ತೊಂಬತ್ತನೆಯ ಶತಮಾನ ಆಂಗ್ಲ ಭಾಷೆಯನ್ನು ಭಾರತಕ್ಕೆ ಪರಿಚಯ ಮಾಡಿ ಕೊಟ್ಟಿದ್ದೇ ಅಲ್ಲದೆ ಬೌದ್ಧಿಕ ಸುಧಾರಣೆ ಹಾಗೂ ಧಾರ್ಮಿಕ ಪುನರುಜ್ಜೀವನ ಇವುಗಳ ಫಲೋತ್ಪಾದನೆಗೂ ಕಾರಣವಾದ ಶತಮಾನ. ಇದೇ ಕಾಲದಲ್ಲಿ ಆಂಗ್ಲರೂ ಸಂಸ್ಕೃತ ಸಾಹಿತ್ಯದ ಆಳವಾದ ಅಧ್ಯಯನಕ್ಕೆ ತೊಡಗಿ ಭಾರತೀಯ ವಿದ್ವತ್ತಿನ ಆಳ ಅಪಾರಗಳನ್ನು ಕಂಡು ಆಕರ್ಷಿತರಾದರು. ಇದಕ್ಕೂ ಮೊದಲು ಕಲ್ಕತ್ತೆಯಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿಯ ಜನನ, ಸರ್ ವಿಲಿಯಂ ಜೋನ್ಸ್, ಜಾನ್ ವಿಲ್‌ಸನ್, ಸರ್ ಎಡ್ವಿನ್ ಆರ್ನಾಲ್ಡ್, ಸರ್ ವಿಲಿಯಂ ಹಂಟರ್ ಇವರೇ ಮೊದಲಾದವರಿಂದ ಭಾರತೀಯ ಮಹಾ ಕಾವ್ಯಗಳ ಆಳವಾದ ಅಧ್ಯಯನ ಇವು ಪಾಶ್ಚಾತ್ಯರಲ್ಲಿ ಉಜ್ವಲವಾದ ಪ್ರಾಚೀನ ಭಾರತದ ಬಗ್ಗೆ ಅಪಾರ ಉತ್ಸಾಹವನ್ನು ಹುಟ್ಟಿಸಿದವು. ಇಂತಹ ಫಲವತ್ತಾದ ನವೋದಯ ಕಾಲದಲ್ಲಿ ಬಾಳಿದ ತೋರು ತನ್ನ ಕಾಲದಲ್ಲಿ ಮಾತ್ರವಲ್ಲದೆ ಜರುಗಿದ ನೂರು ವರುಷಗಳಾದ ಮೇಲೂ ಮಿನುಗುತ್ತಿರುವ ತಾರೆಯಾಗಿದ್ದಾಳೆ.

೩. ರಾಂಬಾಗಾನಿನ ದತ್ತ ಮನೆತನ

ಬಂಗಾಳದ ಬರ್‌ದ್ವಾನ್ ಜಿಲ್ಲೆಯ ಅಜಾಪುರದಿಂದ ಬಂದವರು ದತ್ತ ಮನೆತನದವರು. ಜಾತಿಯಿಂದ ಕಾಯಸ್ಥರು. 1757 ಜನವರಿ ಮೂರರಂದು ನೀಲಮಣಿಯ ಜನನ. ಅಸಾಧಾರಣ ವ್ಯಕ್ತಿಯಾದ ಈತ ತನ್ನ ವಂಶದವರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ. ಈತನ ಮನೆತನದ ಕೆಲವರು ಬರ್‌ದ್ವಾನಿನಲ್ಲಿ ನೆಲೆಸಿದರೂ ನೀಲಮಣಿಯ ತಂದೆ ಕಲ್ಕತ್ತೆಯ ರಾಂಬಾಗಾನಿಗೆ ತೆರಳಿ ಅಲ್ಲಿ ವಿಶಾಲ ಮನೋಭಾವದ ಪ್ರತಿಭಾವಂತರೆಂದು ಹೆಸರು ಪಡೆದರು. ಈತನ ಕೊಡುಗೈ ಹಾಗೂ ಆತಿಥ್ಯ ಅನೇಕರನ್ನು ಇವರ ಮನೆಗೆ ಕರೆತಂದಿತು. ಆತನ ಹೃದಯವೈಶಾಲ್ಯಕ್ಕೆ ಮಾರುಹೋಗಿ ಸ್ನೇಹಿತರು ಆತನನ್ನು ಸುತ್ತುವರಿದಿರುತ್ತಿದ್ದರು.

ನೀಲಮಣಿಗೆ ಮೂರು ಜನ ಗಂಡು ಮಕ್ಕಳು. ರಾಸಮಯ, ಹರೀಷ ಮತ್ತು ಪೀತಾಂಬರ. ಗೋವಿಂದಚಂದ್ರ ರಾಸಮಯನ ಮೂರನೆಯ ಮಗ, ತೋರುವಿನ ತಂದೆ. ಅವನ ಉಳಿದ ಮಕ್ಕಳು ಕೃಷ್ಣಚಂದ್ರ, ಕೈಲಾಸಚಂದ್ರ ಹರಚಂದ್ರ ಮತ್ತು ಗಿರೀಶ್‌ಚಂದ್ರ. ಪೀತಾಂಬರನಿಗೆ ಇಬ್ಬರು ಗಂಡುಮಕ್ಕಳು, ಈಶಾನ್‌ಚಂದ್ರ ಮತ್ತು ಶಶಿಚಂದ್ರ. ಪ್ರಸಿದ್ಧ ಬರಹಗಾರ ರಮೇಶಚಂದ್ರದತ್ತ ಈಶಾನನ ಮಗ. ರಾಂಬಾಗಾನಿನ ಬಳಿ ರಮೇಶಚಂದ್ರದತ್ತನ ಮನೆ ಈಗಲೂ ಇದೆ, ಬಾಗಿಲಿನಲ್ಲಿ ಈ ನುಡಿಗಳನ್ನು ಕೆತ್ತಲಾಗಿವೆ.

'ಆರ್. ಸಿ. ದತ್, ಐ. ಸಿ. ಎಸ್. ಸಿ.ಐ.ಇ. ಪ್ರಸಿದ್ಧ ಬರಹಗಾರರಾದ ಇವರು ಈ ಮನೆಯಲ್ಲಿ 1848-1872 ರ ಅವಧಿಯಲ್ಲಿ ವಾಸಮಾಡಿದರು.' ರಮೇಶ ಚಂದ್ರ ದತ್ತರ ಸೋದರಳಿಯ ಅಶೋಕ್ ದತ್ತ ಈಗಲೂ ಅದೇ ಮನೆಯಲ್ಲಿ ವಾಸವಾಗಿದ್ದಾರೆ.

ತೋರುವಿನ ತಾತ ರಾಸಮಯದತ್ತ ಆಂಗ್ಲ ಸಾಹಿತ್ಯದ ಉತ್ಸಾಹೀ ವಿದ್ಯಾರ್ಥಿ ಹಾಗೂ ಅರ್ಥ ಶಾಸ್ತ್ರಜ್ಞ. ಆಂಗ್ಲ ಭಾಷೆಯ ಬಗ್ಗೆ ಈತನಿಗಿದ್ದ ಉತ್ಸಾಹಕ್ಕೆ ಪ್ರೋತ್ಸಾಹ ನೀಡಿ ಆತ ಪಡೆದಿದ್ದ ಪಾಂಡಿತ್ಯವನ್ನು ಇತರ ಬಂಗಾಳಿಗಳಿಗೂ ಹರಡಲು ಬ್ರಿಟಿಷರು ಪ್ರೋತ್ಸಾಹಿಸಿದರು. ಹಿಂದೂ ಕಾಲೇಜ್ ಸಮಿತಿಯ ಗೌ॥ ಕಾರ್ಯದರ್ಶಿಯ ಸ್ಥಾನವನ್ನು ಕೊಟ್ಟರು. ಮುಂದೆ ಸಣ್ಣ ಕಾರಣಗಳ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ಅನಂತರ ಬೇಡಿಕೆಗಳ ನ್ಯಾಯಾಲಯದ ಕಮಿಷಿನರ್ ಆದನು. ರಮೇಶ್‌ಚಂದ್ರ ರಾಸಮಯನ ಬಗ್ಗೆ ಹೀಗೆ ಹೇಳಿದ್ದಾನೆ: 'ಈತನ ಮನೆಯಲ್ಲಿ ಆಂಗ್ಲ ಪುಸ್ತಕಗಳ ಅಮೂಲ್ಯ ಸಂಗ್ರಹವಿತ್ತು. ಅಲ್ಲದೆ ತನ್ನ ಮಕ್ಕಳಲ್ಲಿ ಆಂಗ್ಲ ಸಾಹಿತ್ಯದ ಬಗ್ಗೆ ಅಗಾಧ ಒಲವನ್ನು ಮೂಡಿಸಿದ್ದನು. ಈ ಒಲವನ್ನು ಆತನ ಮೊಮ್ಮಕ್ಕಳಾದ ಅರು, ತೋರು ಇವರೂ ಪಡೆದರು.' ರಾಸಮಯ ತನ್ನ ತಂದೆಯಂತೆ ಪೂಜೆ ಪುನಸ್ಕಾರಗಳಿಗಾಗಿ ಅಪಾರವಾಗಿ ವೆಚ್ಚಮಾಡುತ್ತಿರಲಿಲ್ಲ. ಇದರಿಂದಾಗಿ ಸಂಪ್ರದಾಯಬದ್ಧ ಬ್ರಾಹ್ಮಣರು ಈತನನ್ನು ಇಷ್ಟಪಡುತ್ತಿರಲಿಲ್ಲ. ತೋರು ಹುಟ್ಟುವುದಕ್ಕೆ ಎರಡು ವರುಷ ಮೊದಲು 1854 ಮೇ14 ರಂದು ಈತ ಕಾಲವಾದ. ಈತ ಬೈಬಲ್ ಓದಿ ತನ್ನ ಮನೆಯವರೆಲ್ಲ ಬೈಬಲ್ಲಿನ ಪ್ರಾರ್ಥನೆಗಳನ್ನು ಬಂಗಾಳಿಯಲ್ಲಿ ಬರೆಯಬೇಕೆಂದು ಒತ್ತಾಯಪಡಿಸುತ್ತಿದ್ದ. ಸ್ಕಾಟನ ವಿವರಣೆ ಅವರಿಗೆ ಮಾರ್ಗದರ್ಶಿ.

ದತ್ತರ ಮನೆತನ ಕ್ರೈಸ್ತಮತಾವಲಂಬಿಯಾದ ಕಥೆ ಸ್ವಾರಸ್ಯಪೂರ್ಣವಾಗಿದೆ. 1854 ಜೂನ್ 29 ರಂದು ಎಸ್. ಡಬ್ಲ್ಯೂ. ಮ್ಯಾಕೆ ಎಂಬಾತ ಬರೆದ ಪತ್ರವೊಂದರಲ್ಲಿ ಇದರ ಬಗ್ಗೆ ವಿವರಣೆಯಿದೆ. ರಾಸ್‌ಮಯ್ ಕಾಲವಾದಾಗ ಆತನನ್ನು ಸಂಸ್ಕಾರ ಮಾಡಲು ಒಯ್ದರು. ಆಗ ಮಗ ಕೃಷ್ಣ ಅಸ್ವಸ್ಥನಾದ. ಅಲ್ಲದೆ ಜ್ವರ ಬಂದು ಆತ ಶೀಘ್ರದಲ್ಲೇ ಕಾಲವಾದ. ಈತ ಕಾಲವಾದಮೇಲೆ ಈತನ ಕೊನೆಯ ತಮ್ಮ ಗಿರೀಶ್ ಓಗಿಲ್‌ವಿ ಟೆಂಪಲ್ ಎಂಬ ಪಾದ್ರಿಗೆ ಹೇಳಿ ಕಳುಹಿಸಿದ. ಮ್ಯಾಕೆಗೆ ಅನಾರೋಗ್ಯವಾಗಿದ್ದ ಕಾರಣ ಹೋಗಲಾಗಲಿಲ್ಲ. ಆದರೆ ಎವರ್ಟ್ ಎಂಬಾತನನ್ನು ಓಗಿಲ್‌ವಿ ಟೆಂಪಲನ ಜೊತೆಯಲ್ಲಿ ಗಿರೀಶನ ಮನೆಗೆ ಹೋಗಿ ಆತನನ್ನೂ ಆತನ ಸಹೋದರನನ್ನೂ ನೋಡಿ ಬನ್ನಿರೆಂದು ಹೇಳಿ ಕಳುಹಿಸಿದ. ತನ್ನ ಸಹೋದರ ಕೃಷ್ಣ ಕಾಲವಾಗುವ ಮುನ್ನ ಸ್ವರ್ಗದ

ನೋಟ ಕಂಡು ತಾನು ಕ್ರೈಸ್ತ ಮತಾವಲಂಬಿಯಾಗಲು ಬಯಸಿದನೆಂದೂ ಆದರೆ ಸಾಯುತ್ತಿದ್ದ ಆತನ ಬಳಿಗೆ ಪಾದ್ರಿಗಳನ್ನು ಕರೆತರುವುದಕ್ಕೆ ವಿರೋಧವಿದ್ದಿತಾದ್ದರಿಂದ ತಾನು ಹಿಂದುವಾದರೂ ಕ್ರೈಸ್ತ ತ್ರಿಮೂರ್ತಿಗಳ ಹೆಸರಿನಲ್ಲಿ ತಾನೇ ಕೃಷ್ಣನಿಗೆ ಕ್ರೈಸ್ತ ಮತ ದೀಕ್ಷೆಯನ್ನು ಕೊಟ್ಟನೆಂದೂ ಗಿರೀಶ್ ಪಾದ್ರಿಗಳಿಗೆ ಹೇಳಿದ. ಕೃಷ್ಣ ತನ್ನ ಕುಟುಂಬದವರನ್ನೆಲ್ಲ ಬಳಿಗೆ ಕರೆದು ಮರಣದ ಮುನ್ನ ಕ್ರಿಸ್ತನಲ್ಲಿ ತನ್ನ ನಂಬುಗೆಯನ್ನು ವ್ಯಕ್ತಪಡಿಸಿ ತನ್ನ ಕುಟುಂಬದವರನ್ನೆಲ್ಲ ಕ್ರೈಸ್ತ ಮತಾವಲಂಬಿಗಳಾಗುವಂತೆ ಹೇಳಿ ಕಾಲವಾಗಿದ್ದ.

ತಂದೆ ಹಾಗೂ ಹಿರಿಯಣ್ಣನ ಮರಣಾನಂತರ ಉಳಿದ ಅಣ್ಣತಂಮ್ಮಂದಿರು ಕ್ರೈಸ್ತ ಮತಾವಲಂಬಿಗಳಾಗುವುದೇ ಬೇಡವೇ ಎಂಬುದನ್ನು ಚರ್ಚಿಸಿದರೆಂದು ಡಾ॥ ಮ್ಯಾಕೆ ಹೇಳಿದ್ದಾರೆ. ಹೀಗೆ ಮತಾಂತರ ಹೊಂದುವುದು ಕುಟುಂಬದ ಮಹಿಳೆಯರಿಗೆ ಇಷ್ಟವಿರಲಿಲ್ಲ. ಆದರೆ ಗಂಡಸರು ಹೇಗೆ ಹೇಳಿದರೆ ಹಾಗೆ ಎಂದರು ಅವರು. 1862 ರಲ್ಲಿ ದತ್ ಮನೆತನ ಕ್ರೈಸ್ತ ಧರ್ಮವನ್ನು ಸ್ವೀಕರಿಸಿತು. ಇದಕ್ಕೆ ಎಂಟುವರುಷ ವಿಳಂಬವಾಗಲು ದತ್ತ ಮನೆತನದ ಹೆಣ್ಣುಮಕ್ಕಳಿಗೂ ಹಿಂದೂ ಸಮಾಜಕ್ಕೂ ಈ ಮತಾಂತರ ಇಷ್ಟವಿಲ್ಲದೆ ಇದ್ದುದೇ ಕಾರಣವಿರಬೇಕು.

ಗೋವಿಂದಚಂದ್ರ, ಕ್ಷೇತ್ರಮಣಿ ಎಂಬಾಕೆಯನ್ನು ವಿವಾಹವಾಗಿದ್ದನು. ಈಕೆ ಬೃಂದಾವನಮಿತ್ರನ ಮಗಳು. ಬಂಗಾಳಿಯಲ್ಲೂ ಹಿಂದೂ ಕಾವ್ಯೇತಿಹಾಸ ಪುರಾಣಗಳಲ್ಲೂ ಈಕೆ ಪ್ರವೀಣೆ. ಕ್ಷೇತ್ರಮಣಿ ಹೇಳುತ್ತಿದ್ದ ಹಾಡುಗಳು, ಕಥೆಗಳು ತೋರುವಿನಲ್ಲಿ ಪ್ರಾಚೀನ ಭಾರತದ ಬಗ್ಗೆ ಆಸಕ್ತಿ ಹುಟ್ಟಿಸಿದವು. ತೋರು ತನ್ನ ಫ್ರೆಂಚ್ ಗೆಳತಿ ಕ್ಲಾರಿಸ್ಸೆ ಬಾದರ್‌ಗೆ ಈ ರೀತಿ ಬರೆದಿದ್ದಾಳೆ. 'ಸಾಯಂಕಾಲ ನಮ್ಮ ತಾಯಿ ನಮ್ಮ ನಾಡಿನ ಹಳೆಯ ಹಾಡುಗಳನ್ನು ಹಾಡುವಾಗ ನಾನು ಸಾಮಾನ್ಯವಾಗಿ ಅತ್ತುಬಿಡುತ್ತೇನೆ.'

1862 ರಲ್ಲಿ ಗೋವಿಂದಚಂದ್ರ ಹಾಗೂ ದತ್ ಕುಟುಂಬದ ಇತರ ಗಂಡುಮಕ್ಕಳ ಅವರ ಪತ್ನಿಯರು ಕ್ರೈಸ್ತ ಮತಾವಲಂಬಿಗಳಾದರು. ಆದರೂ ಗೋವಿಂದಚಂದ್ರನ ಪತ್ನಿ ಕ್ಷೇತ್ರಮಣಿಯೂ ಉಳಿದ ಹೆಣ್ಣು ಮಕ್ಕಳೂ ತಮ್ಮ ಹಿಂದೂ ಆಚಾರ ವಿಚಾರವನ್ನು ಬಿಡಲಿಲ್ಲ. ಆದರೆ ಕಾಲಾನಂತರ ಕ್ಷೇತ್ರಮಣಿ ಅತ್ಯಂತ ಶ್ರದ್ಧಾವಂತ ಕ್ರೈಸ್ತಳಾದದ್ದೇ ಅಲ್ಲದೆ ಆಕೆಯ ಇಡೀ ಕುಟುಂಬ ಅತ್ಯಂತ ಶ್ರದ್ಧೆಯಿಂದ ಕ್ರೈಸ್ತ ಧರ್ಮವನ್ನು ಪಾಲಿಸಿತು. ಆದರೆ ಮೊದಮೊದಲು ಈ ಮತಾಂತರದಿಂದ ಪತ್ನಿಗೂ ತನಗೂ ವಿರಸವಾಗಿ ತಾವು ದೂರವಾಗಬೇಕಾಗಬಹುದೇನೊ ಎಂಬ ಭಯ ಗೋವಿಂದಚಂದ್ರನನ್ನು ಕಾಡಿತು. ಆಗ ಬರೆದ ಒಂದು ಕವನ ದತ್‌ಫ್ಯಾಮಿಲಿ ಆಲ್ಬಮಿನಲ್ಲಿದೆ. ಅದರ ಮೊದಲಭಾಗ ಹೀಗಿದೆ:

'ಬೇಡ — ಹೀಗೆ ಹೊರಟು ಹೋಗಬೇಡ. ಒಂದು ನಿಮಿಷ ನಿಲ್ಲು.
ತಳ್ಳಬೇಡ ದೂರ ನನ್ನ ಅಸಡ್ಡೆಯಿಂದ — ನಿಲ್ಲು.
ಉಳಿದವರಂತೆ ನೀನೂ ಹೋಗುವೆಯೇನು? ಹೊರಟು
ನಾನು ಒಂಟಿಯಾಗಿ ಬಾಳಬೇಕೇನು?
ಮಂಜಿನಂಥ ಕಲ್ಲಿನಂಥ ಜಂಬಗಾರರ ಗುಂಪೇನು ನೀನು?
ಮೂರ್ತಿಗಳೆಲ್ಲವನು ಬಿಟ್ಟು ನಾನು

ಕಾಪಿಡುವ ಆ ತಂದೆಯ ಸಿಂಹಾಸನದ ಪಾದಕೆ ಎರೆಗಿದೆನಲ್ಲ
ಆ ಮುಂಜಾವನ್ನು ಶಪಿಸುವ ಜನರ ಗುಪೇನು ನೀನು ? '

ಕ್ಷೇತ್ರಮಣಿ ಗೋವಿಂದಚಂದ್ರನನ್ನು ಮದುವೆಯಾದಾಗ ಆಕೆಗೆ ಇಂಗ್ಲಿಷ್ ಹೆಚ್ಚು ತಿಳಿದಿರಲಿಲ್ಲ. ಆದರೆ ಮುಂದೆ 'ಕ್ರಿಸ್ತನ ರಕ್ತ' ಎಂಬ ಆಂಗ್ಲ ಪುಸ್ತಕವನ್ನು ಬಂಗಾಳಿಗೆ ಭಾಷಾಂತರಿಸುವಷ್ಟು ಮಟ್ಟಿಗೆ ಆಂಗ್ಲ ಭಾಷೆಯಲ್ಲಿ ಪ್ರವೀಣೆಯಾದಳು. ಇವನ್ನು ಕಲ್ಕತ್ತೆಯ ಟ್ರ್ಯಾಕ್ಟ್ ಬುಕ್ ಸೊಸೈಟಿಯವರು ಪ್ರಕಟಿಸಿದರು. ತನ್ನ ಕುಟುಂಬ ದವರೆಲ್ಲ ಅಕಾಲ ಮರಣಕ್ಕೆ ತುತ್ತಾದರೂ ತಾನು ದೇವರ ನಿಜವಾದ ಭಕ್ತಳಾಗಿ ಬಹುಕಾಲ ಬಾಳಿ 1900 ರಲ್ಲಿ ಕಾಲವಾದಳು.

ತನ್ನ ಪತಿಯಂತೆ ಕ್ಷೇತ್ರಮಣಿ ತಾನೂ ತನ್ನ ಮಕ್ಕಳ ಮೇಲೆ ಅಪಾರ ಪ್ರಭಾವ ಬೀರಿದಳು. ದತ್ ಕುಟುಂಬದ ವಿಷಯ ಬರೆಯುತ್ತ ಬಿಷಪ್ ಕ್ಲಿಫರ್ಡ್ ಹೀಗೆ ಹೇಳಿದ್ದಾನೆ: 'ತೋರು ತನ್ನ ತಂದೆಯಿಂದ ಬುದ್ಧಿ ಕೌಶಲ್ಯವನ್ನು ಪಡೆದರೆ ತನ್ನ ವ್ಯಕ್ತಿತ್ವದ ನೈತಿಕ ಸೌಂದರ್ಯವನ್ನೂ ಮಾಧುರ್ಯವನ್ನೂ ಹೆಚ್ಚಾಗಿ ತಾಯಿಯಿಂದ ಪಡೆದಿದ್ದಾಳೆ ಎಂದು ತಿಳಿದುಕೊಂಡೆ.'

ಗೋವಿಂದ ಚಂದ್ರನದು ವಿಶಾಲ ಹೃದಯ. ಇತರರ ಬಗೆಗೆ ಅಪಾರ ಅನುಕಂಪ. ಆತನಿಗೆ ಯಾವ ರೀತಿಯ ಪಕ್ಷಪಾತವಾಗಲಿ ಇರಲಿಲ್ಲ. ಪರಮ ಸಹಿಷ್ಣು ಆತ.

ರಾಸಮಯನ ಐದು ಜನ ಗಂಡುಮಕ್ಕಳಲ್ಲಿ ಗೋವಿಂದ ಅತ್ಯಂತ ಪ್ರಸಿದ್ಧನಾದ. 1836 ರಲ್ಲಿ ಹಿಂದೂ ಕಾಲೇಜನ್ನು ಸೇರಿ ಪ್ರಾಧ್ಯಾಪಕ ಡೇವಿಡ್ ಲೆಸ್ಟರ್ ರಿಚರ್ಡ್ಸನ್ನಿನ ಮೆಚ್ಚಿನ ಶಿಷ್ಯನಾದ. ಈ ಶಿಷ್ಯಪಟ್ಟ ಮುಂದೆ ಮೈಕೇಲ್ ಮಧುಸೂದನ ದತ್ತನದಾಯಿತು. ಗೋವಿಂದ ನಾಟಕಗಳಲ್ಲೂ ಭಾಗವಹಿಸುತ್ತಿದ್ದ. ತನ್ನ ಉಪಾಧ್ಯಾಯ ರಿಂದ ಷೇಕ್ಸ್‌ಪಿಯರನ ನಾಟಕಗಳನ್ನು ಹೇಗೆ ವಾಚನ ಮಾಡಬೇಕು ಎಂಬುದನ್ನು ಕಲಿತ. ಈತನ ಮೇಲೆ ರಿಚರ್ಡ್ಸನ್ನಿನ ಪ್ರಭಾವ ಅಪಾರವಾಗಿತ್ತು. ರಿಚರ್ಡ್ಸನ್ನಿನ ಪಟ್ಟ ಶಿಷ್ಯರಲ್ಲಿ ಪಿಯರಿಚರಣಸರ್ಕಾರ್, ಗಜೇಂದ್ರಮೋಹನ್‌ಠಾಕೂರ್, ಭೂದೇವ್ ಮುಖರ್ಜಿ, ಭೋರಾನಾಥ್ ಚಂದ್ರ ಇವರೂ ಇದ್ದರು. ಹಿಂದೂ ಕಾಲೇಜ್ ಆ ಕಾಲದಲ್ಲಿ ಪ್ರಸಿದ್ಧರಾದ ಬರಹಗಾರರ ಹಾಗೂ ವಿಚಾರವಂತರ ಒಂದು ಪ್ರತಿಭಾ ಪ್ರವಾಹವನ್ನೇ ಹರಿಸಿತು.

ಚಿಕ್ಕಂದಿನಿಂದಲೇ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಗೋವಿಂದ ಒಂದು ಸಣ್ಣ ಕವನ ಸಂಕಲನವನ್ನು ಪ್ರಕಟಿಸಿದ. ಇದನ್ನು ಕುರಿತು ಬ್ಲ್ಯಾಕ್‌ವುಡ್ ಮ್ಯಾಗಜೈನಿನಲ್ಲಿ ಪ್ರಶಂಸಾತ್ಮಕ ವಿಮರ್ಶೆ ಪ್ರಕಟವಾಯಿತು. ಡಿಸೆಂಬರ್ 1948 ರ ಕಲ್ಕತ್ತ ರೆವ್ಯೂ ಪತ್ರಿಕೆಯೂ ಇದರ ಬಗ್ಗೆ ಮೆಚ್ಚುಗೆ ಸೂಚಿಸಿತು. ಕಾಲಾನಂತರದಲ್ಲಿ ಈ ಕವನ ಸಂಕಲನದ ಕವನಗಳನ್ನು ದತ್ ಫ್ಯಾಮಿಲಿ ಆಲ್ಬಂನಲ್ಲಿ ಸೇರಿಸಲಾಯಿತು.

ವಿದ್ಯಾಭ್ಯಾಸ ಮುಗಿದ ಮೇಲೆ ಗೋವಿಂದಚಂದ್ರ ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಅಕೌಂಟ್ಸ್ ಪದವಿಗೇರಿದ. ಬಂಗಾಳಿಗಳನ್ನು ಕಡೆಗಣಿಸಲಾಗುತ್ತಿದೆ ಎಂದು ಧೈರ್ಯ ವಾಗಿ ಪ್ರತಿಭಟಿಸಿದ್ದರಿಂದ ಆತನನ್ನು ಬೊಂಬಾಯಿಗೆ ವರ್ಗಮಾಡಿದರು. ಗೋವಿಂದ ಸಂಸಾರ ಸಮೇತ ಬೊಂಬಾಯಿಗೆ ಬಂದ. ಆದರೆ ತನಗೆ ಬಡ್ತಿ ಸಿಗದಿದ್ದದರಿಂದ

ರಾಜೀನಾಮೆಯಿತ್ತ. ಹಿಂದೆ ಬಂಗಾಳದಲ್ಲಿ ಪ್ರತಿಭಟಿಸಿದ್ದನಾದ್ದರಿಂದ ಬೊಂಬಾಯಿಯಲ್ಲೂ ಆತನನ್ನು ಕಡೆಗಣಿಸಲಾಯಿತು. ಶ್ರೀಮಂತನಾದ್ದರಿಂದ ನಿರುದ್ಯೋಗಿಯಾದರೂ ಚಿಂತಿಸದೆ ತನ್ನ ಕಾಲವನ್ನು ಧಾರ್ಮಿಕ ಹಾಗೂ ಸಾಹಿತಿಕ ಚಟುವಟಿಕೆಗಳಿಗೆ ಮೀಸಲಿಟ್ಟ.

1873 ರಲ್ಲಿ ಗೋವಿಂದಚಂದ್ರ ಹಾಗೂ ಆತನ ಕುಟುಂಬ ಇಂಗ್ಲೆಂಡಿನಿಂದ ಹಿಂತಿರುಗಿದಕೂಡಲೇ ರಮೇಶಚಂದ್ರ ಈ ರೀತಿ ಬರೆದ: 'ನನ್ನ ಬಗ್ಗೆ ಅವರು ಎಂದಿನಂತೆಯೇ ಸೌಹಾರ್ದದಿಂದ ಸ್ನೇಹಭಾವದಿಂದ ಇದ್ದಾರೆ. ಅವರ ಹೃದಯ ಭಕ್ತಿಯಿಂದ ಶ್ರದ್ಧೆಯಿಂದ ತುಂಬಿದೆ. ಆದರೆ ಇಂಗ್ಲೆಂಡಿನಿಂದ ಹೊತ್ತು ತಂದ ಆ ರೋಗಾಣುಗಳು ತಮ್ಮ ಕೆಲಸ ಮಾಡಿದವು. ಮೊದಲು ಹಿರಿಯಳಾದ ಅರು. ಅನಂತರ ಪ್ರತಿಭಾನ್ವಿತೆ ತೋರು ಕಾಯಿಲೆ ಮಲಗಿ ಕಾಲವಾದರು. ತೋರುವಿನ ಕಾವ್ಯವನ್ನು ಇಂಗ್ಲೆಂಡಿನಲ್ಲಿ ಎಡ್ಮಂಡ್ ಗಾಸ್‌ನೂ ಒಂದು ವಿಶಿಷ್ಟ ವಾಚಕವರ್ಗವೂ ಮೆಚ್ಚಿತು. ಆಕೆ ಇನ್ನೂ ಬದುಕಿ ಉಳಿದಿದ್ದರೆ ಆಂಗ್ಲ ಸಾಹಿತ್ಯದಲ್ಲಿ ಹೆಸರುವಾಸಿಯಾಗಬಹುದಾಗಿತ್ತು. ಈ ಇಬ್ಬರೂ ಕಾಲವಾದಮೇಲೆ ಕೆಲವು ಕಾಲ ಗೋವಿಂದಚಂದ್ರ ಬದುಕಿದ್ದನು. ಆತನ ಕಾಲಾನಂತರ ಆತನ ಪತ್ನಿ ಇನ್ನೂ ಕೆಲವು ಕಾಲ ಜೀವಿಸಿದ್ದಳು.'

೪. ಬಾಲ್ಯ

ತೋರುವಿನ ತಂದೆಯ ಮನೆ—ರಾಂಬಾಗಾನ್ 12, ಮಾಣಿಕ್‌ತಲ ರಸ್ತೆ, ಕಲ್ಕತ್ತೆಯ ಮಧ್ಯಭಾಗದಲ್ಲಿದೆ. ತೋರು ಹುಟ್ಟಿದ್ದು ಈ ಮನೆಯಲ್ಲೆ. ಗೋವಿಂದಚಂದ್ರನಿಗೆ ಮೂರು ಮಕ್ಕಳು. 1851 ಅಕ್ಟೋಬರ್ 18 ರಂದು ಹುಟ್ಟಿದ ಅಬ್ಜು (ಮರಣ ಜುಲೈ 7, 1865). 1854 ಸೆಪ್ಟೆಂಬರ್ 13 ರಂದು ಹುಟ್ಟಿದ ಅರು (ಮರಣ ಜುಲೈ 23, 1874) ಹಾಗೂ 1856 ಮಾರ್ಚ್ 4 ರಂದು ಹುಟ್ಟಿದ ತೋರು (ಮರಣ ಆಗಸ್ಟ್ 30, 1877).

1862 ರಲ್ಲಿ ಕಾರನ್ ವಾಲಿಸ್ ಚೌಕದಲ್ಲಿರುವ ಕ್ರೈಸ್ತ ದೇವಾಲಯದಲ್ಲಿ ದತ್ತ ಕುಟುಂಬ ಕ್ರೈಸ್ತ ಧರ್ಮವನ್ನು ಅವಲಂಬಿಸಿತು. ಈ ಪ್ರಮುಖ ಘಟನೆಯಾದಲಿಮೇಲೆ ತೋರು ಒಮ್ಮೆ ಅರುವಿನ ಜೊತೆಯಲ್ಲಿ ಆಡುತ್ತಿದ್ದಳು. ಆಗ ಇದ್ದಕ್ಕಿದ್ದಂತೆ ಅರು ತೋರುವನ್ನು ಕೇಳಿದಳು: 'ನೀನು ಕ್ರೈಸ್ತಳು ಅಲ್ಲವೆ? ಬೈಬಲ್‌ನಲ್ಲಿ ಹೇಳಿದೆಯಲ್ಲವೆ. ಒಬ್ಬ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸು ಎಂದು. ನೀನು ಹಾಗೆ ನಿನ್ನ ಇನ್ನೊಂದು ಕೆನ್ನೆಯನ್ನು ತೋರಿಸಬಲ್ಲೆಯ?' 'ಹೌದು ತೋರಿಸುತ್ತೇನೆ' ಎಂದಳು ತೋರು. ತೋರು ಹಾಗೆಂದಕೂಡಲೆ ಅರು ಜೋರಾಗಿ ಅವಳ ಕೆನ್ನೆಗೆ ಹೊಡೆದಳು. ತೋರು ಗಟ್ಟಿಯಾಗಿ ಅಳತೊಡಗಿದಳು. ಆದರೆ ಹಿಂದಿರುಗಿಸಿ

ಹೊಡೆಯಲಿಲ್ಲ. ತೋರು ತನ್ನ ಇನ್ನೊಂದು ಕೆನ್ನೆಯನ್ನು ತೋರಿಸಿದಳೋ ಇಲ್ಲವೊ ಎಂಬುದನ್ನು ಅವಳ ಜೀವನ ಚರಿತ್ರೆಯನ್ನು ಬರೆದ ಹರಿಹರದಾಸ್ ಹೇಳಿಲ್ಲ. ಅರುವಿಗಿಂತ ತೋರು ಕಿರಿಯಳಾದರೂ ತೋರುವೇ ಅರುವಿಗಿಂತ ಯಾವಾಗಲೂ ಮುಂದಾದರೂ ಈ ಒಂದು ಬಾಲಿಶ ಘಟನೆಯಿಂದ ತೋರುವಿನ ವ್ಯಕ್ತಿತ್ವಕ್ಕಿಂತ ಅರುವಿನದೇ ಹೆಚ್ಚು ಶಕ್ತಿಯುತವಾಗಿತ್ತೆಂದು ಹೇಳಬಹುದು.

ಬಾಲ್ಯದಿಂದಲೂ ಈ ಮೂರು ಮಕ್ಕಳಿಗೂ ಓದಿನಲ್ಲಿ ಅತಿಯಾದ ಶ್ರದ್ಧೆ. ಶ್ರದ್ಧಾವಂತನೂ ಹಿರಿಯನೂ ಆದ ಬಾಬು ಶಿವಚಂದ್ರ ಬ್ಯಾನರ್ಜಿ ಎಂಬ ಕ್ರೈಸ್ತ ಈ ಮಕ್ಕಳಿಗೆ ಉಪಾಧ್ಯಾಯನಾದ. 1885 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷನಾದ ಡಬ್ಲ್ಯೂ. ಸಿ. ಬ್ಯಾನರ್ಜಿಯ ಪತ್ನಿ ಈತನ ಸೋದರ ಸೊಸೆ. ಬಾಬು ಶಿವಚಂದ್ರನೆಂದರೆ ದತ್ ಮಕ್ಕಳಿಗೆ ಬಲು ಪ್ರೀತಿ. 1877 ರಲ್ಲಿ ಮಾರ್ಟಿನಳಿಗೆ ಬರೆದ ಕಾಗದದಲ್ಲಿ ತೋರು ಹೀಗೆ ಹೇಳಿದ್ದಾಳೆ: ನಾವು ತೀರ ಚಿಕ್ಕವರಾಗಿದ್ದಾಗ ಆತ ನಮಗೆ ಇಂಗ್ಲಿಷ್ ಪಾಠ ಹೇಳುತ್ತಿದ್ದರು. ಮಕ್ಕಳಾದ ನಮಗೆ ಅವರೆಂದರೆ ಬಹಳ ಇಷ್ಟ. ದೊಡ್ಡವರಾದ ಮೇಲೆ ಅವರನ್ನು ಕಂಡರೆ ಪ್ರೀತಿಯ ಜೊತೆಗೆ ಗೌರವವೂ ಸೇರಿತು. ಅತನೊಬ್ಬ ನಿಜವಾದ ಕ್ರೈಸ್ತ. ನಮ್ಮ ಸುಖದುಃಖಗಳೊಂದಿಗೆ ಹೃದಯಪೂರ್ವಕವಾಗಿ ಭಾಗಿಯಾಗುತ್ತಾರೆ. ಪಾಠದ ಕಾಲದಲ್ಲಿ ಅಲ್ಪ ವಿಷಯಗಳ ಬಗ್ಗೆ ಹರಟುತ್ತಾ ನಾವು ಹೇಗೆ ಕಾಲ ಕಳೆದುಬಿಡಲು ಇಷ್ಟಪಡುತ್ತಿದ್ದೆವು! ಆದರೆ ಹೆಚ್ಚು ಹರಟಲು ಆತ ನಮ್ಮನ್ನು ಬಿಡುತ್ತಿರಲಿಲ್ಲ. ಹಣಕಾಸಿನ ವಿಭಾಗದಲ್ಲಿ ಕೆಲಸದಲ್ಲಿದ್ದ ಪ್ರತಿಯೊಬ್ಬರ ಆರೋಗ್ಯದ ವಿಷಯವನ್ನೂ ನಾವು ಒಬ್ಬೊಬ್ಬರೂ ವಿಚಾರಿಸುತ್ತಿದ್ದೆವು. ಯಾರದೊ ಒಬ್ಬರ ವಿಷಯವನ್ನು ತಿಳಿಯಬೇಕೆಂದು ನಾವೆಲ್ಲರೂ ಒಟ್ಟಿಗೇ ಪ್ರಯತ್ನಿಸುತ್ತಿದ್ದೆವು. ಮಿಲ್ಟನ್ ಮಹಾಕವಿಯ ಕಾವ್ಯವನ್ನು ನಾವು ಅವರೊಡನೆ ಓದಿದೆವು. ಪ್ಯಾರಡೈಸ್ ಲಾಸ್ಟ್ ಕಾವ್ಯವನ್ನು ಎಷ್ಟುಸಲ ಓದಿದ್ದೆವೆಂದರೆ ಅದರ ಮೊದಲ ಅಧ್ಯಾಯ, ಎರಡನೆಯ ಅಧ್ಯಾಯದ ಸ್ವಲ್ಪ ಭಾಗ ನಮಗೆ ಬಾಯಿಪಾಠವಾಗಿಹೋಗಿತ್ತು.

ಸ್ವಲ್ಪಕಾಲದಲ್ಲೇ ತೋರು ಅರು ಇಬ್ಬರೂ ಪಿಯಾನೊ ನುಡಿಸುವುದನ್ನು ಕಲಿತು ಆಂಗ್ಲಳಾದ ಶ್ರೀಮತಿ ಸೈನೇಸ್ ಎಂಬಾಕೆಯ ಬಳಿ ಹಾಡಲು ಕಲಿತರು. ಯೂರೋಪಿನಲ್ಲಿದ್ದಾಗ ಇದನ್ನು ಮತ್ತಷ್ಟು ಕಲಿತು ಪಿಯಾನೊ ಸಾಧನದಲ್ಲೂ ಹಾಡುಗಾರಿಕೆಯಲ್ಲೂ ಪ್ರವೀಣರಾದರು. ಕಲ್ಕತ್ತೆಯಲ್ಲಿ ಪೂರ್ವಜರಿಂದ ಬಂದ ಮನೆ, ಸುತ್ತಲೂ ಉದ್ಯಾನ, ಐರೋಪ್ಯ ಹಾಗೂ ಬಂಗಾಲಿ ಸಂಗೀತ, ಹೇರಳವಾದ ಬಂಧುಮಿತ್ರವೃಂದ, ಓದಲು ಬೇಕಾದಷ್ಟು ಕಾಲಾವಕಾಶ ಇವುಗಳಿಂದ ಕೂಡಿದ ತೋರುವಿನ ಬಾಲ್ಯ ಸುಖವಾಗಿಯೇ ಇರಬಹುದಾಗಿತ್ತು ಅಬ್ಜು 1865 ರಲ್ಲಿ ಅಕಾಲ ಮರಣಕ್ಕೆ ತುತ್ತಾಗದೆ ಇದ್ದಿದ್ದರೆ. ರಮೇಶ್ ಚಂದ್ರನ ಬರಹಗಳಲ್ಲಿ ಆತನ ದೊಡ್ಡಪ್ಪನ ಬಾಗ್‌ಮರೀ ಉದ್ಯಾನದ ಬಗ್ಗೆ ಸ್ವಾರಸ್ಯವಾದ ವಿವರಣೆಯಿದೆ.

'ಅನೇಕ ಎಕರೆಗಳಷ್ಟು ಹರಡಿದ್ದ ವಿಶಾಲ ಉದ್ಯಾನ ಹಣ್ಣಿನ ಮರಗಳ ನೆರಳು: ಒಂದು ಕಾಲುವೆಯ ಮೇಲೆ ಹಳ್ಳಿಗಾಡಿನ ಸೇತುವೆ. ಇದನ್ನು ಕಂಡರಂತೂ ಬಾಲ್ಯದಲ್ಲಿ ನಮಗೆ ಸಂತೋಷವೋ ಸಂತೋಷ. ನಾವು ತೋಟದ ತುಂಬ ಓಡಾಡುತ್ತಿದ್ದೆವು.

ಗೋವಿಂದ ಚಂದ್ರನ ಒಬ್ಬನೇ ಮಗ ಅಬ್ಬು ಅವನಿಗೆ ಮೆಚ್ಚುಗೆಯಾದ ಏಕಾಂತ ಸ್ಥಳಗಳನ್ನು ನಮಗೆ ತೋರಿಸುತ್ತಿದ್ದ. ಪಾಪ ಆ ಹುಡುಗ ಚಿಕ್ಕವನಾಗಿದ್ದಾಗಲೇ ತೀರಿಕೊಂಡ. ಅವನ ಮರಣ ಅವನ ತಂದೆ ತಾಯಿಯರಿಗೆ ಆದ ದೊಡ್ಡ ಆಘಾತ. ಅದೊಂದು ಚಿರಕಾಲದ ದುಃಖ. ಹಣ್ಣಿನ ಮರಗಳ ಈ ಅರಣ್ಯದ ಮಧ್ಯೆ ವಿಶಾಲವಾದ ಒಂದು ಅಂತಸ್ತಿನ ಮನೆ. ಶಾಂತಿಯ ಪ್ರತೀಕವಾಗಿತ್ತು ಅದು. ಈ ಮನೆಯಲ್ಲಿ ಅಪೂರ್ವ ಪುಸ್ತಕ ಸಂಗ್ರಹವಿತ್ತು. ಗೋವಿಂದ ಚಂದ್ರನ ವಿಹಾರ ಸಾಧನವೆಂದರೆ ಅಧ್ಯಯನ.'

ಸಣ್ಣ ಕುಟುಂಬದ ಸುಖ ಸಂತೋಷಗಳು ಏನೇ ಇದ್ದರೂ ಬಹಳ ಬೇಗ ಸಾವಿನ ಕಪ್ಪು ಮೋಡ ದತ್ ಕುಟುಂಬದ ಮೇಲೆ ಮುಸುಕಿತು. ಅಬ್ಬುವಿನ ಮರಣಾನಂತರ ತನ್ನ ಉಳಿದ ಮಕ್ಕಳನ್ನೂ ಎಲ್ಲಿ ಕಳೆದುಕೊಳ್ಳುತ್ತೇನೊ ಎಂಬ ಹೆದರಿಕೆ ಗೋವಿಂದ ಚಂದ್ರನನ್ನು ನಿರಂತರ ಕಾಡಿತು. ಅವರನ್ನು ತನ್ನಿಂದ ದೂರವಿರಲು ಬಿಡಲೇ ಇಲ್ಲ. ಬದಲಾಗಿ ಆ ಮಕ್ಕಳು ಜೊತೆಗಿದ್ದ ಪ್ರತಿ ನಿಮಿಷವೂ ಸಂತೋಷಪಟ್ಟ. ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ಕಾಲವಾದ ಅಬ್ಬುವಿನ ಬಗ್ಗೆ ಗೋವಿಂದ ಒಂದು ಅಷ್ಟಪದಿ ಬರೆದಿದ್ದನು. ಅದನ್ನು ಇಂಗ್ಲೆಂಡಿನಲ್ಲಿ ರಮೇಶ್‌ಚಂದ್ರನಿಗೆ ಓದಿ ಹೇಳಿದ. ಆಗತಾನೆ ದತ್ ಫ್ಯಾಮಿಲಿ ಆಲ್ಬಮ್ ಪ್ರಕಟವಾಗಿತ್ತು. ಎದೆಯೊಡೆತದ ಆರ್ತ ನುಡಿಗಳಿವು:

'ಎದೆಯೊಡೆದ ಏಕಾಂಗಿಯಾಗಿ ಉಳಿದೆ ನಾನು
ಬೇಸತ್ತ ಮನದಿ ಬೇಸರದ ದಿನಗಳನು ಎಣಿಸಲಿನ್ನು'

ಮುಂದೆ ಯಾವ ಧಾರ್ಮಿಕ ಶ್ರದ್ಧೆ ಆತನನ್ನೂ ಆತನ ಮಡದಿಯನ್ನೂ ಕಾಪಾಡಿತೊ ಅದೇ ಶ್ರದ್ಧೆ ಹಿಂದೆ ಅವರ ಹಿರಿಯ ಹುಡುಗ ಕಾಲವಾದಾಗಲೂ ಅವರಿಗೆ ಚೇತನವಿತ್ತಿತ್ತು.

'ಪ್ರೇಮಕ್ಕೆ ಸಾವಿಲ್ಲ. ಅಗಲುವಿಕೆ ಅಲ್ಲಿಲ್ಲ.
ಕಾಲ ಹತ್ತಿರವಾದಾಗ ಮುಂಜಾವು ಮಂದಸ್ಮಿತವಾಗಲಿಬೇಕು
ನಾನು ಆಗ ಆ ಗಂಭೀರ ಸಿಂಹಾಸನದ ಇದಿರು ನಿಲ್ಲಲೆಬೇಕು.
ನಿಲ್ಲುವೆನು. ನನ್ನ ಪ್ರೀತಿಯ ಮಗನೊಡನೆ ಕೂಡಿ
ದಾಯಿತ್ತಿ ಮಂದಿವರು ಭಟರು ಪ್ರಾರ್ಥನೆಯ ಹಾಡಿ.'

ಇದೇ ಶ್ರದ್ಧೆ ಬಹು ದುಃಖದಲ್ಲೂ ತೋರುವನ್ನು ಕಾಪಾಡಿತು. ಭೂಮಿಯ ಮೇಲಿನ ಬೇಸರದ ಬದುಕು ಕೊನೆಗೊಂಡಾಗ ಮುಂದೆ ಕಾದಿರುತ್ತದೆ ಚಿರಸುಖದ ಬದುಕು ಎಂಬ ಆಶಾಭಾವನೆ ಆಕೆಯ ಬರಹದಲ್ಲೆಲ್ಲ ಮೂಡಿ ನಿಂತಿದೆ.

ತನ್ನ ಮೂರು ಮಕ್ಕಳ ಬಾಲ್ಯದ ದಿನಗಳನ್ನು ಕುರಿತಾದ ಕವನವೊಂದನ್ನು ಗೋವಿಂದ ತಾನೆ ಸ್ವತಃ ಬರೆದಿದ್ದಾನೆ. ಈ ಚಿತ್ರ ನಮ್ಮನ್ನು ಚಕಿತಗೊಳಿಸುತ್ತದೆ.

'ಮಗ ಬಲು ವಿಶ್ವಾಸಿ ನನಗೆ ಅವನೆ ಪಂಚಪ್ರಾಣ,
ನೋಡಲಾಗಲೆ ಯುವಕ ಅವರಿನ್ನೂ ಕೂಸಿನವನು
ಹೀಗೆ ಇರಲಿ ಬಹುಕಾಲ. ಜಂಬಕೊಚ್ಚುವುದೆನಗವಮಾನ
ಅದರೆ ಇಹರೆ ಅವರಿವರು ಇವನೆತ್ತರ? ಇಹನೆ ತಿಳಿ ಮಹಿನವನು.'

ನನ್ನ ಎರಡನೆಯ ಮಗು, ಮನೆಯ ಸೌಂದರ್ಯದ ರಾಣಿ ಬಲು ಮೆದುವು
ಅಷ್ಟು ವಿಶ್ವಾಸಿಯಲ್ಲ ಅಷ್ಟು ಕಠೋರಳೂ ಅಲ್ಲ.
ಅಣ್ಣನಷ್ಟು ಒರಟಳಲ್ಲ. ಕೆಂಪೇರುವ ಕೆನ್ನೆ ಗಲ್ಲ
ಇವಳು ಶುಭ್ರ ಶಾಂತ ಪ್ರಶಾಂತಳು.
ಮುಸ್ಸಂಜೆಯ ಮೊದಲ ತಾರೆಯಂತೆ, ಎಲ್ಲರಿಗೂ ಕೊನೆಯವಳು.
ಪುಟಾಣಿ ಗಂಧರ್ವಳಾಕೆ, ಕೆದರಿ ಕಟ್ಟಿದ ತಲೆಗೂದಲು
ಸ್ವಪ್ರೇರಿತೆ, ಆದರೂ ನಾಚಿಕೆ. ಹೇಳಿದ ಮಾತ ಕೇಳುವವಳೆ ಅವಳು !
ಪಶುಪಕ್ಷಿ ಪ್ರಾಣಿಗಳನು ಕಂಡರೆ ಪ್ರೀತಿ ತುಂಬ.
ಬಲು ಬುದ್ಧಿವಂತೆ. ಇದು ದೇವರೆನಗಿತ್ತ ಕುಟುಂಬ.

1869 ರ ಚಳಿಗಾಲದಲ್ಲಿ ಯೂರೋಪಿಗೆ ತೆರಳುವ ಮೊದಲು ತೋರು ಹಾಗೂ ಅವಳ ಮನೆಯುವರು ತಮ್ಮೆಲ್ಲ ಕಾಲವನ್ನೂ ರಾಂಬಾಗನ್ ಹಾಗೂ ಬಾಗಮರಿ ಈ ಎರಡು ಮನೆಗಳಲ್ಲಿ ಕಳೆದರು. ತೋರುವಿಗೆ ಬಾಗ್‌ಮರಿಯ ತೋಟದ ಮನೆ ಬಲು ಇಷ್ಟ. ಅದನ್ನು ಅವಳು ತನ್ನ ಅನೇಕ ಕವನಗಳಲ್ಲಿ ಹೊಗಳಿದ್ದಾಳೆ. ಎಲ್ಲಕ್ಕಿಂತಲೂ ಅಲ್ಲಿದ್ದ ಹೆಮ್ಮರಗಳೆಂದರೆ ಅವಳಿಗೆ ಬಲು ಪ್ರೀತಿ.

"ಎಂತಹ ಉಜ್ವಲ ವೃಕ್ಷಗಳು ! ಗಂಭೀರ ಸಾಲವೃಕ್ಷ ಏನಿದರ ಮಾಟ
ದಿಟ್ಟಿಸಿ ನೋಡಿ ನಲಿದು ನೆಲೆಸುತ್ತದಲ್ಲೆ ನೋಟ.
ಅಡಕೆ ಮರವೊಂದು ಉದ್ದ ಕಂಬ
ಗರಿಗೆದರಿ ಹರಡಿರುವ ರೆಂಬೆಗಳೆ ಇದರ ಶಿಖೆ ತುಂಬ
ಹಗುರೆಲೆಯ ಹುಣಿಸೆ ಬಲುಹಿರಿದು ವಿಸ್ತಾರ
ಪೇಲವ ಮೃದು ಗಂಧದ ಕಹಿಬೇವಿನ ಮರ
ಕಂಗೊಳಿಪುದು ಶ್ಯಾಮಲಲಿ ಮಧುಮಗಳಂದದ ಪ್ರಭೆಯಿಂದ
ಥಳಥಳಿಸುವ ಸುಮವೃಂದಕೆ ಕೆಂಪಿನ ಕಾಂತಿಯ ಅಂದ.
ಅಂಜೂರದ ಗಿಡಗಳ ದೊಡ್ಡ ಗುಡಾರ
ಇರಬಹುದಿದರಡಿ ಸೇನೆ ಅಪಾರ
ಅಲ್ಲೊಂದು ಇಲ್ಲೊಂದು ಬಿರುಕು
ಇದರಿಂದಲೆ ರವಿ ಕಿರಣದ ಇಣುಕು
ಬಿದುರಿನ ಮೆಳೆಯಲಿ ತೂಗುಯ್ಯಾಲೆ
ಮೇಲಿನ ಮರದಲಿ ಸಾರಿಕೆ ಹಾಡಿನ ಲೀಲೆ
ಮಾವಿನ ತೋಪದು ಕಗ್ಗತ್ತಲೆಯೊಡ್ಡು
ಕಾಗೆ ಕೋಗಿಲೆಗಳ ಬೀಡು, ಎಲ್ಲೆಲ್ಲೂ ಇವುಗಳ ಗೂಡು
ಸಂಪಿಗೆ ಮರಗಳ ಜೊತೆಗೆ ಪೀತದಾರು
ಲೋಲಾಕು ಹೂವಿನ ನಗೆಸೂರು
ಗುತ್ತಾಗಿ ಹಬ್ಬಿರುವ ಕಾಡುದ್ರಾಕ್ಷಿ ಬಳ್ಳಿಯು ಮಾಲೆ ಮಾಲೆ

ಗಿಡ ಮರಗಳ ಮೇಲೆಲ್ಲ ಇದರ ಲೀಲೆಯೋ ಲೀಲೆ
ಸಂಸ್ಕೃತ ಕವಿಗಳು ಹಾಡಿ ಹೊಗಳಿರುವ ಶಿರೀಷ
ಇದ ಮುಡಿಯಲು ಹಕ್ಕಿ ಪೆಂಗಳಿಗೆ ಬಲು ಹರುಷ
ರಾಕ್ಷಸನೊಲು ಬೆಳೆದು ಹರಡಿ ಅರಳಿಯ ಮರ ನಿಂತಿದೆ
ಜಡೆಗಟ್ಟಿಹ ಜಟೆಯಂದದಿ ಬಿಳಲು ಬಿದ್ದಿದೆ
ಇವುಗಳ ಜೊತೆಗಿವೆ ವೃಕ್ಷವಿಶಾಲ ಸಾಸಿರಕೂ ಹೆಚ್ಚು
ಅವುಗಳ ತಲೆಗಿವೆ ಕೆಂಪಿನ ಕವಚ ಇಲ್ಲವೆ ಚಿನ್ನದ ಕುಚ್ಚು
ಹಸಿರು ಕಿರೀಟದ ಮರಗಳು ಚಿಮ್ಮಿವೆ ಯುವಕರ ಎದುರಿನಲಿ
ಸಂಜೆಯು ಬೀಳಲಿ ಕಪ್ಪನೆ ನೆಳಲಲಿ ಸಾಲು ಸಾಲಿನಲಿ ತೋಟದಲಿ

ಭಾರತದ ಸುಂದರ ವೃಕ್ಷಗಳನ್ನು ಗಂಟೆಗಟ್ಟಲೆ ವೀಕ್ಷಿಸಿದವರು ಮಾತ್ರ ಅವುಗಳ ಬಗ್ಗೆ ಇಷ್ಟು ವಿವರವಾಗಿ ಬರೆಯಲು ಸಾಧ್ಯ. ತೋರುವಿನ ಸುಪ್ರಸಿದ್ಧ ಕವನ 'ನಮ್ಮ ಸರ್ವೆಮರ' ಕೂಡ ತೋರುವಿಗೂ ಗಿಡಮರಗಳಿಗೂ ನಡುವೆ ಇದ್ದ ಆ ಅಲೌಕಿಕ ಬಾಂಧವ್ಯದ ಕುರುಹಾಗಿದೆ.

'ಬಾಗ್‌ಮರಿ' ಯನ್ನು ಕುರಿತ ಸುನೀತ ತೋರುವಿನ ಅತ್ಯುತ್ತಮ ಕವನಗಳಲ್ಲೊಂದು. ಮಕ್ಕಳೂ ಬಂಧುಬಳಗವೂ ಗೆಳೆಯ ಗೆಳತಿಯರೂ ಆ ವಿಶಾಲ ತೋಟದಲ್ಲಿ ಆಡಿ ಪಾಡುತ್ತಿದ್ದುದನ್ನು ನಾವು ಕಲ್ಪಿಸಿಕೊಳ್ಳಬಹುದು.

ನಮ್ಮ ಮನೆಯ ತೋಟದ ಎಲೆಗೊಂಚಲು ಸಾಗರದೊಲು ಸುತ್ತಿಹುದು
ಬೇಸರ ಬರಿಸುವ ಹಸುರೆಲ್ಲವು ಬಗೆಬಗೆ ಛಾಯೆಯೊಳದ್ದಿಹುದು
ನಾನಾ ವಿಧ ವರ್ಣಗಳೊಂದರೊಳೊಂದೆದ್ದಂತಿದೆ ಕಣ್ಣಿಗೆ ಹಬ್ಬ.
ತಿಳಿ ಹಸುರಿನ ನಯನವುರಿನ ಹುಣಸೆ
ಹಚ್ಚನೆ ಹಸುರಿನ ಮಾವನು ಬಳಸೆ
ತಾಳೆಯ ಮರಗಳು ಎದ್ದಿವೆ ನಡು ನಡುವೆ
ತ್ರಿಕೋನಗಳ ಮೇಗಡೆ ಬೂರಲು ಗಿಡಗಳು ಬಾಗಿವೆ
ಕದಳಿಯ ಕೂಗಿನ ಹಾಗಿದೆ ಬೆಚ್ಚಿಸುವಂತಹ ಕಿಚ್ಚಿನ ಬೂರಲ ಹೊಸ ಹೂವಿನ ಕೆಂಪು
ಇದಕಿಂತಲು ಚೆಲುವದು ಬಿದಿರಿನ ಮೆಳೆಯಾ ಪೆಂಪು
ಮೂಡಣ ಕಡೆ ಬಿದುರಿನ ಸಾಲು ಮೆಳೆ
ಅವುಗಳ ನುಡುವಿಂದಿಣುಕುವ ಚಂದ್ರಕಳೆ
ಬಿಳಿದಾವರೆ ಬೆಳ್ಳಿಯ ಬಟ್ಟಲದಂತಿದೆ
ಚೆಲುವಿನ ಈ ಸೊದೆ ಸೇವಿಸಿ ತನುಮನ ಇಹವನೆ ಮರೆತಂತೆ
ನವಿನ್ಯಾಃ ಅಮರೋದ್ಯಾನವ ನಿಟ್ಟಿಸುತ್ತಿದ್ದರೆ ಹೊಸ ಲೋಕವೆ ತೆರದಂತೆ

ಬಾಗ್‌ಮರಿ ತೋಟದ ಮನೆ ತೋರು ಇರುವಾಗಲೂ ಅವಳ ಅನಂತರವೂ ಜನರ ಗಮನವನ್ನು ಎಷ್ಟರ ಮಟ್ಟಿಗೆ ಸೆಳೆಯಿತೆಂದರೆ ಪಾಶ್ಚಾತ್ಯ ದೇಶಗಳಿಂದ ಬಂದ ಅನೇಕರು ಅದನ್ನು ಹೋಗಿ ನೋಡಲು ಕಾತುರರಾಗಿದ್ದರು. ಎಲಿಜಬೆತ್ ಎಸ್. ಕಾಟನ್ ಎಂಬಾಕೆ ತೋರುವನ್ನು ಮೆಚ್ಚಿದವರಲ್ಲಿ ಒಬ್ಬಳು. 1907 ರಲ್ಲಿ ಎಂದರೆ ತೋರು

ಕಾಲವಾದ ಮೂವತ್ತು ವರುಷದ ಮೇಲೆ ಆಕೆ ಕಲ್ಕತ್ತೆಗೆ ಭೇಟಿಯಿತ್ತು, ಹರಿಹರದಾಸನಿಗೆ ಈ ಕೆಳಕಂಡ ಪತ್ರ ಬರೆದಳು:

ಮಾನ್ಯರೆ,

"ನಾನು ಅನೇಕ ವರುಷಗಳಿಂದಲೂ ಕಲ್ಕತ್ತೆಯನ್ನು ತೋರುವಿನ ಪವಿತ್ರ ಸ್ಮೃತಿಗೊಂದು ಸ್ಮಾರಕವೆಂದು ಪರಿಗಣಿಸಿದ್ದೇನೆ. ಸಾಧ್ಯವಾದರೆ ತೋರು ಯಾವ ಮನೆಯಲ್ಲಿ ವಾಸಮಾಡಿ ಇಂದು ಕಂಬನಿ ಮಿಡಿಯುತ್ತಿರುವ ಜಗತ್ತಿಗೆ ಕೆಲವೇ ಆದರೂ ಅತ್ಯಮೂಲ್ಯವೆನಿಸಿರುವ ತನ್ನ ಪ್ರತಿಭೆಯ ಪುಷ್ಪಗಳನ್ನು ಅರ್ಪಿಸಿದಳೊ ಆ ಮನೆಯನ್ನು ನೋಡಲು ಬಯಸುತ್ತೇನೆ."

ಶ್ರೀಯುತ ಎಡ್‌ಮಂಡ್‌ಗಾಸ್ 'ಹೇಳಿದಂತೆ ಯಾವ ಮನೆಯಲ್ಲಿ ಅವಳು ಸಂಸ್ಕೃತ ಸಾಹಿತ್ಯದ ರಹಸ್ಯದಾಳಕ್ಕೆ ಇಳಿದಳೊ ಆ ತೋಟದ ಮನೆಯನ್ನು ನೋಡಲು ಬಯಸುತ್ತೇನೆ.'

ತೋರುವಿನ ಸುಂದರ ಬಾಲ್ಯ ಜೀವನ ಅವಳು ಜನಿಸಿದ ನಾಡಿನಲ್ಲಿ ಮೊಗ್ಗಾಗಿಮೂಡಿ ವಿದೇಶದಲ್ಲಿ ಅರಳಿ ಪ್ರಬುದ್ಧವಾಗಬೇಕಾಗಿತ್ತು. ಗೋವಿಂದ ಚಂದ್ರ ತನ್ನ ಮಕ್ಕಳಿಗೆ ವಿದೇಶಯಾತ್ರೆ, ವಿದ್ಯಾಭ್ಯಾಸ ಇವುಗಳ ಪ್ರಯೋಜನ ಸಿಗುವಂತೆ ಮಾಡಲು ನಿರ್ಧರಿಸಿದ. 'ಕಪ್ಪುನೀರನ್ನು' ದಾಟಿದ ಬಂಗಾಳಿ ಹೆಣ್ಣುಮಕ್ಕಳಲ್ಲಿ ತೋರು ಅರು ಮೊದಲಿಗರು. ಅವರ ಗೆಳತಿ ಶ್ರೀಮತಿ ಬಾರ್ಟನ್ ಹೀಗೆ ಬರೆದಿದ್ದಾಳೆ. 'ಅವರು (ತಂದೆ ತಾಯಿಯರು) ತಮ್ಮ ಇಬ್ಬರು ಬುದ್ಧಿವಂತ ಮಕ್ಕಳಿಗೂ ಅತ್ಯುತ್ತಮ ವಿದ್ಯಾಭ್ಯಾಸ ಕೊಡಿಸಲು ನಿರ್ಧರಿಸಿದರು. ನಮ್ಮ ದೇಶಕ್ಕೆ ವಾಪಸಾಗುತ್ತಿದ್ದ ನಮ್ಮ ಜೊತೆಯಲ್ಲಿ ಪ್ರಯಾಣ ಮಾಡುವ ಪ್ರಯೋಜನ ಪಡೆದು ಆ ಚಳಿಗಾಲದಲ್ಲಿ ಯೂರೋಪಿಗೆ ಬಂದರು (1869). ನಮ್ಮ ಯಜಮಾನರ ಮಾತಿಗೆ ಒಪ್ಪಿ ನಮ್ಮ ಜೊತೆಯಲ್ಲಿ ನೀಸ್ ಪಟ್ಟಣಕ್ಕೆ ಬಂದರು. ನನ್ನ ತಂದೆ ತಾಯಿಗಳು ಅಲ್ಲಿದ್ದರು. ನನಗೆ ನೆನಪಿರುವಂತೆ ದತ್ ಕುಟುಂಬ ಅಲ್ಲಿ ಮೂರು ನಾಲ್ಕು ತಿಂಗಳನ್ನು ಕಳೆಯಿತು. ನಾವು ಆ ಪಟ್ಟಣದ ಹಲವರಿಗೆ ಅವರ ಪರಿಚಯ ಮಾಡಿ ಕೊಟ್ಟೆವು. ಅವರೆಲ್ಲರೂ ಬೇಗ ಫ್ರೆಂಚ್ ಕಲಿತರು.'

ತೋರು ಅರು ಫ್ರಾನ್ಸನ್ನು ಮನಸಾರ ಮೆಚ್ಚಿದರು. ಭಾರತವನ್ನು ಬಿಟ್ಟರೆ ಅವರನ್ನು ಬಹುವಾಗಿ ಆಕರ್ಷಿಸಿ ಸ್ಫೂರ್ತಿ ನೀಡಿದ ದೇಶ ಫ್ರಾನ್ಸ್. ಫ್ರೆಂಚ್ ಜನರೂ ಕೂಡ ತೋರುವನ್ನು ಫ್ರೆಂಚ್ ಮಹಿಳೆಯೆಂದೇ ಕರೆದರು. ತನ್ನ ಹದಿಮೂರನೆಯ ವಯಸ್ಸಿನಲ್ಲಿ ಫ್ರಾನ್ಸಿಗೆ ಬಂದ ತೋರು ಫ್ರೆಂಚ್ ಭಾಷೆಯನ್ನು ಬಹಳ ಬೇಗ ಲೀಲಾಜಾಲವಾಗಿ ಕಲಿತಳು. ತನ್ನ ಜೀವನಪರ್ಯಂತ ಫ್ರೆಂಚ್ ರೋಮ್ಯಾಂಟಿಕ್ ಸಾಹಿತ್ಯದಲ್ಲಿ ಮುಳುಗೆದ್ದಳು. ಫ್ರೆಂಚ್ ಸಾಹಿತ್ಯವನ್ನು ಮನಃಪೂರ್ವಕ ಅಭ್ಯಾಸಮಾಡಿದಳು. ಫ್ರಾನ್ಸನ್ನು ಮನಸಾರ ಪ್ರೀತಿಸಿದಳು.

೫. ಫ್ರಾನ್ಸ್

ಮರ್ಸೇಲ್ಸ್‌ನಲ್ಲಿ ಇಳಿದು ದತ್ ಕುಟುಂಬದವರು ನೀಸ್ ಪಟ್ಟಣಕ್ಕೆ ಹೋಗಿ ಅಲ್ಲಿ 1870 ರ ವಸಂತದವರೆಗೂ ಇದ್ದರು. ತೋರು ಅರು ಇಬ್ಬರೂ ಒಂದು ಶಾಲೆಗೆ ಹೋಗಿ ಫ್ರೆಂಚ್ ಭಾಷೆಯನ್ನು ಆಸ್ಥೆಯಿಂದ ಕಲಿತರು. ಅಕ್ಕತಂಗಿಯರು ಹೋದದ್ದು ಇದೊಂದೇ ಶಾಲೆಗೆ. ಆ ಶಾಲೆಯನ್ನೂ ಬಿಟ್ಟು ಅವರು ಗೋವಿಂದ ಚಂದ್ರನಿಗೆ ಕಲಿಸಲು ಬರುತ್ತಿದ್ದ ಉಪಾಧ್ಯಾಯಿನಿಯ ಬಳಿಯಲ್ಲೇ ಕಲಿಯಲಾರಂಭಿಸಿದರು. ಫ್ರೆಂಚ್ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಲಾರಂಭಿಸಿದರು. ತೋರು ಫ್ರಾನ್ಸಿನ ಮಹಾಕ್ರಾಂತಿಯಿಂದಲೂ ಆಕರ್ಷಿತಳಾದಳು. ಆ ಕಾಲದ ಸಾಹಿತ್ಯದಲ್ಲಿ ಸ್ವಾತಂತ್ರ್ಯಪ್ರೇಮ ತಾನೇ ತಾನಾಗಿ ಮೈದೋರಿತ್ತು. ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಜಾರ್ಜ್ ಸ್ಯಾಂಡ್ ಬರೆದ ಕಾದಂಬರಿಗಳಂಥವು ಬೇಕಾಗಿತ್ತು ಭಾರತಕ್ಕೆ. ಫ್ರಾನ್ಸಿನ ಬಗ್ಗೆ ತೋರುವಿನ ಅಭಿಮಾನ ಎಷ್ಟಿತ್ತೆಂದರೆ ತಾನು ಫ್ರೆಂಚ್ ಹುಡುಗಿಯೇ ಎಂದು ಭಾವಿಸಿದಳು. 'ನಾನೊಬ್ಬ ಸ್ಥಿರಮನಸ್ಕ ಅಪರಾಜಿತ ಫ್ರೆಂಚ್ ಮಹಿಳೆ.' ಎಂದು ತೋರು ತನ್ನ ದಿನಚರಿಯಲ್ಲಿ ಬರೆದಿದ್ದಾಳೆ.

ನೀಸ್ ನಗರದಲ್ಲಿದ್ದಾಗ ತೋರು ತನ್ನ ಚಿಕ್ಕಪ್ಪನ ಮಗ ಅರುಣಚಂದ್ರದತ್ತನಿಗೆ ಕಲ್ಕತ್ತಗೆ ಪತ್ರ ಬರೆದಳು. 'ಕಾಗದ ಬಂದಾಗ ನಾವು ಊಟಮಾಡುತ್ತಿದ್ದೆವು. ಕೋಣೆಯಲ್ಲಿ ಇಬ್ಬರು ಸಂಗೀತಗಾರರು ಹಾರ್ಪ್ ಹಾಗೂ ಪಿಟೀಲು ವಾದ್ಯಗಳನ್ನು ನುಡಿಸುತ್ತಿದ್ದರು... ನಮ್ಮ ಹಸಿವು ಹೆಚ್ಚಿ ಚೆನ್ನಾಗಿ ಊಟ ಮಾಡಲಿ ಎಂದು. ಇದು ಫ್ರೆಂಚರ ರೀತಿ. ನಾವು ಇಲ್ಲಿ ಉತ್ಸವವೊಂದಕ್ಕೆ ಹೋಗಿದ್ದೆವು. ಈ ಉತ್ಸವಕ್ಕೆ 'ಕಾರ್ನಿವಲ್' ಎನ್ನುತ್ತಾರೆ. ಕಾರ್ನಿವಲ್‌ನಲ್ಲಿ ಜನ ಮುಖವಾಡಗಳನ್ನು ಹಾಕಿಕೊಂಡು ಬಣ್ಣ ಬಳಿದುಕೊಂಡು ಜನರ ಮೇಲೆಲ್ಲ ಸಕ್ಕರೆ ಮಿಠಾಯಿ ಎರಚುತ್ತಾರೆ. 'ಲೆಂಟ್' ಎಂಬ ಕ್ರೈಸ್ತರ ಉಪವಾಸವ್ರತದ ಮೊದಲು ಜನ ಮಿತಿಮೀರಿ ಕುಣಿದಾಡುತ್ತಾರೆ. ಸಂತೋಷವಾಗಿರುತ್ತಾರೆ. ಕ್ಯಾಥೊಲಿಕರಾದವರು 'ಲೆಂಟ್' ವ್ರತಕಾಲದಲ್ಲಿ ತುಂಬ ನಿಯಮದಿಂದಿರುತ್ತಾರೆ. ಆದ್ದರಿಂದಲೇ ಅದಕ್ಕೆ ಮೊದಲು ಉತ್ಸಾಹದಿಂದಿರಲು ಬಯಸುತ್ತಾರೆ.'

ಕೆಸರಿನಲ್ಲಿ ನಡೆದು ಅವರು ಉತ್ಸವದ ಸ್ಥಳ ತಲುಪಿದ್ದರು. ಬಟ್ಟೆಯೆಲ್ಲಾ ಕೊಚ್ಚೆ. ಹೀಗಾಯಿತೆಂದು ಒಂದು ಗಾಡಿಯನ್ನು ಗೊತ್ತುಮಾಡಿಕೊಂಡರು. ಅದೂ ಅಷ್ಟೇನೂ ಹಿತಕರವಾಗಿರಲಿಲ್ಲ. ಆದರೆ ಕಲ್ಕತ್ತೆಯ ಕುದುರೆಗಾಡಿಗಳು ಅಭ್ಯಾಸವಾಗಿದ್ದರಿಂದ ಅದೇನೂ ಅಷ್ಟು ಹೊಸದಾಗಿರಲಿಲ್ಲ. ಅಲ್ಲಿನ ಎಲ್ಲ ಕುದುರೆಗಾಡಿಗಳೂ ಕಲ್ಕತ್ತೆಯ

ಅತ್ಯುತ್ತಮ ಕುದುರೆಗಾಡಿಯಷ್ಟೇ ಚೆನ್ನಾಗಿವೆ ಎಂದುಕೊಂಡರು. ಹುಡುಗಿಯರಿಬ್ಬರೂ ಶ್ರೀಮತಿ ಬಾರ್‌ಟನ್ನಳ ಸಹೋದರನೂ ಪಂಜಾಬಿನ ಐ. ಸಿ. ಎನ್ .ಸದಸ್ಯನೂ ಆದ ಶ್ರೀಯುತ ಎಲಿಯಟ್‌ನೊಂದಿಗೆ ಮಹಡಿ ಹತ್ತಿ ಹೋದರು. ಆದರೆ ಅವರ ತಂದೆ ತಾಯಿ ಗಾಡಿಯಲ್ಲೇ ಉಳಿದರು. ಕೆಳಗೆ ನಡೆಯುತ್ತಿದ್ದ ಕಾರ್ಯಕಲಾಪಗಳನ್ನೂ ಪ್ರದರ್ಶನವನ್ನೂ ನೋಡಲು ಮೇಲೆ ಹೋಗಿದ್ದ ಹುಡುಗಿಯರು ಕುರ್ಚಿಗಳ ಮೇಲೆ ನಿಲ್ಲಬೇಕಾಗಿತ್ತು.

ಫ್ರಾನ್ಸಿನಲ್ಲಿದ್ದ ಅವರ ಸ್ನೇಹಿತರಲ್ಲಿ ವೈದ್ಯರೊಬ್ಬರ ಮಡದಿಯೂ ಇದ್ದರು. ಈ ಹುಡುಗಿಯರು ಫ್ರೆಂಚ್ ಭಾಷೆಯಲ್ಲೇ ಮಾತಾಡಬೇಕೆಂದು ಆಕೆ ಒತ್ತಾಯಪಡಿಸುತ್ತಿದ್ದಳು. ಇಂಗ್ಲಿಷಿನಲ್ಲಿ ಮಾತಾಡದೆ ಫ್ರೆಂಚ್ ಭಾಷೆಯಲ್ಲೇ ಮಾತಾಡಿ ಆದಷ್ಟು ಪ್ರಭುತ್ವ ಪಡೆಯಬೇಕೆಂಬುದು ಆಕೆಯ ಆಸೆ. ‘ಎಷ್ಟು ತಪ್ಪು ಮಾಡಿದರೂ ಚಿಂತಿಲ್ಲ’ ಎನ್ನುತ್ತಿದ್ದಳು ಆ ವೈದ್ಯನ ಮಡದಿ.

ವಿಶ್ವಕ್ಕೆ ಫ್ರಾನ್ಸಿನ ಕೊಡುಗೆ ಇಂಗ್ಲೆಂಡಿಗಿಂತಲೂ ಹಿರಿದಾಗಿತ್ತು. ತೋರು ಫ್ರೆಂಚ್ ಜೀವನವನ್ನು ಅಭ್ಯಾಸ ಮಾಡಿದಳು. ಫ್ರೆಂಚ್ ಹುಡುಗಿಯರ ವ್ಯಕ್ತಿತ್ವ ಅವಳ ಮೇಲೆ ಪ್ರಭಾವ ಬೀರಿರಬೇಕು. ಏಕೆಂದರೆ ತನ್ನ ಕಾದಂಬರಿಯಲ್ಲಿ ಫ್ರೆಂಚ್ ಯುವತಿಯೊಬ್ಬಳ ಬಗ್ಗೆ ಬರೆದಿದ್ದಾಳೆ. ಫ್ರಾನ್ಸಿನಲ್ಲೂ ಸಂಪ್ರದಾಯಸ್ಥ ಮನೆತನದ ಹೆಣ್ಣುಮಕ್ಕಳು ಬಂಗಾಳದ ಆಧುನಿಕ ಹೆಣ್ಣುಮಕ್ಕಳನ್ನು ಹೋಲುತ್ತಿದ್ದರು. ತೋರುವಿನ ಕಾದಂಬರಿ ‘ಕುಮಾರಿ ಆರ್‌ವೆರಳ ದಿನಚರಿ’ಯ ನಾಯಕಿ ಮಾರ್ಗರೆಟ್ ನೀಸ್ ಪಟ್ಟಣದಲ್ಲಿ ತೋರು ಕಂಡು ಮೆಚ್ಚಿದ ಫ್ರೆಂಚ್ ಕನ್ಯೆಯರನ್ನು ಹೋಲುತ್ತಾಳೆ. ಅಷ್ಟೇ ಅಲ್ಲ. ಈ ಪಾತ್ರ ತೋರುವೇ ಆಗಲೂ ಬಹುದಿತ್ತು. ಕಾದಂಬರಿಯಲ್ಲಿ ವರ್ಣಿತವಾಗಿರುವ ಮನೆ ನಿಜವಾಗಿಯೂ ಇಂಗ್ಲೆಂಡಿನಲ್ಲಿ ಇತ್ತಾದರೂ ಕಾದಂಬರಿಗೆ ಫ್ರೆಂಚ್ ವಸ್ತುವನ್ನೂ ಹಾಗೂ ಫ್ರೆಂಚ್ ನಾಯಕಿಯನ್ನೂ ಆರಿಸಿದ್ದು ತೋರುವಿಗೆ ಫ್ರಾನ್ಸಿನ ಮೇಲಿದ್ದ ಮಮತೆಗೆ ಕುರುಹಾಗಿದೆ. ಅಲ್ಲದೆ ಫ್ರೆಂಚ್ ವಾತಾವರಣಕ್ಕೆ ಅವಳು ಎಷ್ಟು ಸಹಜವಾಗಿ ಹೊಂದಿಕೊಳ್ಳುತ್ತಿದ್ದಳು ಎಂಬುದನ್ನೂ ಸೂಚಿಸುತ್ತದೆ.

ಫ್ರೆಂಚ್ ಸಾಹಿತ್ಯದೊಂದಿಗೆ ತೋರು ಹೊಂದಿದ್ದ ಸಂಪರ್ಕ ಜೇಮ್ಸ್ ಡಾರ್‌ಮೆಸ್ಟೆಟರನಿಗೆ ಬಹಳ ಮೆಚ್ಚಿಗೆಯಾಗಿ ಆತ ಹೀಗೆ ಹೇಳಿದ್ದಾನೆ: ‘ಫ್ರಾನ್ಸಿನಲ್ಲಿ ಅವರು ಅಲ್ಪಕಾಲ ಇದ್ದರೂ ಫ್ರಾನ್ಸ್ ತೋರುವಿನ ಭಾವನೆಗಳ ಮೇಲೂ ಕಲ್ಪನೆಯ ಮೇಲೂ ಅಸಾಧಾರಣ ಪ್ರಭಾವ ಬೀರಿತು. ಅವರು ಫ್ರಾನ್ಸಿನಲ್ಲಿದ್ದ ಕಾಲದ ಬಗ್ಗೆ ಹೆಚ್ಚು ವಿವರಗಳು ದೊರಕಿದ್ದರೆ ಚೆನ್ನಾಗಿತ್ತು. ಫ್ರೆಂಚ್ ತೋರುವಿನ ಮಮತೆಯ ಭಾಷೆಯಾಯಿತು. ಅಲ್ಲದೆ ಫ್ರಾನ್ಸ್ ಅವಳೊಪ್ಪಿದ ದೇಶವಾಯಿತು.’

ನೀಸ್ ನಗರದಲ್ಲಿ ದತ್ ಕುಟುಂಬ ಭೂಮಧ್ಯ ಪ್ರದೇಶದ ರಮಣೀಯ ದೃಶ್ಯಗಳನ್ನು ಕಂಡು ತಣಿದರು. ನೀಲಸಾಗರ, ಬಣ್ಣಬಣ್ಣದ ಬೋಗನ್‌ವಿಲ್ಲ ಹೂಗಳು, ಪರ್ವತಗಳ ಇಳಿಜಾರಿನಲ್ಲಿನ ಕೆಂಪು ಹೆಂಚಿನ ಹೊಸ ಬಣ್ಣದ ಮನೆಗಳು. ದ್ರಾಕ್ಷಿ ತೋಟಗಳು, ವಿಹಾರ ಪಥಗಳು ಇವುಗಳ ನಡುವೆ ದತ್ ಕನ್ಯೆಯರು ಹಕ್ಕಿಗಳಂತೆ ಹಾರಾಡಿದರು. ಕನೆಸ್ ಹಾಗೂ ಮೊನಾಕೊಗಳಿಗೆ ಅವರು ಹೋಗಿದ್ದರೆನ್ನುವುದು ನಮಗೆ ಗೊತ್ತಷ್ಟೆ. ಈ

ಪ್ರಯಾಣ ಅವರನ್ನು ಮಂತ್ರಮುಗ್ಧರನ್ನಾಗಿಸಿತು. ಫ್ರೆಂಚ್ ಜೀವನ ಸಂಸ್ಕೃತಿಗಳ ರ[illegible] ಸ್ವಾದ ಮಾಡಿದರು ಅವರು. ಆದರೆ ದಕ್ಷಿಣ ಫ್ರಾನ್ಸಿನ ಈ ಆರೋಗ್ಯಕರ ವಾತಾವರಣವು[illegible] ಅರುವಿಗೆ ಒಗ್ಗಲಿಲ್ಲ. ತೋರುವಿಗಿಂತ ಸೂಕ್ಷ್ಮ ಆಕೆ. ಆಕೆಯ ಆರೋಗ್ಯ ಕೆಟ್ಟಿ[illegible] ಚೇತರಿಸಿಕೊಂಡರೂ ಮತ್ತೆ ಅಸ್ವಸ್ಥಳಾದಳು. ದತ್ ಕುಟುಂಬ ಫ್ರಾನ್ಸ್‌ನ್ನು ಬಿಟ್ಟು ತೆರಳುವುದು ಅನಿವಾರ್ಯವಾಯಿತು. ಅವರು ಫ್ರಾನ್ಸಿನಲ್ಲಿ ಕಳೆದದ್ದು ಕೆಲವೇ ತಿಂ[illegible]ಳಾದರೂ ಅದರ ಪ್ರಭಾವ ಅವರ ಮೇಲೆ ಅಚ್ಚಳಿಯದೆ ಮೂಡಿತು.

ಫ್ರಾನ್ಸಿನ ಮೂಲಕ ಇಂಗ್ಲೆಂಡಿಗೆ ತನ್ನ ಕುಟುಂಬವನ್ನು ಕರೆದುಕೊಂಡು ಹೋಗಲು ಗೋವಿಂದ ಚಂದ್ರ ನಿರ್ಧರಿಸಿದ. ಆದರೆ ಇಂಗ್ಲೆಂಡಿನ ತೀವ್ರವಾದ ಚಳಿ ಅರುವಿಗೆ ಒಗ್ಗು[illegible]ವುದೋ ಇಲ್ಲವೋ ಎಂಬುದನ್ನು ಅವ ಯೋಚಿಸಿದನೋ ಇಲ್ಲವೋ ತಿಳಿಯದು.

1870 ರ ವಸಂತದಲ್ಲಿ ಅವರು ತಮ್ಮ ಹಳೆಯ ಸ್ನೇಹಿತರಾದ ಶ್ರೀಮಂತಿ ಬಾದ್ಲ[illegible]ರೊಂದಿಗೆ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು.

ತೋರು ಅರು ಇವರ ಬಗ್ಗೆ ಶ್ರೀಮಂತಿ ಬಾದ್ಲೆನ್ ಹೀಗೆ ಬರೆದಿದ್ದಾರೆ: "ಚರಿತ್ರೆ ಹಾಗೂ ಕಲೆಯ ಬಗ್ಗೆ ಅವರ ಪಾಂಡಿತ್ಯ ಅಪಾರವಾಗಿತ್ತು. ಅದೆಲ್ಲವನ್ನು ಕಲಿಸಿದ್ದು ಅವರ ತಂದೆ. ನಾವು ಫ್ರಾನ್ಸ್ ಬಿಡುವ ವೇಳೆಗೆ ಒಂದು ದಿನ ಅವರನ್ನು ಕ್ಲ್ಯೂನಿ ವಸ್ತು ಸಂಗ್ರಹಾಲಯಕ್ಕೆ ಕರೆದುಕೊಂಡು ಹೋದೆವು. ಅಲ್ಲಿ ಮೇಜಿನ ಮೇ[illegible] 'ಅಳುತ್ತಿರುವ ಪಿತೃಮಾತೆ' ಯ ದೊಡ್ಡ ಕಲಾ ಪ್ರತಿಮೆಯಿತ್ತು. ಶ್ರೀಮಂ[illegible] ಬಾದ್ಲೆನ ಅಥವಾ ಅವರ ತಂದೆಯೂ ಅದನ್ನು ಅವರಿಗೆ ತೋರಿಸಿ 'ಇದಾರು ಗೊತ್ತೆ' ಎಂದರು. ಒಂದು ನಿಮಿಷವೂ ಯೋಚಿಸದೆ ಅವರು 'ಗಳುತ್ತಿರುವ ಪಿತೃಮಾತೆ[illegible] ಬೇಕು' ಎಂದರು. ನನಗೆ ಆಶ್ಚರ್ಯವಾಯಿತು. ಅವರು ರೋಮಿನಂತೆ ಹೋಗಿರ[illegible]ಲಿಲ್ಲ. ಪುಸ್ತಕಗಳನ್ನು ಓದಿ ಅವರು ಈ ವಿಷಯವನ್ನು ತಿಳಿದಿದ್ದರು."

ಪ್ಯಾರಿಸ್ ನಗರ ಗೋವಿಂದಚಂದ್ರನನ್ನು ಬಹಳವಾಗಿ ಆಕರ್ಷಿಸಿತು. ಅ[illegible] ಪ್ರಪಂಚದ ರಾಜಧಾನಿ ಎನಿಸಿದ್ದ ಪ್ಯಾರಿಸ್ಸಿನಲ್ಲಿ ತಂಗಲು ನಿರ್ಧರಿಸಿದ. ಪ್ಯಾರಿಸ್ ಎಷ್ಟಾ[illegible]ದರೂ ಸೌಂದರ್ಯ, ಸೌಕರ್ಯ, ಮನರಂಜನೆ, ಶೈಕ್ಷಣಿಕ ಎಲ್ಲ ದೃಷ್ಟಿಗಳಿಂದಲೂ ನ[illegible]ಗಳಲ್ಲೇ ಅತ್ಯುತ್ತಮ ನಗರವಲ್ಲವೆ?

ಹರಿಹರದಾಸ್ ಹೀಗೆ ಹೇಳುತ್ತಾರೆ: 'ಬಹಳ ದಿನ ಇಲ್ಲಿ ತಂಗಿದ್ದು ಅನಂತರ ಅವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು.' ಆದರೆ ನಿಜವಾಗಿ ಅವರು ಅಲ್ಲಿ 'ಬಹಳ ದಿ[illegible] ತಂಗಿರಲಾರರು. ಏಕೆಂದರೆ ಅವರು ಫ್ರಾನ್ಸಿನಲ್ಲಿ ಇದ್ದುದೇ ಒಟ್ಟಿನಲ್ಲಿ ನಾಲ್ಕು ತಿಂಗಳು ಅದರಲ್ಲಿ ಬಹುಭಾಗವನ್ನು ಅವರು ನೀಸ್ ಪಟ್ಟಣದಲ್ಲಿ ಕಳೆದರು.

ಕೊನೆಗೆ ಅವರು ಬಲೋನಿನ ಮಾರ್ಗವಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು[illegible] 1874 ರ ಫೆಬ್ರವರಿ ತಿಂಗಳ ಬೆಂಗಾಲ್ ಮ್ಯಾಗಜೈನ್‌ನಲ್ಲಿ ಇವರು ಬರೆದಿದ್ದ ಫೋಕ್‌ಸ್ಟೋನ್‌ಗೆ ಹೋಗಲು ಕಾಲುವೆಯನ್ನು ದಾಟಿದ್ದರ ಬಗ್ಗೆ ಒಂದು ಸ್ವಾರಸ್ಯಕ[illegible] ಲೇಖನವಿದೆ. ಭಾರತದಿಂದ ಮಾರ್ಸೇಲ್ಸಿಗೆ [illegible] ದಿನಗಳಲ್ಲಿ ಹೋಗ[illegible] ಉಪದ್ರವದ ಪ್ರವಾಸದಿಂದಲೂ ಇಲ್ಲದೆ ಶ್ರೀಮಂತ ಹೋಗಲುಬಲ್ಲವರಿಗೆ ಕಾಣುವಂಥ ದ[illegible] ದಾಟಿದ್ದ ಚಿಕ್ಕದೊಂದು ಬ್ರಿಟಿಷ್ ಕಾಲುವೆಯನ್ನು ದಾಟುವಾಗ ಅನುಭವಿಸಿದ[illegible]

ಬಂದ ಅನೇಕರಿಗಾಶ್ಚರ್ಯ ಆಗುತ್ತಿತ್ತು. ಈ ಎರಡು ಭಿನ್ನ ಅನುಭವಗಳನ್ನು ಕುರಿತು ಗೋವಿಂದ ಚಂದ್ರ ಆ ಲೇಖನದಲ್ಲಿ ಬರೆದಿದ್ದಾನೆ. ಥ್ಯಾಕರೆ ಬಲೋನನ್ನು ಕುರಿತು ಬರೆದಿದ್ದಾನಾದ್ದರಿಂದ ಅಲ್ಲಿ ತಂಗಬಹುದೇನೋ ಎಂದುಕೊಂಡರೂ ಗೋವಿಂದ ಚಂದ್ರನಿಗೆ ಆ ಸ್ಥಳ ಹಿಡಿಸಲಿಲ್ಲ. ಬಹುಪಾಗಿ ನೋಡಿದರೆ ಆ ಸ್ಥಳ ಬರಿದು ನಾವಿಕರಿಗಾಗಿಯೇ ಕಟ್ಟಿದಾದ ವಿಹಾರಗಳಂತಿದ್ದ ಮನೆಗಳ ಒಂದು ಸಣ್ಣ ಕೊಳಕು ಕಡಲೂರು. ಹವೆ ಚೆನ್ನಾಗಿದ್ದು ಬಿಸಿಲಿದ್ದು ಮೋಡವಿಲ್ಲದೆ ಇದ್ದುದರಿಂದ ಬಲೋನಿನಲ್ಲಿ ಕಾಲಕಳೆಯಲು ಇಚ್ಛಿಸದೆ ಕಾಲುವೆಯನ್ನು ದಾಟಲು ನಿರ್ಧರಿಸಿದರು. ಫೋಕ್‌ಸ್ಟನ್‌ನಲ್ಲಿಯೂ ನಿಲ್ಲಲು ಇಚ್ಛಿಸದೆ ಲಂಡನ್ನಿಗೆ ರೈಲು ಹತ್ತಿದರು.

ದತ್ ಕುಟುಂಬದವರು ಫ್ರಾನ್ಸಿನಲ್ಲಿ ಕೆಲವೇ ತಿಂಗಳಿದ್ದರೂ ಫ್ರಾನ್ಸಿನ ಬಗ್ಗೆ ತೋರುವಿನ ಪ್ರೇಮ ಫ್ರೆಂಚ್ ಭಾಷೆಗಾಗಲಿ ಅಥವಾ ಆ ದೇಶದ ನಿಸರ್ಗ ಸೌಂದರ್ಯದ ಬಗೆಗಾಗಲಿ ಮಾತ್ರ ಸೀಮಿತವಾಗಿರಲಿಲ್ಲ. ಕ್ಲಾರಿಸೆ ಬಾದರ್ ಹೇಳಿರುವಂತೆ ಆಕೆ ನಮ್ಮ ದೇಶವನ್ನು ಪ್ರೀತಿಸಿದಳು. ಅಲ್ಲದೆ ಫ್ರಾನ್ಸ್ ದುಃಸ್ಥಿತಿಯಲ್ಲಿದ್ದಾಗ ತನ್ನ ಈ ಪ್ರೀತಿಯನ್ನು ತೋರಿಸಿದಳು. ಆಗ ಫ್ರಾನ್ಸಿಗೂ ಪ್ರಷ್ಯಕ್ಕೂ ಯುದ್ಧವಾಗುತ್ತಿತ್ತು. ತೋರುವಿಗೆ ಆಗಿನ್ನೂ ಹದಿನಾಲ್ಕು ವರುಷ ವಯಸ್ಸು. ಆದರೆ ಆಗಲೇ ಫ್ರಾನ್ಸಿನ ರಾಜಕೀಯದಲ್ಲಿ ಬಹಳ ಆಸಕ್ತಿ. ಬಿಸ್ಮಾರ್ಕನ ರಕ್ತಪಾತ ನೀತಿ ಅವಳಿಗೆ ಹಿಡಿಸುತ್ತಿರಲಿಲ್ಲ. ಬಿಸ್ಮಾರ್ಕನ ಹೆಸರು ಹೇಳದಿದ್ದರೂ ಫ್ರಾನ್ಸಿನ ಸ್ಥಿತಿಯನ್ನು ಕಂಡು ಕಣ್ಣೀರಿಟ್ಟಳು.

ಯುದ್ಧ ಆರಂಭವಾದಾಗ ತೋರು ಹೀಗೆ ಬರೆದಳು. 'ಫ್ರಾನ್ಸಿನ ಬಗ್ಗೆ ನನ್ನ ತುಂಬ ಸಹಾನುಭೂತಿಯಿದೆ.' ತೋರುವಿಗೆ ಫ್ರೆಂಚ್ ಚರಿತ್ರೆಯಲ್ಲಿ ಎಷ್ಟು ಆಸಕ್ತಿ ಇತ್ತೆಂದರೆ ವಿಕ್ಟರ್ ಹ್ಯೂಗೊ ಫ್ರೆಂಚ್ ವಿಧಾನ ಸಭೆಯಲ್ಲಿ ಮಾಡಿದ ಭಾಷಣವನ್ನು ಅನುವಾದಿಸಿ ಬೆಂಗಾಲ್ ಮ್ಯಾಗಜೈನ್‌ನಲ್ಲಿ 'ಸಮಕಾಲೀನ ಚರಿತ್ರೆಯ ಒಂದು ದೃಶ್ಯ' ಎಂಬ ಹೆಸರಿನಲ್ಲಿ ಪ್ರಕಟಿಸಿದಳು. ನೆಪೋಲಿಯನ್ನನನ್ನು ಮತ್ತೆ ಕರೆದು ಫ್ರಾನ್ಸಿನ ರಾಜನೆಂದೇ ಮಾಡುವ ಕೆಲವೊಂದು ಸಂವಿಧಾನಾತ್ಮಕ ಬದಲಾವಣೆಗಳನ್ನು ಮಾಡಬೇಕೆಂಬ ಸೂಚನೆಯನ್ನು ಹ್ಯೂಗೊ ತೀವ್ರವಾಗಿ ಖಂಡಿಸಿದ್ದ. ಪ್ರಜಾಪ್ರಭುತ್ವವಾದಿಯಾಗಿದ್ದ ಹ್ಯೂಗೊ ಚಕ್ರವರ್ತಿಯ ಆಳಿಕೆಯ ತೀವ್ರ ವಿರೋಧಿಯಾಗಿದ್ದ. ತೋರು ಹ್ಯೂಗೋನ ನೀತಿಗೆ ಸಂಪೂರ್ಣ ಬೆಂಬಲವಿತ್ತಂತೆ ಕಾಣುತ್ತದೆ. ಪ್ರಷ್ಯದ ರಾಜನ ವಿರುದ್ಧ ಫ್ರಾನ್ಸ್ ಯುದ್ಧ ಘೋಷಿಸಿದ್ದನ್ನು ವಿರೋಧಿಸಿ 1870 ರಲ್ಲಿ ಥಿಯರ್ ಮಾಡಿದ ಭಾಷಣದ ಅನುವಾದವೊಂದು ಬೆಂಗಾಲ್ ಮ್ಯಾಗಜೈನಿನಲ್ಲಿ ಪ್ರಕಟವಾಯಿತು. ಚಿಕ್ಕ ಹುಡುಗಿಯೊಬ್ಬಳು ವಿದೇಶವೊಂದರ ಚರಿತ್ರೆಯಲ್ಲಿ ಎಷ್ಟು ಆಸಕ್ತಳಾಗಿದ್ದಳು ಎಂಬುದನ್ನು ನೋಡಿದಾಗ ತೋರು ತಾನೇ ಸ್ವತಃ ಎಷ್ಟರ ಮಟ್ಟಿಗೆ ಫ್ರೆಂಚ್ ಹುಡುಗಿಯಾಗಿಬಿಟ್ಟಿದ್ದಳು ಎಂಬುದು ಸ್ಪಷ್ಟವಾಗುತ್ತದೆ.

1871 ನೆ ಜನವರಿ 29, 30 ರ ತನ್ನ ದಿನಚರಿಯಲ್ಲಿ ತೋರು ಫ್ರಾನ್ಸಿನ ಬಗೆಗಿದ್ದ ತನ್ನ ಒಲವನ್ನು ವ್ಯಕ್ತಪಡಿಸಿದ್ದಾಳೆ. ಫ್ರಾನ್ಸಿನ ಬಗೆಗಿದ್ದ ಅವಳ ಪ್ರೇಮ ಫ್ರೆಂಚ್ ಪ್ರಜೆಯ ದೇಶಪ್ರೇಮದೊಂದಿಗೆ ಸರಿದೂಗಬಲ್ಲುದು. 'ನಾವು ಫ್ರಾನ್ಸಿನಲ್ಲಿದ್ದಾಗ ಆ ದಿನಗಳು ಎಷ್ಟು ಸುಂದರವಾಗಿದ್ದುವು. ಎಂಥ ರಸ್ತೆಗಳು! ಎಂಥ ಅನುಪಮ ಸೇವೆ!

ಆದರೆ ಈಗ ಎಂಥ ಅಧಃಪತನ! ನಗರಗಳ ರಾಜನಾಗಿದ್ದ ಫ್ರಾನ್ಸ್ ಈಗ ಎಂತಹ ದಾರುಣ ಸ್ಥಿತಿಯಲ್ಲಿದೆ.' ಫ್ರಾನ್ಸಿನ ಈ ಅಧೋಗತಿಗೆ ಫ್ರಾನ್ಸಿನ ನಾಸ್ತಿಕತ್ವವೇ ಕಾರಣ ಎಂದು ತಿಳಿದಿದ್ದಳು ತೋರು. ಫ್ರಾನ್ಸಿನ ದುಃಸ್ಥಿತಿಗೆ ಫ್ರಾನ್ಸಿಗೆ ದೇವರಿತ್ತ 'ಶಾಪ' ಕಾರಣ ಎಂಬುದು ಅವಳ ನಂಬುಗೆ. 'ಎಲೆ ಫ್ರಾನ್ಸ್, ನಿನ್ನನ್ನು ಎಷ್ಟು ಅಧೋಗತಿಗಿಳಿಸಲಾಗಿದೆ. ನೋಡಿದೆಯಾ, ಈ ಅಪಮಾನವಾದಮೇಲಾದರೂ ನೀನು ಈಗಿನಂತಲ್ಲದೆ ದೇವರ ಸೇವೆ ಮಾಡು. ದೇವರನ್ನು ಪೂಜಿಸು. ಅಯ್ಯೋ ಬಡಪಾಯಿ ಫ್ರಾನ್ಸ್. ನಿನ್ನ ನೋಡಿ ನನ್ನ ರಕ್ತ ಬಸಿದುಹೋಗುತ್ತಿದೆ.'

1870 ಫ್ರಾನ್ಸಿನ ಚರಿತ್ರೆಯಲ್ಲಿ ಸ್ಮರಣೀಯ ವರುಷ. ಇದನ್ನು ಕುರಿತು ತೋರು ಬರೆದ ಕವನದಲ್ಲಿ ಫ್ರಾನ್ಸಿನ ಬಗೆಗೆ ಅವಳಿಗಿದ್ದ ಪ್ರೇಮ ಸ್ಫುಟವಾಗಿ ಪ್ರಕಟವಾಗಿದೆ. ಅಲ್ಲದೆ ಹದಿನೈದು ವರುಷದ ಈ ಯುವತಿಯ ಮನಸ್ಸು ಅಷ್ಟು ಹೊತ್ತಿಗಾಗಲೇ ಎಷ್ಟು ಪ್ರಬುದ್ಧವಾಗಿತ್ತು ಎಂಬುದಕ್ಕೂ ಈ ಕವನ ನಿದರ್ಶನ.

ಫ್ರಾನ್ಸ್
1870

ಇಲ್ಲ ಸತ್ತಿಲ್ಲ — ಸಾವಿವಳಿಗಿಲ್ಲ
ನೆತ್ತರು ಬಸಿದಿರಲು ಬಂದಂಥ ಮೈಮರೆವು ಮಾತ್ರ
ಮುದದಿಂದ ಇಂಗ್ಲೆಂಡು ನೋಡಿಹೋಯಿತು ಅಷ್ಟೆ
ಬಾ ಬಂಧು ದಯಾಸಿಂಧು ಇಲ್ಲ ಹತ್ತಿರಯಾರು
ರಕ್ತದೀಮದುಮಿಂದ ನಿನ್ನನ್ನು ಮಾಡುವರಾರು ಪಾರು?
ಓಸರಿಸು ಕೂದಲವ ಅವಳ ಕಣ್ಣಡ್ಡಲಾಗಿಹುದಲ
ಚೆಲ್ಲು ಕಣ್ಣೀರ ಮುಖದ ಮೇಲೆಲ್ಲ
ರಕ್ತದಲಿ ಮುಳುಗಿಹಳು ಎಚ್ಚರವೆ ಇಲ್ಲ
ಕೊಡು ಕೊಟ್ಟುಬಿಡು, ಕೆಲತೊಟ್ಟು ದ್ರಾಕ್ಷಾಸವ
ಬರುವರೇ ಜನ ಉಳಿಸಲವಳಸುವ? ಇಲ್ಲ ಬರಲಿಲ್ಲ ಯಾರೊಬ್ಬರೂ ಇಲ್ಲ.
ಮನುಕುಲ ಸ್ತಂಭದಶಿರ ನೀನು
ಹೀಗೆಯೋ ಮರೆತಿರುವಿಯೋ ಏನು?
ಸತ್ಯ ಸ್ವಾತಂತ್ರ್ಯ ಚಿಂತನ ಮಂಥನ ಬತ್ತಿಯೆ ಹೋಗಿವೆಯಲ್ಲ
ಹೊಂಗನಸಿನ ಹೊಂಗದಿರಿನ ಕಾಂತಿಯು ಹೊಮ್ಮುವದೇ ನಮ್ಮೊಳಗೆಲ್ಲ
ಕತ್ತಲು ಕತ್ತಲು ಸುತ್ತಲು ನೋಡಿದ ಕಡೆ ಮತ್ತೆಲ್ಲ
ಇಲ್ಲಿಲ್ಲ. ಅಗೋ ಚಲಿಸುತಿಹಳಲ್ಲ! ನೋಟದಲಿ ಬೆಂಕಿಯಾಕಿಡಿ
ಎಚ್ಚರಿಕೆ ಜೋಕೆ ಮುರಿದಾಗಿದೆ ಖಡ್ಗ ಹುಡಿ ಹುಡಿ
ತಾಸೊಂದು ಮಲಗಿದಾ ಮಾತ್ರಕವಳು ಮಲಗಿಯೇ ಬಿಡುವಳೆ ನಿರುತ
ನಿಲ್ಲುವಿರ ಫ್ರಾನ್ಸನ್ನು ಹಂಗಿಸುತ, ಅವಳ ಸುತ್ತ
ಅಟಿಲಾನ ಗುಂಪೆಂದು ಜಯಘೋಷ ಮಾಡುತ್ತ

ಹೀಗಿದ್ದರೂ ಅಗೋ ಅಲ್ಲಿ ಎದ್ದು ನಿಂತಳು ನೋಡಿ
ಸಮರಕ್ಕೆ ಸಿದ್ಧಳಾಗಿಹಳವಳು ಮತ್ತೆ ಶಕ್ತಿ ಮೈಗೂಡಿ
ನಕ್ಷತ್ರ ಕಾಂತಿ ಕಣ್ಣಲ್ಲಿ ಮೂಡಿ
ಬೆಳಗುವದು ಅದು ಜಗವ. ದೇಶ ದೇಶಗಳೆಲ್ಲ ನಮಿಸಲವಳಡಿಗೆ ಬಾಗಿ
ತೋರಿಸಲಿ ದಾರಿ ಮತ್ತೆ ಫ್ರಾನ್ಸ್ ತಾ ಮುಂದೆ ಮುಂದೆ ಹೋಗಿ.

೬. ಇಂಗ್ಲೆಂಡ್

ಇಂಗ್ಲೆಂಡಿನಲ್ಲಿ ದತ್ ಕುಟುಂಬದವರು ಮೊದಲಿಗೆ ಛಾರಿಂಗ್ ಕ್ರಾಸ್ ಹೋಟಲಿನಲ್ಲಿ ತಂಗಿದರು. 1869 ರಲ್ಲಿ ಐ.ಸಿ.ಎಸ್. ಪರೀಕ್ಷೆಗಾಗಿ ಇಂಗ್ಲೆಂಡಿನಲ್ಲಿದ್ದ ರಮೇಶ ಚಂದ್ರ ದತ್ ಅವರಿಗಾಗಿ ಗ್ರಾಸ್‌ವೆನರ್ ಹೋಟಲಿನಲ್ಲಿ ತಂಗಲು ಸ್ಥಳ ಮಾಡಿಕೊಟ್ಟನೆಂದು ಹೇಳಿದ್ದಾನೆ. ಮುಂದೆ ಅವರು ಆಸ್ಲೊ ಚೌಕದ ಸಿಡ್ನಿ ಸ್ಥಳ ಎಂಬಲ್ಲಿದ್ದ ಒಂಬತ್ತನೆಯ ನಂಬರಿನ ಮನೆಗೆ ಹೋದರು. ಆ ಮನೆಯಲ್ಲಿದ್ದಾಗಲೆ ತೋರು ಅರು ಫ್ರೆಂಚ್ ಕಾವ್ಯವನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವ ಕಾರ್ಯವನ್ನು ಆರಂಭಿಸಿದ್ದು. ರಮೇಶ್ ಚಂದ್ರ ಹೀಗೆ ಹೇಳಿದ್ದಾನೆ. 'ಅವರು ಅಲ್ಲಿದ್ದಾಗ ನಾನು ಅನೇಕ ಸಲ ಅವರಿದ್ದಲ್ಲಿಗೆ ಹೋಗಿದ್ದೆನೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲಿಗೆ ಹೋಗಿ ಮಧುರವಾದ ವಾತಾವರಣದಲ್ಲಿ ಅನೇಕ ಗಂಟೆಗಳನ್ನು ಕಳೆದು ಬರುತ್ತಿದ್ದೆ. ಸಾಹಿತಿಕ ಬರವಣಿಗೆ, ಧಾರ್ಮಿಕ ಅಧ್ಯಯನ ಇವು ಗೋವಿಂದ ಚಂದ್ರ ಹಾಗೂ ಆತನ ಕುಟುಂಬದವರ ಮುಖ್ಯ ಹವ್ಯಾಸ. ಅಲ್ಲಿ ದತ್ ಕುಟುಂಬದವರಿಗೆ ಅನೇಕ ನಿಷ್ಠಾವಂತ ಕ್ರೈಸ್ತರ ಪರಿಚಯವಾಯಿತು. ದತ್ ಫ್ಯಾಮಿಲಿ ಆಲ್ಬಮ್ ಪ್ರಕಟವಾದಾಗ ಗೋವಿಂದ ಚಂದ್ರ ನನಗೊಂದು ಪ್ರತಿ ಕೊಟ್ಟನು. ಅಲ್ಲದೆ ತೀರಿಕೊಂಡ ತನ್ನ ಮಗನ ಬಗ್ಗೆ ತಾನು ಬರೆದಿದ್ದ ಪದ್ಯಗಳನ್ನು ಕಂಬನಿಮಿಡಿಯುತ್ತ ಓದಿದನು.'

ತೋರುವಿನ ಬಂಧು ಅರುಣ ಚಂದ್ರ ತೋರುವಿನ ಮೆಚ್ಚಿನ ಗೆಳೆಯನೂ ಆಗಿದ್ದ. ತೋರು ಯೂರೋಪಿನಿಂದ ಈತನಿಗೆ ಅನೇಕ ಪತ್ರಗಳನ್ನು ಬರೆದಳು. ಅತ ಮುಂದೆ ಕೇಂಬ್ರಿಜ್‌ನ ಕಾರ್‌ಪಸ್ ಕ್ರಿಸ್ಟಿ ಕಾಲೇಜಿನ ಪಥವೀಧರನಾಗಿ ಇಂಗ್ಲೆಂಡಿನಲ್ಲಿಯೇ ನೆಲೆಸಿ ಆಂಗ್ಲ ಯುವತಿಯೊಬ್ಬಳನ್ನು ವಿವಾಹವಾದನು.

ತೋರು ಅರು ಇಬ್ಬರೂ ಲಂಡನ್ನಿನಲ್ಲಿ ಸಂತೋಷವಾಗಿದ್ದರು. ಅಲ್ಲದೆ ಅನೇಕ ಪ್ರಮುಖರ ಪರಿಚಯವನ್ನೂ ಪಡೆದರು. ಸರ್ ಜಾರ್ಜ್ ಮ್ಯಾಕ್‌ಪಾರೆನ್ ಎಂಬಾತನ ಪತ್ನಿ ಇವರಿಗೆ ಸಂಗೀತವನ್ನು ಕಲಿಸಿದಳು. ಅಲ್ಲದೆ 1862 ರಿಂದ 1867 ರವರೆಗೂ ಬಂಗಾಳದ ಗವರ್ನರಾಗಿದ್ದ ಸರ್ ಬಾರ್ಟ್ಲ್ ಫ್ರೇರ್ ಮೊದಲಾದ ಅನೇಕರ ಪರಿಚಯು

ವಾಯಿತು. ವಿಂಬಲ್‌ಡನ್ನಿನಲ್ಲಿ ಫ್ರೇರ್ ಕುಟುಂಬದ ಜೊತೆ ಮಧುರವಾದ ಅನೇಕ ದಿನಗಳನ್ನು ಕಳೆದೆ ಎಂದಿದ್ದಾಳೆ ತೋರು. ವಿಕ್ಟರ್ ಹ್ಯೂಗೋನ ಸ್ನೇಹಿತನೂ ಷೇಕ್ಸ್‌ಪಿಯರ್ ಸಾಹಿತ್ಯವನ್ನು ಫ್ರೆಂಚ್ ಭಾಷೆಗೆ ಭಾಷಾಂತರಿಸಿದವನೂ ಆದ ಕೆವೆಲಿಯರ್ ಡಿ. ಛಾಟೆಲೈನ್ ಎಂಬಾತ ಇವರ ಸ್ನೇಹಿತರಲ್ಲೊಬ್ಬನಾದ.

ಅರು ವಯಸ್ಸಿನಲ್ಲಿ ದೊಡ್ಡವಳಾದರೂ ಓದಿನಿಂದ ಹಿಡಿದು ಎಲ್ಲದರಲ್ಲೂ ತೋರುವೇ ಮುಂದು. ಆದರೆ ಈ ಇಬ್ಬರು ಸೋದರಿಯರ ನಡುವಿನ ಒಲವು, ಪ್ರೇಮ, ಬಾಂಧವ್ಯ ಪರಿಪೂರ್ಣವಾಗಿದ್ದವು. ಹರಿಹರದಾಸ್ ಈ ಕೆಳಗಿನ ಸಂವಾದವನ್ನು ಬರೆದಿಟ್ಟಿದ್ದಾನೆ.

ಜಿ. ಸಿ. ದತ್, "ಅರು ಅಂದಹಾಗೆ ನೀನು ಕಲ್ಕತ್ತೆಯಲ್ಲಿದ್ದಾಗ ಲಾರ್ಡ್ ಎಲ್ (ಲಾರ್ಡ್ ಲಾರೆನ್ಸ್, ಇಂಡಿಯಾದ ವೈಸ್‌ರಾಯ್ 1864-1867) ನನ್ನ ಬಹಳವಾಗಿ ನೋಡಬೇಕೆಂದಿದ್ದೆಯಲ್ಲ. ಲಾರ್ಡ್ ಎಲ್ ಈಗ ನಮ್ಮಲ್ಲಿಗೇ ಬಂದಿದ್ದಾರೆ."

ಲಾರ್ಡ್ ಎಲ್: ಏನು ನೀನು ನನ್ನನ್ನು ಕಾಣಲು ಬಯಸಿದ್ದೆಯ? ಒಳ್ಳೆಯದು. ಆದರೆ ಈಗ ಏನನ್ನು ಕಾಣುತ್ತಿದ್ದೀಯ. ಬೇಸತ್ತ ಮುದುಕನನ್ನು ನೋಡುತ್ತಿದ್ದೀಯ ಅಲ್ಲವೆ? ನಿನ್ನ ಕೈಯಲ್ಲಿರುವ ಪುಸ್ತಕ ಯಾವುದು?

ಅರು: ಮ್ಯಾಲಕಳ ಕಾದಂಬರಿ

'ಲಾರ್ಡ್ ಹ್ಯಾಲಿಫ್ಯಾಕ್ಸ್.'

ಲಾರ್ಡ್ ಎಲ್: ಆ! ಕಾದಂಬರಿಗಳನ್ನು ಬಹಳ ಓದಬೇಡ. ನೀನು ಚರಿತ್ರೆ ಓದಬೇಕು. ಅರುವಿನಿಂದ ಉತ್ತರವಿಲ್ಲ. ತೋರು ಅಕ್ಕನಿಗಾಗಿ ಉತ್ತರಿಸಿದಳು.

'ನಮಗೆ ಕಾದಂಬರಿ ಓದಲು ಇಷ್ಟ.'

ಲಾರ್ಡ್ ಎಲ್: ಯಾಕೆ?

ತೋರು: ಯಾಕೆಂದರೆ ಕಾದಂಬರಿ ಸತ್ಯ. ಚರಿತ್ರೆ ಸುಳ್ಳು.

ತೋರುವಿನ ಈ ಮಾತುಗಳ ಬಗ್ಗೆ ಬರೆಯುತ್ತ ಕ್ಲಾರಿಸೆ ಬಾದರ್ ತೋರುವಿನ ಫ್ರೆಂಚ್ ಕಾದಂಬರಿಗೆ ಬರೆದ ಮುನ್ನುಡಿಯಲ್ಲಿ ಹೇಳಿದ್ದಾಳೆ: 'ತೋರು ಹೀಗೆ ವಿರೋಧಾಭಾಸವಾಗಿ ಮಾತಾಡಿ ಇತಿಹಾಸಕ್ಕಿಂತ ಪುರಾಣದ ಕಡೆಗೇ ಒಲವು ಹೆಚ್ಚಾಗಿರುವ ಕಾವ್ಯಾರಾಧಕ ಹಿಂದೂ ಜನಾಂಗದ ಕುವರಿ ತಾನೆಂಬುದನ್ನು ಸ್ಪಷ್ಟಪಡಿಸಿದಳು.'

ಅಕ್ಕನಿಗೆ ಮುಂದಾಳಾಗಿರುತ್ತಿದ್ದ ತೋರುವನ್ನು ಅರುವಾಗಲಿ, ಅವಳ ತಂದೆಯಾಗಲಿ ವಿರೋಧಿಸಲಿಲ್ಲ. ಕಾಲಕ್ರಮೇಣ ಅರು ತೋರುವನ್ನು ಎಷ್ಟು ಅವಲಂಬಿಸಿದಳೆಂದರೆ ಅವರಿಬ್ಬರಲ್ಲಿ ಹಿರಿಯಳು ಯಾರು ಎಂದು ಜನ ಕೇಳತೊಡಗಿದರು. ತೋರುವಿನ ಜ್ಞಾಪಕಶಕ್ತಿ ಅಸಾಧಾರಣ. ಭಾಷಾಂತರಗಳನ್ನು ಬಾಯಿಪಾಠ ಮಾಡಿದಂತೆ ಹೇಳಬಿಡುತ್ತಿದ್ದಳು. ತೋರು ಏನನ್ನೂ ಬಿಟ್ಟುಬಿಡುತ್ತಿರಲಿಲ್ಲವೆಂದೂ ಪ್ರತಿಯೊಂದನ್ನೂ ಕಷ್ಟಪಟ್ಟು ಅಭ್ಯಾಸ ಮಾಡುತ್ತಿದ್ದಳೆಂದೂ ಗೋವಿಂದಚಂದ್ರ ಹೇಳಿದ್ದಾನೆ. ಏನಾದರೂ ತಿಳಿಯದೆ ಹೋದಲ್ಲಿ ಅರ್ಥಕೋಶ ಶಬ್ದಕೋಶ ವಿಶ್ವಕೋಶಗಳನ್ನೆಲ್ಲ ತಿರುವಿಹಾಕಿ ತನ್ನ ಸಂಶಯವನ್ನು ನಿವಾರಿಸಿಕೊಂಡು ಅದರ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುತ್ತಿದ್ದಳು. ಸಮಸ್ಯೆಯನ್ನು ಬಗೆಹರಿಸದೆ ಬಿಡುತ್ತಿರಲಿಲ್ಲ. ಯಾವುದಾದರೂ ಫ್ರೆಂಚ್, ಇಂಗ್ಲಿಷ್ ಅಥವಾ ಸಂಸ್ಕೃತ ಪದದ ಬಗ್ಗೆ ತಂದೆಗೂ ಮಗಳಿಗೂ

ಏನಾದರೂ ವಿವಾದವಾದರೂ ತೋರು ಹೇಳಿದ್ದೇ ಸರಿಯಾಗುತ್ತಿತ್ತು. ಪಣತೊಟ್ಟರೆ ತೋರುವಿಗೇ ಗೆಲವು. ಗೋವಿಂದ್ ಹೀಗೆ ಬರೆದಿದ್ದಾನೆ: 'ಅವಳೇನಾದರೂ ಸೋತರೆ ಆ ದೃಶ್ಯವನ್ನು ನೋಡುವುದಕ್ಕೆ ಬಹಳ ಸ್ವಾರಸ್ಯವಾಗಿರುತ್ತಿತ್ತು. ಮೊದಲು ಸ್ವಾರಸ್ಯವಾದ ದೊಡ್ಡ ನಗೆ, ಆಮೇಲೆ ತನ್ನ ತೆಳ್ಳನೆಯ ಕೈಗಳಿಂದ ನನ್ನ ನರೆತ ಗಡ್ಡವನ್ನು ಸವರುತ್ತಿದ್ದಳು. ಆಮೇಲೆ ಅವಳ ಮೆಚ್ಚಿನ ಕವಯಿತ್ರಿ ಎಲಿಜಬೆತ್ ಬ್ಯಾರೆಟ್ ಬ್ರೌನಿಂಗಳಿಂದ ಒಂದು ಸಾಲು — ಹರಟೆಮಲ್ಲನೆ ನೀನೆಷ್ಟಾದರೂ ಹಿರಿಯ, ಹೆಚ್ಚು ತಿಳಿದವನು ಅಲ್ಲದೆ ಗಂಡಸು — ಇದೋ ಅಥವಾ ಇಂಥದೇ ಒಂದು ವಾಕ್ಯ.'

1837 ರಿಂದ 1843 ರವರೆಗೂ ಕಲ್ಕತ್ತೆಯಲ್ಲಿ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿದ್ದ ಸರ್ ಎಡ್ವರ್ಡ್ ರಯಾನನಿಗೂ ದತ್ ಕುಟುಂಬದವರಿಗೂ ಬಹಳ ಸ್ನೇಹ. ಆತ ವಿಕ್ಟೋರಿಯಾ ರಾಣಿಯ ಕಾಲದ ಪ್ರಸಿದ್ಧ ಬರಹಗಾರರಾದ ಡಿಕೆನ್ಸ್, ಥ್ಯಾಕರೆ, ಇವರ ಸ್ನೇಹಿತನಾಗಿದ್ದ. 1878 ರ ಜುಲೈ ತಿಂಗಳ ಬೆಂಗಾಲ್ ಮ್ಯಾಗಜೈನಿನಲ್ಲಿ ಗೋವಿಂದ ಚಂದ್ರ ತಾನು ಸರ್ ಎಡ್ವರ್ಡ್‌ನನ್ನು ಕಾಣಲು ಹೋದ ಸಂದರ್ಭವನ್ನು ಕುರಿತು ಸ್ಮರಣ ಲೇಖನವೊಂದನ್ನು ಬರೆದಿದ್ದಾನೆ. ಸರ್ ಎಡ್ವರ್ಡ್ ಹುಡುಗಿಯರನ್ನು ಕುರಿತು ಕೇಳಿದ ಪ್ರಶ್ನೆಗಳನ್ನೂ ಅದಕ್ಕೆ ಅವರಿತ್ತ ದಿಟ್ಟ ಉತ್ತರಗಳನ್ನೂ ನಾವಿಲ್ಲಿ ಸ್ಮರಿಸುವುದು ಸೂಕ್ತ. ಉದಾಹರಣೆಗೆ 'ನಿಮಗೆ ಥ್ಯಾಕರೆಯ ಮಕ್ಕಳು ಗೊತ್ತೆ? ಅವರು ನಿಮ್ಮ ಮನೆಯ ಪಕ್ಕದಲ್ಲೇ ಇದ್ದಾರೆ.' ತೋರುವಿಗೆ ಅವರು ಗೊತ್ತಿರಲಿಲ್ಲ ಅವಳು ಥ್ಯಾಕರೆಯ ಮಗಳನ್ನು ಮುಂದೆ ಕೇಂಬ್ರಿಜ್‌ನಲ್ಲಿ ಸಂಧಿಸಿದಳು.

ಮುಂದಿನ ಪ್ರಶ್ನೆ

"ನಿನಗೆ ಥ್ಯಾಕರೆಯ ಕಾದಂಬರಿಗಳಲ್ಲಿ ಯಾವುದು ಇಷ್ಟ?"

ತೋರು ತಡಮಾಡದೆ ಉತ್ತರಿಸಿದ್ದಳು. 'ನನಗೆ ಎಸ್‌ಮಂಡ್ ಕಾದಂಬರಿಯೇ ಇಷ್ಟ. ಪೆನ್‌ಡೆನ್ನಿಸ್ ಜನಪ್ರಿಯ ಕಾದಂಬರಿ. ಆದರೆ ಎಸ್‌ಮಂಡ್ ಹೆಚ್ಚು ಕಲಾತ್ಮಕ.'

ತನಗೆ ಉಳುಕಿದ್ದರಿಂದ ತಾನು ಎರಡು ವಾರ ಕಾಲ ಮನೆಯಲ್ಲೇ ಇರಬೇಕಾಯಿತೆಂದು ಅಕ್ಟೋಬರ್ ಏಳರಂದು ತನ್ನ ಬಂಧು ಅರುಣ್‌ಗೆ ಪತ್ರಬರೆದಳು. 'ಬ್ರಾಮ್‌ಟನ್ ಮನೆಯಲ್ಲಿ ಪಿಯಾನೊ ಇಲ್ಲ. ಆದ್ದರಿಂದ ಅಪ್ಪ ಒಂದು ಪಿಯಾನೊ ಬಾಡಿಗೆಗೆ ತರುತ್ತಾರೆ.'

ತೋರು ಅರು ಇವರಿಗೆ ಪಾಠ ಹೇಳಿಕೊಡಲು ಶ್ರೀಮತಿ ಲಾಲೆಸ್ ಎಂಬ ಉಪಾಧ್ಯಾಯಿನಿಯನ್ನು ನೇಮಿಸಲಾಯಿತು. ಬಂಧು ಉಮೇಶನಿಗೆ ಬರೆದೊಂದು ಪತ್ರದಲ್ಲಿ ಹುಡುಗಿಯರು ಲಂಡನ್ನಿನಲ್ಲಿ ತಾವು ಹೇಗೆ ಕಾಲ ಕಳೆಯುತ್ತಿದ್ದರು ಎಂಬುದರ ಸಾರಾಂಶವಿದೆ. ಆರೋಗ್ಯ ಅಷ್ಟು ಸರಿಯಾಗಿಲ್ಲದಿದ್ದ ಈ ಇಬ್ಬರು ಹುಡುಗಿಯರಿಗೆ ಆ ವೇಳಾಪಟ್ಟಿ ಸ್ವಲ್ಪ ಕಠಿಣವೇ ಆಗಿತ್ತಾದರೂ ಮುಂದೆ ಭಾರತದಲ್ಲಿ ತೋರು ಇನ್ನೂ ಹೆಚ್ಚಿನ ಅನಾರೋಗ್ಯದಿಂದ ನರಳಿದಾಗ ಅವಳು ಇನ್ನಷ್ಟು ಕಠಿಣವಾದ ವೇಳಾಪಟ್ಟಿಗೆ ಹೊಂದಿಕೊಂಡು ತನ್ನ ಕೆಲಸಕಾರ್ಯಗಳನ್ನು ರೂಪಿಸಿಕೊಂಡಳು. ತೋರು ಹಾಕಿಕೊಂಡ ಕಾರ್ಯಕ್ರಮ ಸಂಪೂರ್ಣವಾಗಿ ಅವಳೇ ಹಾಕಿಕೊಂಡ ಕಾರ್ಯಕ್ರಮವೊ ಇಲ್ಲವೆ ಅವಳ ತಂದೆಯಿಂದ ಸೂಚಿಸಲ್ಪಟ್ಟದ್ದೊ ಎಂಬುದನ್ನು ಹೇಳುವುದು ಕಷ್ಟ. ಆದರೂ ಅವಳ

ದಿನದ ಕಾರ್ಯಕ್ರಮವನ್ನು ಅವಳೇ ನಿರ್ಧರಿಸಿರಬೇಕು ಎನಿಸುತ್ತದೆ. ಉಮೇಶನಿಗೆ ಈ ರೀತಿ ಬರೆದಿದ್ದಾಳೆ:

'ನಮ್ಮ ವೇಳೆಯೆಲ್ಲಾ ಅಧ್ಯಯನಕ್ಕೆ ಮೀಸಲು. ಆದ್ದರಿಂದ ನನಗೆ ಪತ್ರ ಬರೆಯಲು ಪುರುಸೊತ್ತಿಲ್ಲ. ನಾವು ಮೊದಲು ಏಳರಿಂದ ಏಳೂವರೆಯವರೆಗೂ ಪಿಯೊನೊ ನುಡಿಸುತ್ತೇವೆ. ಆಮೇಲೆ ಉಪಾಹಾರ. ಅದಾದಮೇಲೆ ಬೈಬಲ್ ಪಠಣ. ಅದು ಮುಗಿಯುವ ಹೊತ್ತಿಗೆ ಎಂಟೂವರೆ. ಆಮೇಲೆ ಒಂಬತ್ತೂವರೆವರೆಗೂ ಮತ್ತೆ ಪಿಯಾನೊ ಅಭ್ಯಾಸ. ಇದಾದ ಮೇಲೆ ನಾನು 'ಟೈಮ್ಸ್' ಪತ್ರಿಕೆಯನ್ನು ಓದುತ್ತೇನೆ. ನನಗೆ ಯುದ್ಧದ ವಿಷಯ ಓದುವುದೆಂದರೆ ತುಂಬ ಇಷ್ಟ. ಇದರ ಬಗ್ಗೆ ನಿನಗಿಂತ ಹೆಚ್ಚು ಗೊತ್ತು ಎನ್ನಿಸುತ್ತದೆ ನನಗೆ. ಹತ್ತು ಗಂಟೆಗೆ ಶ್ರೀಮತಿ ಲಾಲಿಸ್ ಬರುತ್ತಾರೆ. ಆಕೆ ವಾಪಸು ಹೋಗುವುದು ಮೂರೂವರೆಗೆ. ಆಮೇಲೆ ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ತಂದೆಯೊಂದಿಗೆ ಕುಳಿತು ಓದುತ್ತೇವೆ. ಶುಕ್ರವಾರದ ದಿನ ಶ್ರೀಮತಿ ಮ್ಯಾಕ್ ಫರೆನ್ ಬರುತ್ತಾರೆ, ಸಂಗೀತ ಕಲಿಸಲು. ಸೋಮವಾರ ನಾವೇ ಶ್ರೀ ಪಾಲರ್ ಅವರಲ್ಲಿಗೆ ಹೋಗಿ ಸಂಗೀತ ಕಲಿಯುತ್ತೇವೆ. ಇದಾದಮೇಲೆ ಮತ್ತೆ ಪಿಯಾನೊ ಅಭ್ಯಾಸ.'

ಇದರ ಜೊತೆಗೆ ಫ್ರೆಂಚ್ ಭಾಷೆಯ ಅಧ್ಯಯನ. ಉಮೇಶನಿಗೆ ಬರೆದ ಪತ್ರವನ್ನು ತೋರು ದೈವಾಸ್ಥೆಯಿಂದ ಕೂಡಿದ ಈ ವಾಕ್ಯದೊಂದಿಗೆ ಮುಗಿಸಿದ್ದಾಳೆ. 'ದೇವರು ನಿನ್ನನ್ನು ಎಲ್ಲ ರೀತಿಯ ಅಪಾಯದಿಂದ, ಪಾಪದಿಂದ ಕಾಪಾಡಲಿ.'

ದತ್ ಕುಟುಂಬ ಲಂಡನ್ನಿನಲ್ಲಿದ್ದಾಗ ಇಟಲಿ ದೇಶದ ಸೇವಕನೊಬ್ಬನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಫ್ರೆಂಚ್ ಭಾಷೆಯಲ್ಲಿ ಸರಾಗವಾಗಿ ಮಾತಾಡುವುದನ್ನು ಕಲಿಯಲು ಅವನೊಡನೆ ಫ್ರೆಂಚ್ ಭಾಷೆಯಲ್ಲೇ ಮಾತಾಡುತ್ತಿದ್ದರು. ಅಡುಗೆಯ ಕೆಲಸಕ್ಕಿದ್ದ ಇಸಬೆಲ್ ಭಾರತೀಯ ತಿಂಡಿತೀರ್ಥಗಳನ್ನು ಮಾಡಲು ಬೇಗ ಕಲಿತಳು. ಚಳಿಗಾಲದಲ್ಲಿ ಎರಡು ಬಾರಿ ಮಂಜು ಬಿದ್ದುದನ್ನೂ ಮಂಜಿನ ಗಡ್ಡೆಗಳೊಡನೆ ಆಡುತ್ತ ಅವರು ಕಾಲ ಕಳೆದುದನ್ನೂ ಕುರಿತು ತೋರು ಬರೆದಿದ್ದಾಳೆ. — ಅವರು ಯಾವಾಗಲಾದರೊಮ್ಮೆ ನಾಟಕ ನೋಡಲು ಹೋಗುತ್ತಿದ್ದರು. ಅವರು ನೋಡಿದ ನಾಟಕಗಳಲ್ಲಿ 'ಏಮಿ ರಾಬ್ ಸಾರ್ಟ್' ಮತ್ತು 'ಎ ಮಿಡ್‌ಸಮರ್ ನೈಟ್ಸ್ ಡ್ರೀಮ್' ಇವೂ ಇದ್ದವು.

1871 ರಲ್ಲಿ ದತ್ ಕುಟುಂಬ ಕೇಂಬ್ರಿಜ್‌ಗೆ ಹೋಗಿ ಪಾರ್ಕರ್ಸ್ ಪೀಸಿಗೆ ಎದುರಾಗಿದ್ದ ರಿಜೆಂಟ್ ರಸ್ತೆಯಲ್ಲಿದ್ದರು. ತೋರು ಅರು ಇಬ್ಬರೂ ಇಲ್ಲಿದ್ದಾಗ 'ಮಹಿಳೆಯರಿಗಾಗಿ ಉಪನ್ಯಾಸಗಳು' ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅಲ್ಲದೆ ಒಬ್ಬ ಫ್ರೆಂಚ್ ಉಪಾಧ್ಯಾಯಿನಿಯನ್ನೂ ನೇಮಿಸಿಕೊಂಡರು. ಕೇಂಬ್ರಿಜ್‌ನಲ್ಲಿ ಅವರ ಗಮನವನ್ನು ಬಹುಮಟ್ಟಿಗೆ ಸೆಳೆದವಳೆಂದರೆ ಮೇರಿ ಮಾರ್ಟಿನ್. ಮೇರಿ ಮಾರ್ಟಿನ್ ತೋರುವಿನ ಜೀವದ ಗೆಳತಿಯಾದಳು. ಈ ಸ್ನೇಹ ಇವರಿಬ್ಬರ ನಡುವಿನ ಅತ್ಯಂತ ಸ್ಮರಣೀಯವಾದ ಶಾಶ್ವತ ಪತ್ರವ್ಯವಹಾರಕ್ಕೆ ಕಾರಣವಾಯಿತು. ಮುಂದೆ ತೋರುವಿನ ಜೀವನ ಚರಿತ್ರೆಯನ್ನು ಹರಿಹರದಾಸ್ ಬರೆಯಲಾರಂಭಿಸಿದಾಗ ಅವನಿಗೆ ಸಹಾಯ ಮಾಡಿದವಳು ಮೇರಿ ಮಾರ್ಟಿನ್ — 1913 ರಲ್ಲಿ ಈತ ಕಲ್ಕತ್ತೆಯಲ್ಲಿ ಮಾರ್ಟಿನಳನ್ನು

ಸಂಧಿಸಿದಾಗ ತೋರುವಿನ ಜೀವನ ಚರಿತ್ರೆಯನ್ನು ಬರೆಯಬೇಕೆಂಬ ತನ್ನ ಅಭಿಲಾಷೆಯನ್ನು ತಿಳಿಸಿದ. ಮೇರಿ ಮಾರ್ಟಿನ್ ಈತನ ಈ ಯೋಜನೆಯಲ್ಲಿ ತುಂಬ ಉತ್ಸಾಹದಿಂದ ಸಹಕರಿಸಿದಳು. ತೋರುವಿನ ಪತ್ರಗಳನ್ನು ಪ್ರಕಟಿಸಲು ಒಪ್ಪಿಗೆಯಿತ್ತಳು. 'ತೋರುದತ್‌ನ ಜೀವನ ಹಾಗೂ ಅವಳ ಪತ್ರಗಳು' ಗ್ರಂಥವನ್ನು ಹರಿಹರದಾಸ್ ಮೇರಿ ಮಾರ್ಟಿನಳಿಗೆ ಅರ್ಪಿಸಿದ.

ಒಲುಮೆಯ ಭಾರತೀಯ ಗೆಳತಿ
ತೋರುದತ್‌ಳ ಈ ಜೀವನ ಸ್ಮೃತಿ
ಮೇರಿ ಇ. ಆರ್. ಮಾರ್ಟಿನರಿಗೆ
ಆಕೆಯ ಸುಕೋಮಲ ಸಹಾನುಭೂತಿಗಾಗಿ
ಕೃತಜ್ಞತೆಯಿಂದ ಅರ್ಪಿತವಾಗಿದೆ.

ಕೇಂಬ್ರಿಜ್‌ನ ಸಿಡ್ನಿ ಸಸೆಕ್ಸ್ ಕಾಲೇಜಿನ ರೆವರೆಂಡ್ ಜಾನ್ ಮಾರ್ಟಿನರ ಒಬ್ಬಳೇ ಮಗಳು ಮೇರಿ ಇ. ಆರ್. ಮಾರ್ಟಿನ್. ಜಾನ್ ಮಾರ್ಟಿನ್ 1859 ರಿಂದ 1884 ರ ವರೆಗೂ ಸೇಂಟ್ ಮ್ಯಾಥ್ಯೂಸ್ ದಿ ಗ್ರೇಟ್‌ನ ಪಾದ್ರಿಯಾಗಿದ್ದರು. ತೋರು ಅರು 1872 ರಲ್ಲಿ ಮೊದಲ ಬಾರಿಗೆ ಮೇರಿಯನ್ನು ಭೇಟಿಯಾದಾಗ ಮೇರಿಗೆ ಹದಿನೈದು ವರುಷ. ತೋರುವಿಗೆ ಹದಿನಾರು. ಮುಂದೆ ಮೇರಿ ಕ್ರೈಸ್ತ ಧರ್ಮ ಪ್ರಚಾರಕಳಾಗಿ ತೋರು ತೀರಿಕೊಂಡ ಬಹಳ ವರ್ಷಗಳ ಮೇಲೆ 1910, 13 ರಲ್ಲಿ ಕಲ್ಕತ್ತೆಗೆ ಭೇಟಿ ನೀಡಿದಳು. ಕೇಂಬ್ರಿಜ್‌ನಲ್ಲಿ ತೋರು ಅವಳನ್ನು ಮೊದಲ ಬಾರಿಗೆ ಭೇಟಿಯಾದಾಗ ಮೇರಿ ಮಲ್‌ವರ್ನ್‌ವೆಲ್ಸ್‌ನಲ್ಲಿನ ಶಾಲೆಯಲ್ಲಿ ಓದುತ್ತಿದ್ದಳು.

ದತ್ ಕುಟುಂಬ ಕೇಂಬ್ರಿಜ್‌ನಲ್ಲಿದ್ದಾಗ ಪರಿಚಯವಾದವರಲ್ಲಿ ಲಕ್ನೋದ ಬಿಷಪರಾದ ಕ್ಲಿಫರ್ಡ್‌ರೂ ಒಬ್ಬರು. ಆತ ದತ್ ಕುಟುಂಬವನ್ನು ಮೊದಲಬಾರಿಗೆ ಕೇಂಬ್ರಿಜ್ ಪ್ರಾಧ್ಯಾಪಕ ಕಾವೆಲ್ಲರ ಮನೆಯಲ್ಲಿ ಸಂಧಿಸಿದ. ಈ ಪ್ರಾಧ್ಯಾಪಕರು ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಅವರಿಗೂ ಅವರ ಪತ್ನಿಗೂ ದತ್ ಕುಟುಂಬದ ಪರಿಚಯವಾಗಿತ್ತು.

ಕೇಂಬ್ರಿಜ್‌ನಿಂದ ದತ್ ಕುಟುಂಬದವರು ಸೇಂಟ್ ಲಿಯೊನಾರ್ಡ್ಸ್ ಆನ್ ಸೀಗೆ ಹೋದರು. ತಾವು ಇಂಗ್ಲೆಂಡಿನಲ್ಲಿದ್ದ ಕಾಲದ ಕೊನೆಯ ದಿನಗಳನ್ನಲ್ಲಿ ಕಳೆದರು. ಇಲ್ಲಿಯೂ ಫ್ರೆಂಚ್ ಭಾಷೆಯ ಅಧ್ಯಯನ ಸತತವಾಗಿ ನಡೆದಿತ್ತು. ಅವರಿಗೆ ಫ್ರೆಂಚ್ ಕಲಿಸಲು ಬರುತ್ತಿದ್ದಾತನ ಹೆಸರು ಜಿರಾರ್ಡ್. 'ನನಗೂ ತಂದೆಯವರಿಗೂ ಫ್ರೆಂಚ್ ಕಲಿಸಲು ಈತ ವಾರಕ್ಕೆ ಎರಡು ಮೂರು ಬಾರಿ ಬಂದು ಹೋಗುತ್ತಿದ್ದರು. ಅರು ನಮ್ಮ ಜೊತೆಯಲ್ಲಿ ಪಾಠಕ್ಕೆ ಬರುತ್ತಿರಲಿಲ್ಲ. (ಅವಳ ಈಚಿನ ಅನಾರೋಗ್ಯ ಅವಳಿಗೆ ಬಹಳ ನಿಶ್ಶಕ್ತಿಯನ್ನುಂಟುಮಾಡಿದೆ) ಆತ (ಜಿರಾರ್ಡ್) ನಿಗೆ ಕಾವ್ಯವೆಂದರೆ ಬಹಳ ಇಷ್ಟ. ದತ್ ಫ್ಯಾಮಿಲಿ ಆಲ್ಬಮಿನಿಂದ ಎರಡು ಮೂರು ಕವನಗಳನ್ನು ಫ್ರೆಂಚ್ ಭಾಷೆಗೆ ಭಾಷಾಂತರಿಸಿದ್ದಾನೆ' ಎಂದು ತೋರು ತನ್ನೊಂದು ಪತ್ರದಲ್ಲಿ ಬರೆದಳು. ಮುಂದೆ ಕಲ್ಕತ್ತೆಯಿಂದ ಕ್ಲಾರಿಸ್ ಬಾದರ್‌ಗೆ ಕಳುಹಿಸಿದ ತೋರು ಅರು ಇವರ ಚಿತ್ರವನ್ನು ತೆಗೆದದ್ದು ಸೇಂಟ್

ಲಿಯೋನಾರ್ಡ್‌ನಲ್ಲಿಯೆ. ಈ ಚಿತ್ರದಲ್ಲಿ ಅರು ಕುಳಿತಿದ್ದಾಳೆ. ನೋಡಲು ನಿಶ್ಶಕ್ತಳಂತೆ ಕಾಣುವುದರ ಜೊತೆಗೆ ಹತ್ತೊಂಬತ್ತು ವರುಷದ ತನ್ನ ವಯಸ್ಸಿಗಿಂತ ದೊಡ್ಡವಳಾಗಿ ಕಾಣುತ್ತಾಳೆ. ಆದರೆ ತೋರು ಉತ್ಸಾಹವೇ ಮೂರ್ತಿವೆತ್ತಂತಿದ್ದಾಳೆ. ಕಪ್ಪನೆಯ ತಲೆಗೂದಲು ಭುಜದಮೇಲೆ ಇಳಿಬಿದ್ದಿದೆ. ಅವಳ ಮುದ್ದು ಮುಖ. ಅವಳ ತೀಕ್ಷ್ಣ ಬುದ್ಧಿಶಕ್ತಿಯು ದ್ಯೋತಕವಾಗಿದೆ. ಅವಳಿಗೆ ಹದಿನೇಳು ವರುಷ. ಆ ಚಿತ್ರವನ್ನು ನೋಡಿದರೆ ಅವಳು ಇನ್ನೈದು ವರಷಗಳಲ್ಲಿ ಕ್ಷಯರೋಗದಿಂದ ಗತಿಸಿ ಹೋಗುವಳೆಂದು ಊಹಿಸುವುದಕ್ಕೂ ಕಷ್ಟ. ಅವಳಕ್ಕನೂ ಅಷ್ಟೆ. ಎರಡೇ ವರುಷಗಳಲ್ಲಿ ತೀರಿಕೊಳ್ಳುವಷ್ಟು ದುರ್ಬಲಳಾಗೇನೂ ಕಾಣಿಸುವುದಿಲ್ಲ. ಆ ಚಿತ್ರದಲ್ಲಿ ಹುಡುಗಿಯರಿಬ್ಬರೂ ಬಹಳ ನೆರಿಗೆಯಿರುವ ಅಂಚಿನ, ವಿಕ್ಟೋರಿಯಾ ರಾಣಿಯ ಕಾಲದಲ್ಲಿದ್ದಂಥ ತುಂಡು ಲಂಗಗಳನ್ನು ಧರಿಸಿದ್ದಾರೆ. ಭಾರತಕ್ಕೆ ಬಂದ ಮೇಲೂ ಈ ತರುಣಿಯರು ಸೀರೆಯನ್ನೇ ಆಗಲಿ ಅಥವಾ ಇನ್ನಾವ ರೀತಿಯ ಭಾರತೀಯ ಉಡುಗೆಯನ್ನೇ ಆಗಲಿ ಏಕೆ ಧರಿಸಲಿಲ್ಲವೆಂದು ಅನ್ನಿಸದೆ ಹೋಗದು.

ತೋರುವಿನ 'ಹೇಸ್ಟಿಂಗ್ಸ್ ಬಳಿ' ಎಂಬ ಕವನ 'ಹಿಂದೂಸ್ಥಾನದ ಪುರಾತನ ಲಾವಣಿಗಳು, ಕಥೆಗಳು' ಸಂಕಲನದಲ್ಲಿರುವ ಒಂದು ಕವನ. ಇದೇನೂ ಅವಳ ಅತ್ಯುತ್ತಮ ಕವನವಲ್ಲ. ಆದರೂ ಇದರಲ್ಲಿ ಅರುವಿನ ದೇಹಸ್ಥಿತಿಯನ್ನೂ ತೋರು ಬಹುವಾಗಿ ಮೆಚ್ಚಿದ ಒಂದು ಸಣ್ಣ ದಯಾಪೂರಿತ ಕೆಲಸದ ವಿವರವನ್ನೂ ಕಾಣುತ್ತೇವೆ.

"ಹೇಸ್ಟಿಂಗ್ಸ್‌ನ ಬಳಿಯಲ್ಲಿ ಶಿಂಗಲಿನ ಮರಳ ದಂಡೆಯಮೇಲೆ
ತಿರುಗಾಡಿ ಬಂದಾಗ ನಾವು —
ಪೀಚ್ ಕಾಯಿಗಳು ಹಣ್ಣಾಗತೊಡಗಿದ್ದುವು ಉದ್ದ ಗೋಡೆಗಳಮೇಲೆ
ಮಾಗಿ ಫಲಪಕ್ವವಾಗಿ ತಾವು.
ದೂರದಲ್ಲಿ ಆಕಾಶದಲ್ಲಿ ಸಾಗರವು ಸೇರಿದಂತೆ
ಕಂಡಿತ್ತು ದಿನ ನಿತ್ಯದ ವ್ಯಾಪಾರ ಮುಗಿಯಿತಂತೆ
ದೂರದೂರಿನ ಗುಂಪು ಗುಜುಗುಜು ಇಲ್ಲಿಗೂ ಬಂದು ಕೇಳಿತು
ಅಪರಿಚಿತರು ನಾವು — ಒಂಟಿ ಬಾಳದು ಸಾಗಿತು.
ತಿರುಗಾಡಿದೆವು ನಾವು ಮೆಲ್ಲಗೆ. ಬೇಸರ ಸುಸ್ತು ಸಂಕಟ ಕಾಡಿತು
ನಮ್ಮಲೊಬ್ಬಳು ಕೊನೆಗೆ ಕುಳಿತಳು
ಗೊಣಗುವಳೇ ಅಲ್ಲ ಅವಳೆಂದಿಗೂ
ಮೋಡ ಕಾರ್ಮೋಡವಾಯಿತು
ಹೆಂಗಸೊಬ್ಬಳು ನಡೆದು ಹೋದಳು ಯುವತಿ ಅಲ್ಲ ಅವಳು
ಅದರಾ ಮುಖ! ಸುಕುಮಾರತೆಯಾಗರವು
ಈ ಸೌಂದರ್ಯ ನಿಧಿಯನ್ನು ಕವಿ ಹಾಡಿಹೊಗಳಿಲ್ಲ
ಋಷಿತೇಜ ಮುಖವನ್ನು ಕಲೆಗಾರ ರಚಿಸಿಲ್ಲ
ನಮ್ಮ ಮುಂದೆಯೆ ಸಾರಿ ಹೋದಳು ಮರಳಿ ಹಿಂದಕೆ ಬಂದಳು
ಒಂದೆ ನೋಟದಿ ನೋಡಿ ತಿಳಿದಳು

ಅಪರಿಚಿತರೆ ನಾವೆಲ್ಲರೂ ನಮ್ಮಲ್ಲೊಬ್ಬಗೆ ನೋವು ಓಂಸೆ
ಕೇಳಿದಳು — ಬಂದಿರೆಲ್ಲಿಂದ ಎಂದು
ಕೆಲನಿಮಿಷ ಮಾತು. ಹೊರತೆಗೆದಳು ಪಾಟಲ ಪುಷ್ಪಗಳ
ಕಣ್ಣೀರಲಿ ಮಿಂದಿಹ ತೆರದಲಿ ಕಾಣುವ ಕೆಂಪು ಗುಲಾಬಿಗಳ
ನಮ್ಮಕ್ಕಗೆ ಕೊಟ್ಟಳು. ಕೊಟ್ಟು ನುಡಿದಳು
'ದೇವ ಕಾಪಾಡಲಿ ನನ್ನೊಲುಮೆಯು ನಿಮ್ಮಿಬ್ಬರನೂ ಎಂದೆಂದೂ.
ಕೆಂಪು ಗುಲಾಬಿ ಬಲು ಸೊಗಸಿನ ಹೂವು
ತಾವರೆಯಷ್ಟಗಲ ಬೆಳೆದ ಚೆಲುವ ಹೂವು
ಮಂಟಪದ ಸಿಂಗರಕೆ ಬಲು ಚೆನ್ನು ಈ ಹೂವು
ಕೆರೆಯಂಗಣದಿ ಬೆಳೆಯುವಾ ಕೆಂದಾವರೆ ಹೂವು
ಆದರಿದ ಕೊಟ್ಟ ಆ ಹೃದಯ ಹೂಗಿಂತ ಚೆಲುವು
ಹೊಸಬರನು ಹರಸಿ ಹೂ ಕೊಟ್ಟ ಒಲವು
ಬದುಕಿಸುವ ಆ ದೇವ ಇದ ತಿಳಿದಿರಲು ಸಾಕು
ಹೂವಿನ ಉಡುಗರೆಯಿದು ಋಣವಾಗಲೇ ಬೇಕು.
ಆ ಹೆಂಗಸಾರೆಂದು ನನಗೆ ತಿಳಿದಿಲ್ಲ
ಅವಳ ಆ ಮುಖವನ್ನು ಇನ್ನು ನೋಡುವುದಿಲ್ಲ.
ಅವಳೆಂದರೆ ನನಗಿನ್ನೂ ಬಲು ಪ್ರೀತಿ ನೋಡಿ
ಸುಖವಾಗಿ ಇರಲೆಂದು ಹರಸುವೆನು ಹಾಡಿ
ಅವಳ ನೆನಪಿನ್ನೆಂದಿಗೂ ಮಾಸುವುದಿಲ್ಲ
ಜೀವನದಿ ದುಃಖ ಬೆರೆತರೂ ಚಿಂತಿಲ್ಲ
ಹೃದಯ ಮಂದಿರದಲ್ಲಿ ಗುಲಾಬಿ ಅರಳಿದೆ
ಶಾಶ್ವತ ತೇಜದ ಹೂವಾಗಿ ಉಳಿದಿದೆ.

ಕೇಂಬ್ರಿಜ್‌ನಲ್ಲಿದ್ದಾಗ 1872 ರ ಡಿಸೆಂಬರಿನಿಂದ 1873 ರ ಏಪ್ರಿಲ್ ತಿಂಗಳ ವರೆಗೂ ದತ್ ಮನೆತನದವರೂ ಮೇರಿ ಮಾರ್ಟಿನಳ ಮನೆಯವರೂ ಸಾಮಾನ್ಯವಾಗಿ ಪ್ರತಿದಿನವೂ ಸಂಧಿಸುತ್ತಿದ್ದರು. ಮೇರಿಯ ತಾಯಿ ದತ್ ಕುಟುಂಬದೊಡನೆ ತಿರುಗಾಡಲು ಹೋದದ್ದು, ಸಂಜೆಕಾಲವನ್ನು ಒಟ್ಟಿಗೆ ಕಳೆದದ್ದು, ಒಟ್ಟಿಗೆ ಎರಡು ಕುಟುಂಬದವರೂ ಊಟ ತಿಂಡಿ ತಿಂದದ್ದು ಮೊದಲಾದುವನ್ನೆಲ್ಲ ತನ್ನ ದಿನಚರಿಯಲ್ಲಿ ಬರೆದಿದ್ದಾಳೆ. ದತ್‌ಕುಟುಂಬದವರು ಸೇಂಟ್ ಲಿಯೊನಾರ್ಡ್ಸ್‌ಗೆ ಹೋದಮೇಲೆ ಈ ಎರಡು ಕುಟುಂಬಗಳೂ ಮತ್ತೆ ಸಂಧಿಸಲಿಲ್ಲ. ಅದನ್ನು ಕುರಿತು ಮೇರಿ ಹೀಗೆ ಬರೆದಿದ್ದಾಳೆ. 'ಆದ್ದರಿಂದಲೇ ಬಹುಶಃ ನಮ್ಮ ಪತ್ರವ್ಯವಹಾರ ಇನ್ನಷ್ಟು ಆತ್ಮೀಯವಾಯಿತು.'

1873 ರ ಸೆಪ್ಟೆಂಬರಿನಲ್ಲಿ ಪಿ. ಎಂಡ್ ಓ. ನೌಕೆ 'ಪೆಷಾವರ್' ನಲ್ಲಿ ಗೋವಿಂದ ಚಂದ್ರ ತನ್ನ ಕುಟುಂಬದವರೊಡನೆ ಭಾರತಕ್ಕೆ ಮರಳಿದ.

೭. ಮರಳಿ ಮನೆಗೆ

ತೋರು ತಾನು ವಿದೇಶದಲ್ಲಿದ್ದಾಗ ಭಾರತದಲ್ಲಿದ್ದ ತನ್ನ ಸ್ನೇಹಿತರಿಗೂ ಬಂಧುಗಳಿಗೂ ಅನೇಕ ಪತ್ರಗಳನ್ನು ಬರೆದಳು. ಆದರೆ ಅವುಗಳಲ್ಲಿ ಕೆಲವು ಮಾತ್ರ ಉಳಿದಿವೆ. ಮೇರಿಗೆ ಬರೆದ ಪತ್ರಗಳನ್ನು ಮಾತ್ರ ಆಕೆ ಜೋಪಾನವಾಗಿಟ್ಟಿದ್ದರಿಂದ ಅವು ಹರಿಹರದಾಸ್ ಬರೆದ ತೋರುದತ್ತಳ ಜೀವನ ಚರಿತ್ರೆಯಲ್ಲಿ ಪ್ರಕಟವಾಗುವುದು ಸಾಧ್ಯವಾಯಿತು. 1873 ಸೆಪ್ಟೆಂಬರ್ ತಿಂಗಳಿಂದ ತೋರು ಮೇರಿಗೆ ಒಟ್ಟು 53 ಪತ್ರಗಳನ್ನು ಬರೆದಳು. ಈ ಐವತ್ಮೂರು ಪತ್ರಗಳಲ್ಲಿ ತೋರುವಿನ ಅಂತರಂಗವನ್ನು ಕಾಣಬಹುದು. ಕಲಿಯುವುದರಲ್ಲೂ ಬರೆಯುವುದರಲ್ಲೂ ಬಹಳ ಆಸಕ್ತಿಯಿದ್ದ ಪ್ರತಿಭಾನ್ವಿತ ತರುಣಿಯೊಬ್ಬಳನ್ನು ನಾವಿಲ್ಲಿ ಕಾಣುತ್ತೇವೆ. ಸರಳವಾದ ಅವಳ ಪತ್ರಗಳಲ್ಲಿ ಕಲ್ಕತ್ತೆಯ ರಾಮ್‌ಬಗಾನ್ ಹಾಗೂ ಬಾಗಮಾರಿ ತೋಟದ ಮನೆಗಳಲ್ಲಿನ ಗೃಹಜೀವನದ ಚಿತ್ರಣವಿದೆ. ಯೂರೋಪಿಗೆ ಮರಳಿ ಹೋಗಬೇಕೆಂದು ಅವಳು ಎಷ್ಟೇ ಬಯಸಿದರೂ ಅವಳು ಮಾತ್ರ ಮತ್ತೆ ತನ್ನ ಸ್ವದೇಶವನ್ನು ಬಿಟ್ಟು ಹೋಗಲಿಲ್ಲ.

ಪುಸ್ತಕಗಳು, ಬರವಣಿಗೆ, ಅಪಾರ ಬಂಧುವರ್ಗ, ವಿಖ್ಯಾತ ಸ್ನೇಹಿತರು, ಪ್ರಿಯವಾದ ಪ್ರಾಣಿಗಳು, ತಂದೆತಾಯಿಗಳು ಇವರೊಡನೆ ಕಲ್ಕತ್ತೆಯ ಜೀವನ ಉಲ್ಲಾಸಕರವಾಗಿಯೂ ಸಂತೋಷದಾಯಕವಾಗಿಯೂ ಇತ್ತು ನಿಜ. ಆದರೆ ಅದು ದುರಂತದಲ್ಲಿ ಕೊನೆಗೊಂಡಿತು. ದತ್ ಕುಟುಂಬ ಭಾರತಕ್ಕೆ ಹಿಂದಿರುಗಿದ ಒಂದು ವರುಷದಲ್ಲೇ ಅರು ಕ್ಷಯರೋಗಕ್ಕೆ ತುತ್ತಾದಳು. ಅವಳನ್ನು ಬದುಕಿಸಿ ಉಳಿಸಿಕೊಳ್ಳಲಾಗಲಿಲ್ಲ. ಮೇರಿಗೆ ಪತ್ರ ಬರೆಯುವಾಗ ತೋರು ಯಾವ ಸಂಕೋಚವಾಗಲಿ ನಿರ್ಬಂಧವಾಗಲಿ ಇಲ್ಲದೆ ತನ್ನ ಹೃದಯದ ಸುಖದುಃಖಗಳನ್ನು ತೋಡಿಕೊಂಡಿದ್ದಾಳೆ. ಆದರೆ ಇವರಿಬ್ಬರ ನಡುವಿನ ಪತ್ರವ್ಯವಹಾರ ಬರಿಯ ಮುಚ್ಚುಮರೆಯಿಲ್ಲದ ಬಿಚ್ಚು ಮನಸ್ಸಿನ ಕೆಚ್ಚುನುಡಿಯಾಗಲಿ, ನಡೆದ ಘಟನೆಗಳ ವರದಿಯಾಗಲಿ ಅಲ್ಲ. ಇವರಿಬ್ಬರ ನಡುವಿನ ಪತ್ರವ್ಯವಹಾರದ ಮೇಲೆ ಸಾಹಿತ್ಯ ಸಂಸ್ಕೃತಿಗಳ ಅಚ್ಚೊತ್ತಿದೆ. ಹರಿಹರದಾಸ್ ಹೇಳಿರುವಂತೆ ತೋರುವಿನ ಪ್ರತಿಭೆ ಹೂವಾಗಿ ಅರಳುವ ತನಕ ಅವಳೇನಾದರೂ ಬದುಕಿದ್ದಿದ್ದರೆ ಅವಳ ಪತ್ರಗಳು ಖಂಡಿತವಾಗಿ ಆಂಗ್ಲ ಭಾಷೆಯಲ್ಲಿ ಶ್ರೇಷ್ಠ ಸಾಹಿತ್ಯವಾಗುತ್ತಿತ್ತು.

ತೋರುವಿನ ಪತ್ರಗಳಲ್ಲಿ ನಿಶ್ಚಲ ಸೌಂದರ್ಯದ ಚಿತ್ರಗಳೇನೊ ಎನಿಸುವ ಪ್ರತಿಭೆಯಿದೆ. ಋಜುತ್ವವಿದೆ. ವಿಕ್ಟೋರಿಯಾ ಮಹಾರಾಣಿಯ ಕಾಲಕ್ಕೆ ಬರಹಗಾರರಿಗೆ ಸಿದ್ಧಿಸಿದ್ದ ವೈಶಿಷ್ಟ್ಯಪೂರ್ಣ ಹಾಸ್ಯವಿದೆ. ಆದರೂ ಭಾವನೆಗಳ ಪಕ್ವ ಧಾರೆಯಿಲ್ಲ. ವಿಷಯಗಳಲ್ಲಿ ಆಯ್ಕೆಯಿಲ್ಲ. ಎಲ್ಲವೂ ಕಲಸುಮೇಲೋಗರ. ಕೆಲವೊಮ್ಮೆ ತೋರು

ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಹಾರಿರುವುದರಿಂದ ಅವಳ ಪತ್ರಗಳಲ್ಲಿ ಸಾಹಿತಿಕ ಮೌಲ್ಯಕ್ಕೆ ಕೊರೆಯಾಗಿದೆ, ಉದಾಹರಣೆಗೆ ತನ್ನ ಪ್ರೀತಿಯ ಬೆಕ್ಕು ತೀರಿಕೊಂಡಿತೆಂಬುದನ್ನು ಹೇಳುತ್ತಿದ್ದವಳು ಇದ್ದಕ್ಕಿದ್ದಂತೆಯೇ ಫ್ರೆಂಚ್ ಕವಿಯೊಬ್ಬನ ವಿಶೇಷ ಗುಣಗಳನ್ನು ಹೊಗಳಲು ಆರಂಭಿಸುತ್ತಾಳೆ. ಇಲ್ಲದಿದ್ದರೆ ತನ್ನ ಕಾಯಿಲೆಯ ಬಗ್ಗೆ ಬರೆಯುತ್ತಿದ್ದವಳು ಇದ್ದಕ್ಕಿದ್ದಂತೆಯೇ ಯಾವುದೊ ಸಾಮಾಜಿಕ ಸಮಸ್ಯೆಯನ್ನು ಚರ್ಚಿಸಲಾರಂಭಿಸುತ್ತಾಳೆ. ಹೀಗೆ ಒಂದಕ್ಕೊಂದು ಸಂಬಂಧವಿರದ ವಿಷಯಗಳಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದೇನೆಂದರೆ ಜೀವನದ ಬಗ್ಗೆ ತೋರುವಿಗಿದ್ದ ಆಸಕ್ತಿ ಎಷ್ಟು ವೈವಿಧ್ಯಪೂರ್ಣವಾಗಿತ್ತು ಎಂಬುದು. ಅಲ್ಲದೆ ಅವಳು ಬಹಳ ಕುಶಲಿಯಾದ ಬರಹಗಾರಳೂ ಆಗಿದ್ದಳು. ವಿವಿಧ ವಿಷಯಗಳಿಂದ ತುಂಬಿದ ಅವಳ ಪತ್ರಗಳು ಮೊದಲಿನಿಂದ ಕೊನೆಯ ವರೆಗೂ ಓದುಗರ ಗಮನ ಸೆಳೆಯುತ್ತವೆ.

ಹೆಚ್ಚು ಹೆಚ್ಚು ಪುಸ್ತಕ ಬೇಕು. ಹೆಚ್ಚು ಹೆಚ್ಚು ಬರವಣಿಗೆ ಬೇಕು. ಆದರೆ ಇವಿಷ್ಟೇ ಸಾಲದು. ತಾನು ತನ್ನ ಗೆಳತಿಗೆ ಸರ್ವಾಂಗಪೂರಿತ ಸ್ನೇಹಿತೆಯಾಗಬೇಕು.

ತೋರು ತನ್ನ ಮೊದಲ ಪತ್ರಗಳನ್ನು ಪೆಷಾವರ್ ಹಡಗಿನಲ್ಲಿದ್ದಾಗ ಜಿಬ್ರಾಲ್ಟರ್ ಹಾಗೂ ಅಲೆಗ್ಜಾಂಡ್ರಿಯಗಳಿಂದ ಬರೆದಳು. ಅವು ಸಮುದ್ರಯಾನದ ಕಾಲದ ಪ್ರಸಂಗಗಳನ್ನವು ವರ್ಣಿಸುತ್ತವೆ. ತೋರು ಸಂತೋಷದಿಂದೇನೂ ಇರಲಿಲ್ಲ. ಅವಳ ಆರೋಗ್ಯ ತಕ್ಕಮಟ್ಟಿಗಿತ್ತಾದರೂ ಅರು ನರಳುತ್ತಿದ್ದಳು. ಅರುವಿನ ದೇಹಸ್ಥಿತಿ ಹದಗೆಟ್ಟು ವೈದ್ಯರು ಅವಳು ಇಂಗ್ಲೆಂಡಿನಲ್ಲಿ ಇನ್ನೊಂದು ಚಳಿಗಾಲವನ್ನು ತಡೆಯುವಷ್ಟು ಶಕ್ತಳಾಗಿಲ್ಲವೆಂದು ಹೇಳಿದಾಗ ಗೋವಿಂದ ಚಂದ್ರ ಭಾರತಕ್ಕೆ ಮರಳುವುದು ಅನಿವಾರ್ಯವಾಯಿತು. ತನ್ನ ಗೆಳತಿಯನ್ನು ತಾನು ಮತ್ತೆ ಕಾಣಲಾರೆನೆಂಬ ಭಾವನೆ ತೋರುವಿನ ಮನಸ್ಸಿನಲ್ಲಿ ಮೂಡಿ ಅವಳನ್ನು ಕಾಡುತ್ತಿತ್ತು.

1873 ರ ಡಿಸೆಂಬರಿನಿಂದ ತೋರು ಭಾರತದಿಂದ ಪತ್ರ ಬರೆಯಲಾರಂಭಿಸಿದಳು. ಸಿಂಹಳದಲ್ಲಿ ಇಳಿದ ದತ್ತರ ಕುಟುಂಬದವರು ಒಂದು ದಿನವನ್ನು ಅಲ್ಲಿಯೇ ಸುಖವಾಗಿ ಕಳೆದರು. ಅರು ಜೊತೆಯಲ್ಲಿ ಅನೇಕ ಹಕ್ಕಿಗಳನ್ನು ತಂದಿದ್ದಳು. ಅವುಗಳಲ್ಲನೇಕ ಕಾಲವಾದರೂ ಕೆಲವು ಉಳಿದುಕೊಂಡವು.

ದತ್ ಕುಟುಂಬ ಭಾರತಕ್ಕೆ ಮರಳಿದಾಗ ಅವರ ಅಪಾರ ಬಂಧುವರ್ಗ ಅವರಿಗೆ ಸ್ವಾಗತ ಬಯಸಿತು. ಅವರು ಬಿಟ್ಟುಹೋಗಿದ್ದ ಪ್ರೀತಿಯ ಪ್ರಾಣಿಗಳೂ ಕೂಡ ತುಂಬು ಹೃದಯದಿಂದ ಬರಮಾಡಿಕೊಂಡವು. ಕೆಲವು ವರುಷಗಳ ಹಿಂದೆ ಪುಟಾಣಿಗಳಾಗಿದ್ದವರು ಇಂದು ಬೆಳೆದು ದೊಡ್ಡವರಾಗಿ ಏನು ಮಾಡಿದರೂ ತಮ್ಮ 'ಪ್ರೀತಿಯ ಅತ್ತೆ' ಯರನ್ನು ಬಿಟ್ಟು ಹೋಗದೆ ಹೋದರು. ಅವರು ಮತ್ತೆ ಇಂಗ್ಲೆಂಡಿಗೆ ಹೋಗುವ ವಿಚಾರವನ್ನಂತೂ ಅವರ ಮುಂದೆ ಎತ್ತುವಂತೆಯೇ ಇರಲಿಲ್ಲ.

ಡಿಸೆಂಬರ್ ತಿಂಗಳಾದರೂ ಅವರ ತೋಟದಲ್ಲಿ ಗುಲಾಬಿ, ದಾಸವಾಳ, ಚಂಡುಮಲ್ಲಿಗೆ ಶಾವಂತಿಕೆಗಳು ಸಮೃದ್ಧಿಯಾಗಿದ್ದವು. 'ಇಂಗ್ಲೆಂಡಿನಿಂದ ಅಮ್ಮ ಗಿಡಗಳುಳ್ಳ ಹೊರೆ ಹೊರೆ ಪೆಟ್ಟಿಗೆಗಳನ್ನೇ ತಂದಿದ್ದಳು. ಅವುಗಳ ತುಂಬ ಗೆಡ್ಡೆಗಳು, ಬೇರುಗಳು, ಬೀಜಗಳು. ಹಯಸಿಂಥ್ ಗಿಡಗಳು ಈಗತಾನೆ ಚಿಗುರುತ್ತಿವೆ. ಇಂಗ್ಲಿಷ್ ಗಿಡಗಳನ್ನು ಭಾರತದಲ್ಲಿ

ಬೆಳೆಸುವ ಪ್ರಯತ್ನದಲ್ಲಿ ಅಮ್ಮ ಯಶಸ್ವಿಯಾಗುತ್ತಾಳೆಂದು ನಂಬಿದ್ದೇನೆ. ನಮ್ಮ ಕೊಳಗಳಲ್ಲಿ ಬಿಳಿದಾವರೆ ಕೆಂದಾವರೆಗಳು ಸೊಗಸಾಗಿ ಕಾಣುತ್ತವೆ.'

ತೋರು ಸಾಕಿದ್ದ ಗಿನಿ ಇಲಿಗಳು ಎಷ್ಟು ಬೇಗ ಎಷ್ಟೊಂದು ಮರಿ ಹಾಕಿದುವೆಂದರೆ ತೋರು ಅವನ್ನು ಮಾರಿ ಭರ್ಜರಿ ವ್ಯಾಪಾರವನ್ನೇ ಮಾಡಬಹುದು ಎಂದು ಅವಳ ತಂದೆ ಒಮ್ಮೆ ನಕ್ಕು ನುಡಿದಿದ್ದರು. ಅರು ಬಾತುಗಳನ್ನೂ ಸಾಕಿದ್ದಳು. 'ನಮ್ಮ ತೋಟದಲ್ಲಿ ಮೂರು ನಾಲ್ಕು ಕೊಳಗಳಿರುವುದರಿಂದ ಬಾತುಗಳನ್ನು ಸಾಕಲಡ್ಡಿಯಿಲ್ಲ' ಎಂದಿದ್ದಾಳೆ. ದೊಡ್ಡ ಹೊಸ ಹಣ್ಣುಗಳ ರಾಶಿಯೇ ಇತ್ತು ಅವರ ತೋಟದಲ್ಲಿ.

ಸೀಬೆ ಹಣ್ಣುಗಳು, ಬಾಳೆಹಣ್ಣು, ಇಂಗ್ಲೆಂಡಿನಲ್ಲಿ ಸಿಗದೆ ಇರುವಂಥ ಕಿತ್ತಳೆ ಹಣ್ಣುಗಳು ಬೇಕಾದಷ್ಟಿದ್ದುವು. ಅಲ್ಲದೆ ಬಾಗ್‌ಮರಿ ತೋಟ ಮಾವಿನ ಹಣ್ಣುಗಳಿಗೆ ಹೆಸರಾಗಿತ್ತು.

ಭಾರತಕ್ಕೆ ಹಿಂದಿರುಗಿದ ಮೇಲೆ ಸುಮಾರು ನಾಲ್ಕು ವರುಷ ಕಾಲ ದತ್ತಕುಟುಂಬ ಹೇಗೆ ಪ್ರಶಾಂತ ದೈನಂದಿನ ಜೀವನದಲ್ಲಿ ತಲ್ಲೀನವಾಗಿತ್ತು ಎಂಬುದು ತೋರು ಮೇರಿಗೆ ಬರೆದ ಪತ್ರಗಳಲ್ಲಿ ಸ್ಪಷ್ಟವಾಗಿ ಮೂಡಿದೆ.

ಸುಮಾರು ಹನ್ನೊಂದು ವರುಷಗಳಿಂದ ಮನೆಯ ಪ್ರೀತಿಯ ಬೆಕ್ಕಾಗಿದ್ದ ಮಾಜ ತೀರಿಕೊಂಡಾಗ ಇಡೀ ಕುಟುಂಬ ದುಃಖದಲ್ಲಿ ಮುಳುಗಿತು. ಬೆಕ್ಕನ್ನು ಒಂದು ಕೊಳದ ಬಳಿ ಮರದ ಅಡಿಯಲ್ಲಿ ಮಣ್ಣುಮಾಡಲಾಯಿತು. ಆಗ ತಂದೆ ತಾಯಿ ಇಬ್ಬರೂ ಅಲ್ಲಿದ್ದರು. ಆದರೆ ತೋರು ಅರು ಬರುವ ಸ್ಥಿತಿಯಲ್ಲಿರಲಿಲ್ಲ. 'ಹಸುವೊಂದು ಕರು ಹಾಕಿತು. ಇದರಿಂದ ಕುಟುಂಬಕ್ಕೆ ಹೊಸ ಹಾಲು. ಅರು ತಾನೇ ಹಸು ಕರೆಯುತ್ತೇನೆಂದಳು. ತೋಟದಲ್ಲಿ ಒಂದು ದೊಡ್ಡ ಮುಳ್ಳು ಹಂದಿಯನ್ನು ಹಿಡಿದಿದ್ದರು. ಗುಲಾಬಿ ಗಿಡಗಳಲ್ಲಿ ಗುಲಾಬಿ ಸೊಗಸಾಗಿತ್ತು. ನಮ್ಮ ಹೂಗಳೊಂದಿಗೆ ಇಂಗ್ಲಿಷ್ ಹೂಗಳನ್ನು ಹೋಲಿಸಿದಾಗ ಅವುಗಳಲ್ಲಿ ಗಂಧವೇ ಇಲ್ಲವೇನೊ ಎನ್ನಿಸುತ್ತದೆ.' ಅವರು ಕೋಳಿಗಳನ್ನು ಸಾಕಿದ್ದರು. ತೋರು ಅನಾರೋಗ್ಯದಿಂದ ಮಹಡಿಯಮೇಲೆ ವಿಶ್ರಮಿಸಿಕೊಳ್ಳುತ್ತಿದ್ದಾಗ ಕೋಳಿ ಮೊಟ್ಟೆಗಳೊಡೆದು ಮರಿಗಳೇನಾದರೂ ಹೊರಗೆ ಬಂದರೆ ಅಮ್ಮ ತೋರು ನೋಡಲೆಂದು ಅವನ್ನು ಮಹಡಿಯ ಮೇಲಕ್ಕೆ ಕಳುಹಿಸುತ್ತಿದ್ದಳು.

'ಅರು ಇನ್ನೂ ಒಂದು ದೊಡ್ಡ ಮೀನನ್ನೂ ಹಿಡಿದಿಲ್ಲ. ತನಗೆ ಶಕ್ತಿ ಬರುವವರೆಗೂ ಹಿಡಿಯುವುದಿಲ್ಲವೆಂದು ಹೇಳುತ್ತಾಳೆ. ಮೀನೇನಾದರೂ ಗಾಳಕ್ಕೆ ಸಿಕ್ಕಿದರೆ ಅದರಿಂದ ತಪ್ಪಿಸಿಕೊಂಡು ಹೋಗುವಾಗ ಅವಳನ್ನೂ ಎಲ್ಲಿ ನೀರಿಗೆಳೆದುಕೊಂಡು ಹೋಗುತ್ತದೊ ಎಂದು ಅವಳಿಗೆ ಭಯ. ನಾನು ಕೂಡ ಇದೇ ಕಾರಣಕ್ಕಾಗಿಯೇ ದೊಡ್ಡ ಮೀನಿಗೆ ಗಾಳ ಹಾಕುವುದಿಲ್ಲ!'

ಹುಣಿಸೆಮರದ ಮೇಲೆ ಕೋತಿಗಳ ವಾಸ. ಮಾಜ ಬೆಕ್ಕಿನ ಮರಿಯೊಂದಿಗೆ ಆಟವೆಂದರೆ ಬಲು ಮೋಜು. ತೋರು ಬಹಳ ದಿನಗಳಿಂದಲೂ ಪಿಯಾನೊ ನುಡಿಸಿರಲಿಲ್ಲ. ಕೆಳಗೆ ಹೋಗಲೂ ಅವಳಿಗೆ ಚೈತನ್ಯವಿರಲಿಲ್ಲ. ತಾನು ಇಂಗ್ಲೆಂಡಿಗೆ ಮರಳಿ 'ಹೋಗಲು ಎಂದಾದರೂ ಸಾಧ್ಯವಾಗುತ್ತದೊ ಇಲ್ಲವೊ ಎಂಬ ಸಂಶಯ ಕಾಡತೊಡಗಿತು ಅವಳನ್ನು. 'ನಾವು ಮರಳಿ ಹೋಗುತ್ತೇವೊ ಇಲ್ಲವೊ ತಿಳಿಯದು. ಇಲ್ಲಿರುವುದನ್ನೆಲ್ಲ ಮಾರಿಬಿಟ್ಟು

ಅಲ್ಲೇ ಹೋಗಿ ಇದ್ದುಬಿಡೋಣ ಎನ್ನುತ್ತಾರೆ ಅಪ್ಪ. ನಾವು ಎಲ್ಲೇ ಹೋಗಲಿ ದೇವರ ಕೃಪೆ ಮಾತ್ರ ನಮ್ಮ ಮೇಲಿರಲಿ.'

ದತ್ತ ಕುಟುಂಬದ ಕೌಟುಂಬಿಕ ಜೀವನದಲ್ಲಿ ಶಿಸ್ತು ನೆಲೆಸಿತ್ತು. ಶಾಂತಿಯಿತ್ತು. ತಾಯಿ ಹಾಡು ಹೇಳುತ್ತಿದ್ದಳು. ಮಕ್ಕಳು ತಾವು ಮೂವರೂ ತಾಯಿ ಹೇಳುತ್ತಿದ್ದ ಆ ಹಾಡುಗಳನ್ನು ಕೇಳುತ್ತಿದ್ದ ದಿನಗಳನ್ನು ತೋರು ಜ್ಞಾಪಿಸಿಕೊಂಡಿದ್ದಾಳೆ. ತೋರುವಿನ ಕವನ 'ಸೀತೆ' ಯಲ್ಲಿ ಅಬ್ಬು ತೀರಿಕೊಳ್ಳುವ ಮೊದಲು ಕಲ್ಕತ್ತೆಯಲ್ಲಿನ ತಮ್ಮ ಬಾಲ್ಯದ ಸುಖದ ದಿನಗಳನ್ನು ಕುರಿತು ಬರೆದಿದ್ದಾಳೆ.

'ಕತ್ತಲಿನಾ ಕೋಣೆಯಲ್ಲಿ ಮೂರು ಮಂದಿ ಮಕ್ಕಳು
ಬಿಟ್ಟಕಣ್ಣು ಬಿಟ್ಟುಕೊಂಡು ಏನು ನೋಡುತಿರುವರು?
ದಟ್ಟ ದಟ್ಟ ದಟ್ಟ ಅಡವಿ ಸೂರ್ಯಕಾಂತಿ ಕಾಣದಡವಿ
ಅದರ ಮಧ್ಯದಲ್ಲಿ ಒಂದು ಚಿಕ್ಕ ಚೊಕ್ಕತಾಣವು
ತರುಲತೆಗಳ ಮೇಲೆಲ್ಲವು ದೊಡ್ಡ ದೊಡ್ಡ ಹೂಗಳು
ಮರಗಳನ್ನು ತಬ್ಬಿಹಿಡಿದ ಹೂಬಳ್ಳಿಯ ಗಿಡಗಳು.
ಅಲ್ಲಿ ಒಂದು ಶಾಂತವಾದ ತಿಳಿ ಕೊಳ
ಶ್ವೇತ ಹಂಸ ಪಕ್ಷಿಗಳವು ತೇಲಿ ತೇಲಿ ಹೋದವು
ಜಂಗನೆದ್ದು ನಿಂತ ನವಿಲು ಅಲ್ಲೆ ನಾಟ್ಯವಾಡಿತು. ಜಿಂಕೆ ಪಂದ್ಯ ಓಡಿತು.
ಅಲ್ಲೆ ಅಲ್ಲೆ ಮಧ್ಯದಲ್ಲೆ ತುಂಬು ತೆನೆ ತೂಗಿತು
ಕಪ್ಪು ಹಬೆಯು ಮೇಲೆ ಹರಡಿ ಯಾಗವೇದಿ ಜ್ವಲಿಸಿತು
ಸರ್ವಸಂಗ ಪರಿತ್ಯಾಗಿ ಮುನಿವರ್ಯನ ತಾಣವು
ಶಾಂತವಾಸಸ್ಥಾನವು. ಆದರಿವಳುಯಾರು ಚಲುವೆ
ಅಳುವಳೇಕೆ ಸುಮ್ಮನೆ? ಆದರಿವಳ ಕಣ್ಣೀರು ಆಗಿಲ್ಲ ವ್ಯರ್ಥ
ಒಲ್ಲಿರಾ ಏಕೆಂದು? ಮೂರು ಮಕ್ಕಳ ಕಣ್ಣೀರು ಕಂಬನಿಗಿದೆ ಅರ್ಥ
ಅದೊಂದು ಹಳೆಯ ಕಥೆ ಬಲು ಹಳೆಯ ಕಥೆ
ಗತಕಾಲದ ಸೀತೆಯಾ ನೆನಪು ಮಾಡಿ ಕೊಟ್ಟ ವ್ಯಥೆಯಕಥೆ
ಹಾಡಾಗಿ ಹಾಡಿದಳು ಈ ಕಥೆಯ ತಾಯಿ. ಕೊನೆಗೊಮ್ಮೆ ಮುಗಿಯಿತು.
ದುಃಖಿ ಸೀತೆಯ ಚಿತ್ರ ಮನಸಿನಿಂದ ಮರೆಯಾಯಿತು
ಆವರಿರುಳೆಲ್ಲ ಅದರ ಕನಸು ಮುಂಜಾನೆಯವರೆಗೂ ಅವಳದೇ ನೆನಪು
ಮತ್ತೆ ತಮ್ಮ ತಾಯ ಬಳಿ ಮಕ್ಕಳಿವರು ಸೇರುವನಕ
ತಾಯಿ ಮತ್ತೆ ಕಥೆಗಳನ್ನು ಹಾಡಾಗಿ ಹಾಡುವನಕ,

ಬಂಗಾಳಿಯಲ್ಲಿ ತಾಯಿ ಹಾಡಿದ ಆ ಹಾಡುಗಳು ಎಷ್ಟು ಸ್ಪಷ್ಟವಾಗಿದ್ದಿರಬೇಕು. ಪ್ರತಿ ಸಂಜೆ ತಾಯಿ ಹಾಡಿದಾಗಲೂ ಆ ಹಾಡಿನ ಕಥೆಗಳನ್ನು ಕೇಳಿ ತೋರು ಕಂಬನಿಗರೆದಿದ್ದರೆ ಆಶ್ಚರ್ಯವೇನಿಲ್ಲ.

ಅಧ್ಯಯನ ಪ್ರತಿದಿನದ ಕಾರ್ಯಕ್ರಮದ ಪ್ರಮುಖ ಅಂಗ. ತಂದೆಯಂತೂ ಈ

ಪುಸ್ತಕ ಪ್ರೇಮವನ್ನು ಪ್ರೋತ್ಸಾಹಿಸುವವನೇ ಆಗಿದ್ದ. ರಾಂಬಾಗಾನಿನಲ್ಲಿದ್ದ ಪುಸ್ತಕ
ಗಳನ್ನೆಲ್ಲ ತೋಟದಮನೆಗೆ ವರ್ಗಾಯಿಸಿದ್ದರು. ತೋಟದ ಮನೆಯಲ್ಲಿ ಓದಲು ಹೆಚ್ಚು
ಸ್ಥಳವೂ ಇತ್ತು. ತೋರು ತನ್ನ ಹೃದಯ ತೃಪ್ತಿಗೊಳ್ಳುವವರೆಗೂ ಓದಿ ತಣಿದಳು.
'ನಮ್ಮ ಮನೆಯಲ್ಲಿರುವ ಪುಸ್ತಕಗಳು. ಜೊತೆಗೆ ಅಪ್ಪ ಷೇರುದಾರರಾಗಿರುವ ಕಲ್ಕತ್ತ
ಪುಸ್ತಕ ಭಂಡಾರದ ಪುಸ್ತಕಗಳು... ನನಗೆ ಪುಸ್ತಕಗಳ ಕೊರತೆಯೇ ಇಲ್ಲ' ಎಂದು
ಬರೆದಳು ತೋರು. ಅವಳು ಬಹಳ ಬೇಗ ಪುಸ್ತಕಗಳನ್ನು ಓದುತ್ತಿದ್ದಳು. 'ನಾನು
ಪುಸ್ತಕಗಳನ್ನು ಏಕೆ ಇಷ್ಟು ಬೇಗ ಓದುತ್ತೇನೆ ಎನ್ನುವುದಕ್ಕೆ ಕಾರಣ ಸರಳ ಸ್ಪಷ್ಟ. ಇದಕ್ಕೆ
ನಮ್ಮ ಪ್ರಶಾಂತ ವಿಶ್ರಾಂತ ಜೀವನವೇ ಕಾರಣ. ನಾವು ಊಟ ತಿಂಡಿ ಉಪಹಾರ.
ಆಟಪಾಟ ಸಂತೋಷಕೂಟ ಇವುಗಳಲ್ಲಿ ಕಳೆಯಬಹುದಾದ ಕಾಲವನ್ನೆಲ್ಲ ಓದುವುದರಲ್ಲೇ
ಕಳೆಯುತ್ತೇವೆ. ಅಲ್ಲದೆ ನಾವು ಬಾಲ್ಯದಿಂದಲೂ ಪುಸ್ತಕದ ಹುಳು.' ಫ್ರೆಂಚ್ ಹಾಗೂ
ಇಂಗ್ಲಿಷಿನ ಎಲ್ಲ ಪ್ರಕಟಣೆಗಳನ್ನೂ ಹ್ಯಾಚೆಟ್ಸ್, ಅವಳಿಗೆ ಕಳುಹಿಸುತ್ತಿದ್ದುದರಿಂದ ಅವಳು
ಓದಿನಲ್ಲಿ ಹಿಂದುಳಿಯುವುದು ಸಾಧ್ಯವೇ ಇರಲಿಲ್ಲ. ತೋರು ಶ್ರೀಮತಿ ಬ್ರೌನಿಂಗ್,
ಕಾರ್ಲೈಲ್, ಬ್ರಾಂಟೆ ಸಹೋದರಿಯರು, ಬೈರನ್, ಥ್ಯಾಕರೆ, ಕೋಲ್‌ರಿಡ್ಜ್, ಟೆನಿಸನ್,
ಜಾರ್ಜ್ ಇಲಿಯೆಟ್, ಡಿಕನ್ಸ್ ಈ ಆಂಗ್ಲ ಬರಹಗಾರರನ್ನು ಕುರಿತು ಸತತವಾಗಿ ಹೇಳು
ತ್ತಲೇ ಇರುತ್ತಾಳೆ. ತೋರು ಫ್ರೆಂಚ್ ಭಾಷೆಯಲ್ಲಿ ಇಂಗ್ಲೀಷಿಗಿಂತ ಹೆಚ್ಚು ಪುಸ್ತಕಗಳನ್ನು
ಓದಿದ್ದಳು. ಮೋಲಿಯರನ ನಾಟಕಗಳು, ಮಿಂಗೆಯ ಕ್ರಾಂತಿಯ ಚರಿತ್ರೆ, ರೊಸೆಲಿನ
ಮರಣಾನಂತರ ಪತ್ರಗಳು, ವಿಕ್ಟರ್ ಹ್ಯೂಗೋನ ದರಿದ್ರರು, ಟೈನನ ಪ್ರವಾಸ, ಮೊದ
ಲಾದವು ಅವಳು ಓದಿದ. ಅವಳಿಗೆ ಪ್ರಿಯವಾದ ಕವಿತೆಗಳಲ್ಲಿ ಕೆಲವು. ಫ್ರೆಂಚ್
ರೊಮ್ಯಾಂಟಿಕ್ ಪಂಥದ ಬರಹಗಾರರೂ ಪಾರ್‌ನಾಸಿಯನರೂ ಅವಳ ಒಡನಾಡಿಗಳು.

ಮನೆಯಲ್ಲಿ ತೋರು ಸ್ನೇಹಿತರಿಗೂ ಬಂಧುಗಳಿಗೂ ಅಚ್ಚು ಮೆಚ್ಚು. ಹರಿಹರ
ದಾಸ್ ಹೀಗೆ ಹೇಳಿದ್ದಾನೆ: 'ನವುರಾದ ಮೊಗ್ಗು' ಅವಳು. ಈ ಅರೆಬಿರಿದ
ಗುಲಾಬಿ ಮೊಗ್ಗು ತನ್ನ ಭಾರತೀಯ ಗೃಹವನ್ನು ಸುಗಂಧದಿಂದ ತುಂಬಿದಳು. ಮುದು
ಕರೂ ಹುಡುಗರೂ ಅವಳನ್ನು ಸಹೋದರಿ, ದೀದಿ ಎಂದು ಕರೆದರು. ಅವಳ ತಾತ,
ದೊಡ್ಡಪ್ಪ ದೊಡ್ಡಮ್ಮ ಇವರೂ ಅಷ್ಟೆ. ಎಲ್ಲರಿಗೂ ತೋರು 'ದೀದಿ'. ಅವಳು
ಮೃದು ಹೃದಯಿ. ದಯಾಪರೆ. ವಿನಯವಂತೆ. ಡಾ॥ ಹಂಟರ್ ಅವಳ ಹಾಗೂ
ಅವಳ ಕುಟುಂಬದ ಸ್ನೇಹವನ್ನು ಏಕೆ ಬಯಸಿದನೆಂದು ಅವಳಿಗೆ ತಿಳಿಯದು. 'ನನ್ನ
ಭೇಟಿಗೆ ಪ್ರಮುಖರಾದವರೊಬ್ಬರು ಬರುವವರಿದ್ದಾರೆ'—ಎಂದು ಬರೆದಿದ್ದಾಳೆ.
'ಡಾ॥ ಹಂಟರ್ ನನ್ನ ಬಗ್ಗೆ ನನ್ನ ಪ್ರತಿಭೆಯ ಬಗ್ಗೆ ಬಹಳ ಮಾತಾಡಿದರು. ನನಗಂತೂ
ತುಂಬ ನಾಚಿಕೆಯಾಯಿತು. ನನ್ನದು ಬರಿಯ ಭಾಷಾಂತರ. ಅಲ್ಲದೆ ಹಂಟರ್ ತಾವೇ
ಅನೇಕ ಕೃತಿಗಳನ್ನು ರಚಿಸಿದ್ದಾರೆ.'

ತೋರು ಹೀಗೆ ತನ್ನ ಕುಟುಂಬದೊಡನೆ ತಮ್ಮ ಪ್ರಶಾಂತ ಜೀವನವನ್ನು ತುಂಬಿದ
ನೂರು ಪುಟ್ಟ ವಿಷಯಗಳಲ್ಲಿ ಪಾಲ್ಗೊಂಡು ಬಾಳಿದಳು. 'ಕವಿ'ಯಾಗಿ ತನಗೆ ಬಂ
ಗೌರವವನ್ನು ಸ್ವಲ್ಪವೂ ದರ್ಪವಿಲ್ಲದೆ ಸ್ವೀಕರಿಸಿದಳು. ಅವಳ ಬೇಕು ಬೇಡಗಳು ಅಲ್ಪ
ತನ್ನ ಹಾಡು ಹಕ್ಕಿಗೊಂದು ಸೊಳ್ಳೆಪರದೆ, ಬೆಳಗಾಗುತ್ತಲೆ ಕುದುರೆಗಳ ದರ್ಶನ, ಮ

ಗಳು ಪುಷ್ಪಭರಿತವಾದಾಗ ಅವುಗಳ ಸಂತೋಷದಲ್ಲಿ ತಾನೂ ಪಾಲ್ಗೊಳ್ಳುವಾಸೆ, ತಾಯಿ ಹಾಡು ಹೇಳಬೇಕೆಂಬಾಸೆ, ಸಾವಿನ ಮಡಿಲಲ್ಲಿದ್ದಾಗಲೂ ತಂದೆಯ ಕೈಯಲ್ಲಿ ತನ್ನ ಕೈ ಇಟ್ಟುಕೊಳ್ಳುವಾಸೆ. ಹೀಗೆ ತೋರು ತನ್ನ ಪುಟ್ಟ ಬದುಕನ್ನು ಬಾಳಿದಳು. ಅವಳ ಮರಣಾನಂತರ ಕ್ಲಾರಿಸ್ ಬಾದರ್ ಅವಳನ್ನು ಚಿರಸ್ಮರಣೀಯಳನ್ನಾಗಿ ಚಿತ್ರಿಸಿದಳು. 'ತೋರುವಿನ ಪತ್ರಗಳಲ್ಲಿನ ಸತ್ಯಪ್ರಿಯತೆ, ಬಿಚ್ಚುಹೃದಯ, ಸಂವೇದನ ಶಕ್ತಿ, ಒಳ್ಳೆಯತನ ಹಾಗೂ ಸರಳತೆ ಇವು ಅವಳನ್ನು ನನಗೆ ಪ್ರಿಯಳನ್ನಾಗಿ ಮಾಡಿದವು' ಎಂದಿದ್ದಾಳೆ.

೮. ಯೌವನದ ಹೊಸಿಲಿನಲ್ಲೆ ಮರಣ

ದತ್ ಕುಟುಂಬದವರು ಭಾರತಕ್ಕೆ ಹಿಂದಿರುಗಿದ ಮೇಲೆ ಅರು ತೋರು ಫ್ರೆಂಚಿನಿಂದ ಇಂಗ್ಲಿಷಿಗೆ ಭಾಷಾಂತರಿಸಿದ್ದ ಕವನಗಳನ್ನು ಸಂಗ್ರಹಿಸಿ ಬೆಂಗಾಲ್ ಮ್ಯಾಗಜೈನಿಗೆ ಕಾವ್ಯ ವಿಭಾಗದಲ್ಲಿ ಪ್ರಕಟಣೆಗಾಗಿ ಕಳುಹಿಸಿದರು. ತೋರುವಿನ ಲೇಖನಿಯಿಂದ ಭಾಷಾಂತರಗಳ ಹೊಸ ಹೊನಲೇ ಹರಿಯಿತು. ಅರು ಕೂಡ ಕೆಲವನ್ನು ಭಾಷಾಂತರಿಸಿದಳು. 1874 ರ ಮೊದಲ ಭಾಗದಿಂದ ಬೆಂಗಾಲ್ ಮ್ಯಾಗಜೈನಿನಲ್ಲಿ ಈ ಕವನಗಳು ಪ್ರಕಟವಾಗತೊಡಗಿದವು. ತೋರು 'ಬೌದ್ಧಿಕ ಪ್ರಯತ್ನ ಹಾಗೂ ಕವಿ ಕಲ್ಪನೆಯ ಹೊಂಗನಸು' ಕಾಣತೊಡಗಿದಳು. ಈ ನಲವತ್ತೈದು ತಿಂಗಳ ಏಕಾಂತದಲ್ಲಿ ತೋರುವಿನ ಸೂಕ್ಷ್ಮ ದೇಹ ತುಯ್ತದಿಂದ ಬಳಲಿ ಅದಕ್ಕೆ ಬಲಿಯಾಯಿತೆಂದು ಯೋಚಿಸುವುದಕ್ಕೂ ಸಾಧ್ಯವಿಲ್ಲ.

1874ರ ಮೊದಲಲ್ಲೇ ಅರು ತೋರು ಇಬ್ಬರೂ ಕಾಯಿಲೆ ಮಲಗಿದರು. ಅರು ಕ್ಷಯರೋಗದಿಂದ ಗತಿಸುವ ಮುನ್ನವೇ ತೋರು ಅದೇ ರೋಗದ ಮೊದಲ ಲಕ್ಷಣಗಳಿಂದ ನರಳತೊಡಗಿದಳು. ಮೂರು ತಿಂಗಳಾದ ಮೇಲೆ ಮಾರ್ಚ್ ತಿಂಗಳಲ್ಲಿ ಅವಳಿಗೆ ಸ್ವಲ್ಪ ಗುಣಮುಖವಾಯಿತು. ಮೇರಿಗೆ ಪತ್ರ ಬರೆದಳು. ಕೆಮ್ಮು ಸ್ವಲ್ಪ ಗುಣಮುಖವಾಗಿತ್ತು. ತೂಕ ಸ್ವಲ್ಪ ಹೆಚ್ಚಿತ್ತು. ಮೇ ತಿಂಗಳ ಹೊತ್ತಿಗೆ ಅವಳು ಮತ್ತೆ ಆರೋಗ್ಯದಿಂದ ಇರುವಂತೆ ಕಂಡಳು. ಬಂಗಾಳದ ಹವೆಯಲ್ಲಿ ಅವಳಿಗೆ ಆರೋಗ್ಯವಾಗಿತ್ತು. ಆದರೆ ಅರು ಮಾತ್ರ ಅವರ ನಿರೀಕ್ಷೆಗೆ ಹೊರತಾಗಿ ಗುಣಮುಖಳಾಗಲೇ ಇಲ್ಲ.

ಇದ್ದಕ್ಕಿದ್ದಂತೆಯೇ ಅರು ತೀರಿಕೊಂಡಳು. ಈ ಆಘಾತಕ್ಕೆ ಒಳಗಾದ ಕುಟುಂಬ ಶ್ರದ್ಧೆಯಿಂದ ಮಾತ್ರ ಜೀವಿಸಿರಬಲ್ಲದಾಗಿತ್ತು. ಈ ಶ್ರದ್ಧೆ ತೋರು ಇನ್ನಷ್ಟು ಹುರುಪಿನಿಂದ ಕೆಲಸಮಾಡಲು ಪ್ರೇರೇಪಿಸಿತು. ತನ್ನ ಅಕ್ಕನಿಗಾದ ಗತಿಯೇ ತನಗೂ ಕಾದಿದೆಯೆಂಬುದನ್ನು ಅವಳು ಮನಗಂಡಳು. ಸೆಪ್ಟೆಂಬರಿನಲ್ಲಿ ರಾಂಬಾಗಾನಿನಿಂದ ತೋರು

ಮೇರಿಗೆ ಹೀಗೆ ಬರೆದಳು. 'ನಾನು ನಿನಗೆ ಮೊದಲೇ ಬರೆಯಲಾಗಲಿಲ್ಲ. ದೇವರು ಅರುವನ್ನು ನಮ್ಮಿಂದ ಕೊಂಡೊಯ್ದ. ನಮಗೆ ಇದೊಂದು ವಿಷಮ ಪರೀಕ್ಷೆ. ಆದರೆ ಎಲ್ಲವೂ ದೈವೇಚ್ಛೆ. ಎಲ್ಲವನ್ನೂ ಆತ ನಮ್ಮ ಒಳ್ಳೆಯದಕ್ಕಾಗಿಯೇ ಮಾಡುತ್ತಾನೆ ಎಂದು ನಮಗೆ ಗೊತ್ತು. ಅಕ್ಕ ಜುಲೈ 23 ರಂದು ಬೆಳಗ್ಗೆ ನಮ್ಮನ್ನಗಲಿದಳು. ಕೊನೆಯ ವರೆಗೂ ಅವಳು ಶಾಂತಳಾಗಿ, ಸುಖವಾಗಿ ಇದ್ದಳು. ಆದರೆ ಅವಳು ಕಡೆಗಾಲದಲ್ಲಿ ಜ್ವರ, ಅಜೀರ್ಣ, ನಿಶ್ಶಕ್ತಿಗಳಿಂದ ಬಹಳ ನರಳಿದಳು. ನಮ್ಮ ಸೇತುವೆಯು ಆಕೆ ನನ್ನ ಅಣ್ಣನ ಮಗ್ಗುಲಲ್ಲಿ ಮಲಗಿದ್ದಾಳೆ. ನಮ್ಮ ಸಣ್ಣ ಕುಟುಂಬದ ಅಂತಃಸತ್ವವಾಗಿದ್ದ ಅವಳಿಲ್ಲದ ಮನೆ ಬಣಗುಟ್ಟುವಂತೆ ಕಾಣುತ್ತದೆ. ಅವಳು ಯಾವಾಗಲೂ ಸಂತೋಷವಾಗಿರುತ್ತಿದ್ದಳು. ನಮ್ಮನ್ನು ಆಗಾಗ ನಕ್ಕಿಸುತ್ತಿ...'

ವರುಷದ ಮೊದಲಲ್ಲಿ ತೋರು ಅರು ಇಬ್ಬರನ್ನೂ ಅನಾರೋಗ್ಯ ಕಾಡಿದರೂ ತಮ್ಮ ಕೆಲಸದಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದರು. ಬೆಂಗಾಲ್ ಮ್ಯಾಗಜೀನ್‌ನಲ್ಲಿ ಅರುವಿನ ಎರಡು ಕವನಗಳು ಪ್ರಕಟವಾದವು. 'ಗೊಂಚಲು' ಸಂಕಲನದಲ್ಲಿರುವ ಕೆಲವು ಕವನಗಳು ಅವಳವು. ವಿಕ್ಟರ್ ಹ್ಯೂಗೋನ 'ಮಂಚದಾಸಿಯ ಪ್ರೇಮಗೀತೆ' 1874 ರ ಏಪ್ರಿಲ್ ತಿಂಗಳಲ್ಲಿ ಮೊದಲಬಾರಿಗೆ ಪ್ರಕಟವಾಯಿತು. ಈ ಕವನ ಎಡ್‌ಮಂಡ್ ಗಾಸ್‌ರ ಗಮನ ಸೆಳೆಯಿತು. ಅವನು ಅದನ್ನು ತೋರುವಿನ ಕವನ ಎಂದುಕೊಂಡನು. ಆದರೆ ಅದು ನಿಜವಾಗಿ ಅರು ಬರೆದ ಕವನ — ಗಾಸ್ ಈ ಪದ್ಯವನ್ನು 'ಹಿಂದೂಸ್ತಾನದ ಲಾವಣಿಗಳು ಹಾಗೂ ಪುರಾಣ ಕಥೆಗಳು' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲೂ ಎಗ್ಸಾಮಿನರ್‌ನಲ್ಲಿ 'ಗೊಂಚಲು' ಬಗ್ಗೆ ಬರೆದ ವಿಮರ್ಶೆಯಲ್ಲೂ ಉದ್ಧರಿಸಿದ್ದಾರೆ.

ಮುಚ್ಚಿಹ ಇರುಳಿದು ಜಾರಿದೆ! ದೂರದ ಮೋಡಗಳ ದಾಟುತ
ಹೋಣ್ಣ
ಹೊಚ್ಚನೆ ಹೊಸತಿನ ಬೆಳಗಿನ ಗಾಳಿಯು ಬೀಸುತಲಿದೆ ಇನ್ನು
ಗುಲಾಬಿಯುಸಿರಳಿವ ಬೆಳ್ಳಿಬೆಳಗು
ಎಬ್ಬಿಸಲಿಲ್ಲವೆ ನಿನ್ನನ್ನು
ಬರುಸುವರೆಲ್ಲರು ನಿನ್ನಯ ಒಲವನು ಬೇಳಕು, ಜಾಣನ್ನು.
ಬಾನಂಗಳದಲಿ ಹೊಂಬೆಳಕಿನ ಕೆಂಪು
ಬಾನಾಡಿಗಳ ಗಾನದ ಇಂಪು
ನನ್ನೆದೆಯೊಳದಿ ಪ್ರೇಮದ ಸೊಂಪು.
ಆಗಲಿಕೆಯಲಿ ಸಾಮ್ರಾಜ್ಯದ ಗುರಿಯದು ತಪ್ಪಿತು.
ವಿಧಿರಾಜನ ಪ್ರೆ ಮಂಗಿಮರಿಗಳ ಮುತ್ತಿನ ದಾಡೀತು.
ನಿನ್ನಾತ್ಮಕಾಗಿ ನನ್ನೆಲ್ಲ ಒಲವು
ನನ್ನ ಕಣ್ಣಗಾಗಿ ನಿನ್ನೆಲ್ಲ ಚೆಲುವು
ಮಲಗಬೇಡಿನ್ನು
ಕೇಳು ನಾನಿನ್ನು

ಕಾದಿರುವೆ ನಾನು, ಅಳುತಿರುವೆ ನಾನು
ಆದರೆಲ್ಲಿರುವೆ ನೀನು, ನೀನು?

ಇದು ಮೊದಲ ವರ್ಗದ ಕಾವ್ಯ. ಭಾರತದಿಂದ ಬಂದ ಈ ಕವನ ಸಂಕಲನವನ್ನು ತೆಗೆದು ಈ ಸುಂದರ ಕವನವನ್ನು ಓದಿದ ಕೂಡಲೆ ಗಾಸ್ ತನ್ನ ಕಣ್ಣನ್ನು ತಾನೇ ನಂಬಲಾರದವನಾದದ್ದರಲ್ಲಿ ಆಶ್ಚರ್ಯವಿಲ್ಲ. ಆ ಸಂಕಲನವನ್ನು ಅವನ ಕೈಗಿತ್ತಾಗ ಅದು 'ಅಪ್ರಯೋಜಕ' ವಾಗಿರುವುದೆಂದುಕೊಂಡಿದ್ದನಂತೆ. 'ಎಗ್ಸಾಮಿನರ್'ನ ಸಂಪಾದಕ ಮಿಂಟೊ ಈ ಸಂಕಲನವನ್ನು ಗಾಸನ ಒಲ್ಲದ ಕೈಯೊಳಗೆ ತುರುಕಿ 'ನೋಡು ಇಲ್ಲಿ ನಿನಗೆ ಓದಿಸುವಂಥದ್ದು ಇಲ್ಲವೇನೊ' ಎಂದನಂತೆ. ಪುಸ್ತಕಗಳಿಗೆ ಬರಗಾಲವಾಗಿದ್ದ ಆ ವರುಷ, 1829ರ ಆಗಸ್ಟ್ ತಿಂಗಳಲ್ಲಿ ಗಾಸ್ ಎಗ್ಸಾಮಿನರ್ ಪತ್ರಿಕೆಯ ಕಛೇರಿಗೆ ಹೋಗಿ ವಿಮರ್ಶೆಗೆ ಅರ್ಹವಾದ ಯಾವ ಪುಸ್ತಕವನ್ನೂ ಕೊಡದೆ ಇರುವುದಕ್ಕಾಗಿ ಇಡೀ ಪ್ರಕಾಶಕ ವರ್ಗವನ್ನೇ ಛೀಮಾರಿ ಮಾಡಿದ್ದ. ಅಷ್ಟು ಹೊತ್ತಿಗೆ ಸರಿಯಾಗಿ ಅಂಚೆಯವನು ಭಾರತದ ಅಂಚೆ ಚೀಟಿಯಿದ್ದ ಕಿತ್ತಳೆ ಬಣ್ಣದ ಒಂದು ತೆಳು ಪುಸ್ತಕದ ಕಟ್ಟನ್ನು ತಂದುಕೊಟ್ಟ. ಭವಾನಿಪುರದಲ್ಲಿ ಅಚ್ಚಾದ ಆ ಪುಸ್ತಕದ ಹೆಸರು ಫ್ರೆಂಚ್ ಹೊಲಗದ್ದೆಗಳಲ್ಲಿ ಕಟ್ಟಿದ 'ಗೊಂಚಲು' ಬರೆದವಳು ತೋರುದತ್.

ಸುಮಾರು ಇನ್ನೂರು ಪುಟಗಳ, ನೋಡಲು ಸುಂದರವಾಗಿಲ್ಲದ, ಮುನ್ನುಡಿಯಾಗಲಿ, ಪರಿಚಯವಾಗಲಿ ಇಲ್ಲದ ಈ ಪುಸ್ತಕ ಬೇಗನೆ ಕಸದ ಪುಟ್ಟಿಗೆ ಬೀಳುವುದನ್ನೇ ಹಣೆಯ ಬರಹವಾಗಿ ಉಳ್ಳ 'ಕೃತಿ' ಎಂದು ಗಾಸ್ ಭಾವಿಸಿದ್ದ. ಆದರೆ ಪುಸ್ತಕವನ್ನು ತೆರೆದು, 'ಮುಂಜಾವಿನ ಪ್ರೇಮಗೀತೆ'ಯನ್ನು ನೋಡಿದ ಕೂಡಲೆ 'ಕಾವ್ಯ ಇಷ್ಟು ಸೊಗಸಾಗಿದ್ದರೆ ಅದನ್ನು ರೊವ್ವೆರ್ ವಾಟ್‌ಮನ್ ಕಾಗದದ ಮೇಲೆ ಮುದ್ರಿಸಿದರೂ ಅಷ್ಟೆ ಅಥವಾ ಅದು ಭವಾನಿ ಪುರದ ಯಾವುದೋ ಅಚ್ಚಿನ ಮನೆಯಲ್ಲಿ ಮಸಕು ಮಸಕಾಗಿ ಅಚ್ಚಾಗಿ ಹೊರಬಂದರೂ ಅಷ್ಟೆ' ಎಂದ. ಗೇನ್ಸ್‌ಬ್ಬಾಲನ 'ನನ್ನ ಹಳ್ಳಿ' ಬೆರಾಂಜೆಯ 'ನನ್ನ ತಾಯಿಯ ಹುಟ್ಟು ಹಬ್ಬ' ಹಾಗೂ 'ಸ್ವಾಲೋ ಪಕ್ಷಿಗಳು' ಶ್ರೀಮತಿ ವಿಯಟಳ 'ಸುಖ ವಲಸೆಹೋಯಿತು' ಹಾಗೂ 'ಕೊಲಿನೆಟ್' ಮತ್ತು 'ಗಂಧರ್ವ ಬಂದಿ' ಈ ಏಳು ಕವನಗಳು ಅರು ಸಾಯುವ ಮುನ್ನ ಬರೆದ ಏಳು ಕವನಗಳು. ಆದರೆ ಇವು ಯಾವೂ 'ಮುಂಜಾನೆಯ ಪ್ರೇಮಗೀತೆ'ಯ ಮಟ್ಟಕ್ಕೆ ಬರುವುದಿಲ್ಲ.

ಅರು ಕಾಲವಾಗುವುದಕ್ಕಿಂತ ಮೊದಲು ತೋರುವೂ ಬೆಂಗಾಲ್ ಮ್ಯಾಗಜೈನಿಗಾಗಿ ಏಳು ಕವನಗಳನ್ನು ಭಾಷಾಂತರಿಸಿದಳು. ಅಕ್ಕತಂಗಿಯರಿಬ್ಬರೂ ಸೇರಿ ಬೆಂಗಾಲ್ ಮ್ಯಾಗಜೈನಿಗಾಗಿ ಹದಿನಾಲ್ಕು ಕವನಗಳನ್ನು ಭಾಷಾಂತರಿಸಿದರು. ತೋರುವಿನ ಭಾಷಾಂತರಗಳಲ್ಲಿ ಹೆಚ್ಚಿನ ಪ್ರಸಿದ್ಧಿಗೆ ಬಂದು ಮೆಚ್ಚುಗೆಗಳಿಸಿದ್ದು ಆರ್‌ನಾಲ್ಡ್‌ನ 'ಎಲೆ' ಎಂಬ ಕವನ.

ಕಾವಿಹೋದ ಬೇರೆಯಾಗಿ
ಹಳದಿಯಾಗಿ ಒಣಗಿಹೋಗಿ
'ಎಲೆ' ನೀನು ಎಲ್ಲಿ ಹೊರಟೆ?

ಗಾಳಿ ರೋಸಿ ಬೀಸಿದಾಗ
ಹೆಮ್ಮರವೂ ಉರುಳಿದಾಗ
ನಾನು ವ್ಯರ್ಥ ಹಲುಬಿದೆ.
ದುಃಖ ಬದುಕು ಅಂದಿನಿಂದ
ಹುಚ್ಚುಗಾಳಿ ಸುತ್ತಲಿಂದ
ಬೀಸಿ ನನ್ನ ಒಯ್ಯಿತು
ಬೆಟ್ಟದ ಮೇಲೊಗೆಯಿತು
ಕಣಿವೆ ಕಾಡಿಗೆಸೆಯಿತು.
ಅದೋ ಕೇಳು ಸಿಳ್ಳು ಸದ್ದು
ಕರೆವ ಕಡೆಗೆ ನಡೆವೆನೆದ್ದು
ಗೊಣಗಲೊಲ್ಲೆ ಎಂದಿಗೂ.
ಹೂ ಗುಲಾಬಿ ಬಾಡಬೇಕು
ಹಸುರೆಲೆಯೂ ಒಣಗಬೇಕು
ಭುವಿಯ ಬದುಕು ಮುಗಿಯಬೇಕು
ಸತ್ಯವಿದನಾನರಿಯಬೇಕು
ಬದುಕಲೇಕೆ ಹೆಣಗಬೇಕು?

೬. ಏಕಾಂಗಿನಿ

ಅರುವಿನ ಮರಣಾನಂತರ ರಾಂಬಾಗಾನಿನಲ್ಲಿ ಜೀವನ ಎಂದಿನ ಸ್ಥಿತಿಗೆ ಬಂದಿತು. ಗೋವಿಂದ, ಆತನ ಪತ್ನಿ, ಬದುಕಿ ಉಳಿದಿದ್ದ ಏಕಮಾತ್ರ ಪುತ್ರಿ ಇವರು ತಮ್ಮೆಲ್ಲ ದುಃಖ ವನ್ನೂ ಒಳಗೇ ಹುದುಗಿಸಿಟ್ಟುಕೊಂಡು ದೇವರಿಗಾಗಿ ವಿದ್ವತ್ಪೂರ್ಣ ಕಾರ್ಯಕ್ಕಾಗಿ ಮಾತ್ರವೇ ಬದುಕಿರಬೇಕೆಂದು ನಿರ್ಧರಿಸಿದಂತಿತ್ತು. ತೋರು ತನಗೆ ಮೊದಲಿನಿಂದಲೂ ಯಾವುದರಲ್ಲಿ ಆಸಕ್ತಿ ಇದ್ದಿತೊ ಅವುಗಳನ್ನೇ ಮುಂದುವರಿಸಿದಳು. ಇಂಗ್ಲೆಂಡಿನ ಬಗ್ಗೆ ತಮಗಿದ್ದ ಪ್ರೇಮವನ್ನು ಮೇರಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದಳು. ತೋರುವಿನ ತಂದೆಗೆ ಎಲ್ಲ ಸ್ಥಳಗಳಿಗಿಂತಲೂ ವೆಸ್ಟ್‌ಮೋರ್‌ಲೆಂಡ್ ಬಹಳ ಇಷ್ಟ. ಕಾರಣ ವಿಂಡರ್ ಮಿಯರ್ ಸರೋವರದ ಬಳಿ ವರ್ಡ್ಸ್‌ವರ್ತ್‌ನಿದ್ದ. ಕೆಸ್‌ವಿಕ್ ಬಳಿ ಸದೆ ಇದ್ದ. ಅಕ್ಕ ನನ್ನು ಕಳೆದುಕೊಂಡ ತೋರುವಿಗೆ ಓದುವುದು ಎಷ್ಟೇ ಇದ್ದರೂ ಕಾಲ ಹೋದಂತೆಯೇ ಕಾಣುತ್ತಿರಲಿಲ್ಲ. ಅವಳು ಮರೆತುಹೋಗಿದ್ದ ಗಣಿತವನ್ನು ಮತ್ತೆ ಕಲಿಯುವ ಪ್ರಯತ್ನ ಮಾಡಿದಳು. ಕೆಳ ಬಂಗಾಳದಲ್ಲಿ ಕ್ಷಾಮ ತಲೆದೋರಿತ್ತು. ಆಗ ತೋರು ಹಿಂದೆ

ಬಂದುಹೋದ ಕ್ಷಾಮವನ್ನು ನೆನೆಸಿಕೊಂಡಳು. ಹೆಂಗಸರು, ಗಂಡಸರು ಮಕ್ಕಳು ಎಲ್ಲರೂ ಎಲುಬಿನ ಗೂಡಾಗಿದ್ದರು. ನೋಡಲು ಬರಿ ಮೂಳೆ ಮೂಳೆ. ಅವರಿಗೆ ಸ್ವಲ್ಪ ಆಹಾರ ದೊರೆತರೆ ಹಸಿದ ಅವರು ಅದಕ್ಕಾಗಿ ಹೇಗೆ ಕಿತ್ತಾಡುತ್ತಿದ್ದರು ಎಂಬು ದನ್ನು ನೆನೆಸಿಕೊಳ್ಳಲೂ ಕಷ್ಟ. ಮಕ್ಕಳಿಂದ ತಾಯಿ ಕಿತ್ತು ತಿನ್ನುತ್ತಿದ್ದಳು. ಪ್ರತಿದಿನವೂ ಅವರಿಗೆ ಸಿಗುತ್ತಿದ್ದ ಅಷ್ಟು ಅನ್ನ ಸಾರಿಗಾಗಿ ಅವರು ತೋಟದಲ್ಲಿ ಬಂದಿರುತ್ತಿದ್ದರು.

1874 ರಲ್ಲಿ ಕಲ್ಕತ್ತೆಗೆ ಬಂದು ನಾಲ್ಕೈದು ವರುಷಕಾಲ ಅಲ್ಲೇ ನೆಲೆಸಿದ್ದ ಬಿಷಪ್ ಕ್ಲಿಫರ್ಡ್ ದತ್ ಕುಟುಂಬದ ಗೃಹ ಜೀವನದ ಬಗ್ಗೆ ಕೆಲವು ಸ್ವಾರಸ್ಯಪೂರ್ಣ ವಿಷಯಗಳನ್ನು ತಿಳಿಸಿದ್ದಾನೆ. ದತ್ತರ ಕುಟುಂಬ ಆರಾಧನೆಗಾಗಿ ಹೋಗುತ್ತಿದ್ದ ಪುರಾತನ ಮಿಷನ್ ಚರ್ಚಿನ ಸಹಾಯಕ ಪಾದ್ರಿಯಾಗಿ ಬಂದಾಗ ಅತ ಮಾಡಿದ ಮೊದಲ ಕೆಲಸ ತಾನು ಕೇಂಬ್ರಿಜ್‌ನಲ್ಲಿ ಸಂಧಿಸಿದ್ದ ದತ್ತರ ಕುಟುಂಬದ ಪರಿಚಯವನ್ನು ಗಾಢಪಡಿಸಿಕೊಂಡದ್ದು. ಅರು ಕಾಲವಾದ ನಾಲ್ಕು ತಿಂಗಳ ಮೇಲೆ ಬಿಷಪ್ ಕ್ಲಿಫರ್ಡ್ ಭೇಟಿಯಿತ್ತ. ಅನೇಕ ವರುಷಗಳ ತರುವಾಯ ಆತ ಹರಿಹರದಾಸನಿಗೆ ಹೀಗೆ ಬರೆದಿದ್ದಾನೆ: 'ನಾನು ಈ ಕುಟುಂಬವನ್ನು ಪದೇ ಪದೇ ಸಂಧಿಸುತ್ತಿದ್ದೆ. ಅವರೊಂದಿಗೆ ಬೆರೆತು ಸಂತೋಷಪಡು ತ್ತಿದ್ದೆ. ಗೋವಿಂದ ಚಂದ್ರ ದತ್ತ ಅತ್ಯಂತ ಸುಸಂಸ್ಕೃತ ಶ್ರೀಮಂತ. ದಾನಿ. ಸಾಹಿತಿಕ ಚಟುವಟಿಕೆಗಳಿಗೆ ಅವನ ಕಾಲ ಮೀಸಲು. ಆತನ ಭಾಷಾಪಾಂಡಿತ್ಯ ಅಸಾಧಾರಣ ವಾಗಿತ್ತು. ಪಾಶ್ಚಾತ್ಯ ಪೌರ್ವಾತ್ಯ ಭಾಷೆಗಳೆರಡರ ಪರಿಚಯವೂ ಅವನಿಗಿತ್ತು. ಶ್ರೀಮತಿ ದತ್ ಬಂಗಾಳಿಯನ್ನು ಬಿಟ್ಟು ಬೇರೆ ಭಾಷೆಯನ್ನು ಮಾತಾಡಿದ್ದನ್ನು ನಾನು ನೋಡಿಲ್ಲ. ಆದರೆ ಆಕೆಯೂ ಇಂಗ್ಲಿಷನ್ನು ಅರ್ಥಮಾಡಿಕೊಳ್ಳಬಲ್ಲವಳಾಗಿದ್ದಳು.

ಸ್ವಲ್ಪ ಕಾಲವಾದ ಮೇಲೆ ದತ್ ಕುಟುಂಬದವರು ಮತ್ತೆ ಬಾಗ್‌ಮರಿ ತೋಟದ ಮನೆಗೆ ಹೋದರು. ಅಲ್ಲಿನ ಮೂಲೆ ಮೂಲೆಯೂ ಅರುವಿನ ನೆನಪು ತರುತ್ತಿದ್ದುದ ರಿಂದ ಇದಕ್ಕೆ ಮೊದಲು ಅವರಿಗೆ ಅಲ್ಲಿ ಹೋಗಿ ನಿಲ್ಲುವ ಮನಸ್ಸಾಗಲಿಲ್ಲ. ತನ್ನ 'ಮಧುರ ಮನೋಭಾವ' ದಿಂದ ಮನೆಯನ್ನೂ ಮನಗಳನ್ನೂ ತುಂಬಿದ್ದಳು ಅವಳು. ಸಂಸ್ಕೃತವನ್ನು ಕಲಿಯಬೇಕೆಂಬ ಆಸೆ ತೋರುವನ್ನು ಕಾಡಿತು. ಭಾರತದ ಶ್ರೇಷ್ಠ ಭಾಷೆ ಯಾದ ಸಂಸ್ಕೃತವನ್ನು ಕಲಿಯಬೇಕೆಂಬ ತೋರುವಿನ ಆಸೆಗೆ ಪ್ರೋತ್ಸಾಹ ಕೊಟ್ಟು ಅವಳು ಆ ಭಾಷೆಯನ್ನು ಕಲಿಯಲು ಸಹಾಯ ಮಾಡುವುದಕ್ಕೆ ಗೋವಿಂದ ಕಾತರನಾಗಿದ್ದ. ತಾವಿಬ್ಬರೂ ಈ ಭಾಷೆಯನ್ನು ಒಟ್ಟಿಗೆ ಅಭ್ಯಾಸಮಾಡಿದರೆ ತಮ್ಮಿಬ್ಬರ ನಡುವಿನ ಬಾಂಧವ್ಯ ಇನ್ನೂ ಗಾಢವಾಗುವುದೆಂದು ಆತ ತಿಳಿದ. ತಂದೆ ಮಗಳ ನಡುವೆ ಆಳವಾದ ಅರಿವು ಮೂಡಿತು. ಇದನ್ನು ತೋರು ತನ್ನೆರಡು ಕವನಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾಳೆ. 'ಗೊಂಚಲು' ಸಂಕಲನದ ಕೊನೆಯ ಪದ್ಯ ಭಾಷಾಂತರವಲ್ಲದ ಒಂದು ಸ್ವತಂತ್ರಕವನ. ಇನ್ನೊಂದು 'ಲಾವಣಿಗಳು' ಸಂಕಲನದ 'ಜಾಲಿನ ಮರ.'

ನಡು ಹಗಲು, ಆದರೇನೊ ಬಳಲಿಕೆ. ನನ್ನ
ಕಣ್ಣು ಮುಚ್ಚಿತ್ತು. ನಿದ್ದೆಯಾವರಿಸಿರಲಿಲ್ಲ.
ತಂದೆಯ ಕೈಯಲ್ಲಿತ್ತು ನನ್ನ ಕೈ.
ಬಳಿಯಲೇ ಇರುವರೆನಿಸಿತ್ತು. ಹೀಗೆಯೇ ನಡೆದಿತ್ತು

ಮೇಲಿಂದ ಮೇಲೆ. ಗುಡುಗುತ್ತಿತ್ತು ಮೌನವಾಗಿ.
ಮನದಲ್ಲಿ ಮೂಡಿದಾ ಪ್ರತಿಯೊಂದು ಭಾವನೆ
ಹೃದಯ ಸಂವಾದದ ಸಾಗರದ ಮಾತೇಕೆ ಮತ್ತೆ?
ನಾದ ಮಿಡಿದಿತ್ತು, ಮೌನ ಮಾತಾಡಿತ್ತು.
ಇದ್ದಕ್ಕಿದ್ದಂತೆಯೆ ಬೆಳಕೊಂದು ಮೂಡಿತು. ದೃಶ್ಯ ಬದಲಾಯಿತು
ನಾಟಕೀಯವಾಯಿತು. ಅದೊಂದು ಬಯಲು
ಬಲು ದೊಡ್ಡ ಬಯಲು. ವಿಸ್ತಾರಗೊಂಡಿತ್ತು ಬಯಲು
ಮಂಜು ಮುಚ್ಚಿದ ಹಾಗೆ ರಾತ್ರಿಯು ಕಪ್ಪಾಗಿದ್ದ
ಮಂಜು ಕವಿದಾ ಬಯಲಿನೇಲಿನ ತಾರಾಕಾಂತಿ ತಂದಿ
ಹರಡಿತ್ತು ಬಯಲ ಮೇಲೆ ಅನುಪಮದಾ ಬೆಳಕು
ಅವರ್ಣನೀಯವಾದ ತೀಕ್ಷ್ಣ ಅದ್ಭುತವೇ ಬೆಳಕು.
ಆ ವಿಶಾಲ ಬಯಲ ನಡುವೆ ನಾನು ಕಂಡೆ
ಕಾಣ್ಸ್ಲು ...ನಿಜವಾಗಿ ಕಂಡೆ. ವಿಸ್ಮಯವಾಗಿಯೇ ಇದ್ದೆ ನಾನು.
ಒಂದು ಮರ. ಹರಡಿತ್ತು ಅದರ ಕೊಂಬೆಗಳು. ಎಲೆಗಳೋ
ಹಲವು ವಿಧ. ಅದ್ಭುತ ಬಣ್ಣ. ಹೊಳೆಯುವ ಚಿನ್ನ
ಬೆಳ್ಳಿಯಲ್ಲಿ ಅದೇನು ಹೊಳಪು! ಮನೋಹಾರಿತ.
ಮರದ ಪಕ್ಕದಲ್ಲಿ ಕಂಡೆ ಗಂಧರ್ವನೊಬ್ಬನ.
ಎಲೆಗೊಂಚಲ ಹಲವು ಕಿತ್ತು ನನ್ನ ತಲೆಯ ಸುತ್ತ ಸುತ್ತಿದ.
ಅದೇನು ಮಧುರ ಆ ಎಲೆಗಳ ಸ್ಪರ್ಶ!
ನನ್ನ ತಲೆಯೊಳಗೆ ನಿಂತಿತು. ಕಾವ್ಯ ಇಳಿದು ಹೋಯಿತು.
ನಾನು ಕೂಗಿ ಹೇಳಿದೆ. ನನ್ನ ತಂದೆಯ ಹಣೆಗೂ
ಈ ಎಲೆಗೊಂಚಲ ಮಾಲೆ ಸುತ್ತು.
ಒಂದೆ ಒಂದು ಎಲೆಯ ತೆಗೆದು ಹಣೆಯ
ಮೃದುವಾಗಿ ಸವರಿದ. ಇಲ್ಲವಿಲ್ಲವೆಂದ.
ನಾನೆಂದೂ ಅಂಥ ಚೆಲುವ ಮುಖವ ನೋಡಿಲ್ಲ.
ಆ ಗಂಧರ್ವನಾಮುಖದ ಚೆಲುವಿನ ಅಂದವ ಕಂಡಿಲ್ಲ.
ಅದೇನು ದೈವಿಕಾನುಕಂಪ. ಅದೇನು ದಿವ್ಯಪ್ರೇಮ!
ಅಷ್ಟರಿಂದಲೇ ಕೆಲಕಾಲವನೆ ದಿಟ್ಟಿಸಿದೆ. ಇದ್ದಕ್ಕಿದ್ದಂತೆಯೇ
ವಿಸ್ಮಯವಾಯಿತೆನಗೆ. ಕಂಡೆ ಕಣ್ಣು ತೆರೆಯುತ್ತಿತ್ತು.
ಮರೆಯಾಯಿತಾ ಬೆಳಕು. ದಟ್ಟ ಮಂಜು ನೆಲದ ಕವಿದಾಗ
ಅವರ ಮೇಲೆ ಬೆಳಕು ಹರಿದಾಗ ಕಂಡು ಕಾಂತಿ ಇಲ್ಲವಾಯಿತು.
ಮಾಯವಾಗಿದ್ದ ಗಂಧರ್ವ ಚೆಲುವ. ಇದ್ದವರು ಒಬ್ಬರೆ
ನನ್ನ ತಂದೆ. ಬೇಸರದ ಮುಖದಲ್ಲಿ ಕುಳಿತ ತಂದೆ
ತಮ್ಮ ಕೈಯಲ್ಲಿ ನನ್ನ ಕೈಗಳ ಒತ್ತಿ ಹಿಡಿದು ಕುಳಿತ ತಂದೆ!

ಆಧ್ಯಾತ್ಮ ಯೋಗ ಭಾವವನ್ನು ಮುಟ್ಟಿದ ಈ ಕವನ 'ಬಾಳಿನ ಪಾಠ' ವನ್ನು ಮಟ್ಟಿಗೆ ಹೇಳುವುದಾದರೆ ತೋರುವಿನ ಅತ್ಯುತ್ತಮ ಕವನ. ಬ್ಲೇಕ್ ಕವಿ ದೈವಿಕ ಪ್ರೇಮ ಪ್ರಮುಖದೊಳಕ್ಕೆ ಇರುವ ಎಂತಹ ದರ್ಶನ ಪಡೆದನೋ ಅಂತಹುದೇ ದರ್ಶನವನ್ನು ಇಲ್ಲಿ ತೋರು ಪಡೆದಿದ್ದಾಳೆಂಬ ಲಕ್ಷಣವಿಲ್ಲ. ದಿವ್ಯಾನಂದವನ್ನು ಅನುಭವಿಸಿದ ಆ ಕ್ಷಣಗಳಲ್ಲಿ ತೋರು ತನ್ನ ತಂದೆಯನ್ನು ದೇವರು ಆಶೀರ್ವದಿಸಲಿ ಎಂದು ಬೇಡುತ್ತಾಳೆ. ತನ್ನನ್ನು ಆತನಿಂದ ದೂರ ಕೊಂಡೊಯ್ಯಲಾಗುವುದೆಂದೂ ಆತನೊಬ್ಬನೇ ಏಕಾಂಗಿಯಾಗಿ ದುಃಖ ಅನುಭವಿಸಬೇಕಾಗುವುದೆಂದೂ ಅವಳು ಬಹಳ ನೊಂದಿದ್ದಳು. ಅಲ್ಲದೆ ಹಾಗಾದ ದಿವ್ಯ ದರ್ಶನ ಆತನ ಪಾಲಿಗಿರಲಿಲ್ಲ. ಅದಿನ್ನೂ ಆತನದಾಗಿರಲಿಲ್ಲ.

ತೋರುವಿನ ಕಾವ್ಯವನ್ನಾಗಲಿ ಅವಳ ಫ್ರೆಂಚ್ ಕಾದಂಬರಿಯನ್ನಾಗಲಿ ಓದಿದಾಗ ಅವಳು ಎಷ್ಟು ಸಲ ಅನುಭವಾತೀತ ಪ್ರಜ್ಞಾತೀತ ಸ್ಥಿತಿಯಲ್ಲಿ ಇರುತ್ತಿದ್ದಳೆನ್ನುವುದು ಸ್ಪಷ್ಟವಾಗುತ್ತದೆ. ಅವಳು ಹೆಚ್ಚು ಹೆಚ್ಚು ದುರ್ಬಲಳಾಗುತ್ತ ಬಂದಹಾಗೆಲ್ಲ. ಅಕ್ಕನನ್ನು ಕಳೆದುಕೊಂಡ ದುಃಖದಲ್ಲಿ ದೇವರಿಗೆ ಹೆಚ್ಚು ಹೆಚ್ಚು ಶರಣಾಗತಳಾದಹಾಗೆಲ್ಲ ತಾನೂ ದೇವರಲ್ಲಿ ಒಬ್ಬಳು ಎಂಬ ಭಾವನೆ ಬೆಳೆಯಿತು. ಆಧ್ಯಾತ್ಮ ಯೋಗ ಬಲದಿಂದ ದೈವ ಸಂಪರ್ಕ ಹೆಚ್ಚಿದಾಗ ಹೊರಬಂದ 'ಲಾವಣೆ' ಸಂಕಲನದಲ್ಲಿರುವ ಆತ್ಮಸ್ಫುರಣ ಗೀತೆಗಳು, ಉಳಿದ ಕವನಗಳಿಗಿಂತ ಹೆಚ್ಚು ಶಕ್ತಿಯುತವಾದದ್ದು. ಈ ಕವನಗಳಲ್ಲಿ ನಾವು ಮತ್ತೆ ಮತ್ತೆ ಮಾನವ — ದೈವಿಕ ಸಂಘರ್ಷಣೆಯನ್ನು ನೋಡುತ್ತೇವೆ. ಈ ಒಂದು ವಿಶೇಷದಿಂದ ಅಲೌಕಿಕ ಶಕ್ತಿಯಿಂದ ಅವಳ ಕವನಗಳು ಹೆಚ್ಚು ಸುಲಲಿತವೂ ಪ್ರಬುದ್ಧವೂ ಆಗಿವೆ. ಲಾವಣಿಗಳಲ್ಲಿ ಭೂಮಿಯ ಮಕ್ಕಳಿಗೂ ದಿವಿಯ ದೇವತೆಗಳಿಗೂ ಇರುವ ಸಂಬಂಧವನ್ನು ಆಳವಾಗಿ ಅಭ್ಯಾಸ ಮಾಡಿದ್ದಾಳೆ. ಸಾವಿತ್ರಿ ಯಮನನ್ನು ಓಲಾಲಿಸಿ ಪತಿಭಿಕ್ಷೆ ಬೇಡುತ್ತಾಳೆ. ಸಾವಿತ್ರಿ ಗತಿಸಿದವರ ಯಜಮಾನ ಯಮನ ಕರಾಳ ರೂಪಕ್ಕೆ ಅಂಜುವುದಿಲ್ಲ. ಬದಲಾಗಿ ಹೀಗೆ ಹೇಳುತ್ತಾಳೆ:

ಸದ್ಗುಣದ ಶಕ್ತಿ ಅಪಾರ
ನಮ್ಮ ಪ್ರಾರ್ಥನೆಯದ್ದು. ಇರಲಿ
ಅನುದಿನ ನಮ್ಮ ಮೇಲದರ ಪ್ರಭಾವ.

ನಾವು ಒಳ್ಳೆಯದು. ಅಂಜಬೇಕಾಗಿಲ್ಲ. 'ಬೇಸರವೇನಿಲ್ಲ ಓ ಸಾವೆ!' ಎಂದಿದ್ದಾಳೆ. ತೋರುವಿನ ಲಾವಣಿಗಳಲ್ಲಿ ಆಧ್ಯಾತ್ಮಿಕತೆ ತುಂಬಿ ತುಳುಕುತ್ತದೆ. ನಾವು 'ಧರ್ಮವೀರ' ಎಂಬ ಭಾವನೆಯನ್ನು ತಂದುಕೊಡುವುದಿಲ್ಲ. ಆದರೆ ಬಾಳಬೇಕಿನಂಗಳವಲ್ಲಿನ ಪ್ರಾಮಾಣ ಇದ್ದೆ. ಸಂತ ಜಾನ್ ಹೇಳುವಂತೆ ಅದು 'ತಾನೇ ತಾನಾಗಿ ರೂಪುಗೊಂಡಿತು. ತ್ವದಲ್ಲಿ ಬೆಳಗುತ್ತದೆ. ಅದನ್ನು ಪಡೆದವರು ಮುಂದೆ ದೇವಪುತ್ರರಾದರು.'

ತೋರುವಿನ ಅನೇಕ ಕವನಗಳು ಬೆಂಗಾಲ್ ಮ್ಯಾಗಜೈನ್‌ನಲ್ಲಿ ಪ್ರಕಟವಾದವು. ರುವಿನ ಮರಣಾನಂತರ ತೋರು 'ಟಿ.ಡಿ.' ಎಂಬ ಅಂಕಿತದಲ್ಲಿ ಕವನಗಳನ್ನು ಬರೆದು ಂಗಾಲ್ ಮ್ಯಾಗಜೈನ್‌ನ ಕಾವ್ಯವಿಭಾಗದಲ್ಲಿ ಪ್ರಕಟಿಸಿದಳು. ತೋರುವಿನ ಒಂದೆರಡು ಲೇಖನಗಳು ಪ್ರಕಟವಾದವು. ಆದರೆ ಅವುಗಳಲ್ಲಿ ಟಿಪ್ಪಣಿಗಳಲ್ಲಿರಬೇಕಾದ ಹಿರಿ ಸಾಮ್ಯವಿಲ್ಲ

ದಿರುವುದರಿಂದ ಅವು ಅಷ್ಟು ಜನಪ್ರಿಯವಾಗಲಿಲ್ಲ. ತೋರು ತಂದ ಭಾವ... ಬರಹಗಾರರಾಗಿದ್ದರಿಂದ ಅವಳ ಚುಟುಕಗಳನ್ನು ಅನುವಾದ ಮಾಡಿದರೂ ಅವು ಜನಪ್ರಿ- ಯವಾಗುತ್ತಿರಲಿಲ್ಲ.

ತೋರು ಲೆಕಾಂಟೆಯಲ್ಲಿ ಬಹಳ ಆಸಕ್ತಿ ಹೊಂದಿದವಳಾಗಿ 1874 ರ ಕೊನೆ... ಬೆಂಗಾಲ್ ಮ್ಯಾಗಜೈನ್‌ನಲ್ಲಿ ಅವನನ್ನು ಕುರಿತು ಒಂದು ಲೇಖನವನ್ನು ಬರೆದಳು. ಅಲ್ಲದೆ ಅವನ ಕೆಲವು ಕವನಗಳನ್ನು ಅನುವಾದಿಸಿದಳು ಕೂಡ. ಈ ಕವಿಯು ಭಾವ ಭಾವ... ಗಳೂ ತೋರುವಿನ ಭಾವವಾ ಹೋಲುತ್ತಿದ್ದವು. ಈತ ವಾಲ್ಮೀಕಿಯ ಬಗ್ಗೆ ಬರೆ... ಕವನ ಭಾರತೀಯವಾದ ಇವಳನ್ನು ಆಕರ್ಷಿಸಿದ್ದು ಸಹಜ. ಎಡ್‌ಮಂಡ್ ಗಾಸ್ ಈ ರೀತಿ ಹೇಳಿದ್ದಾರೆ: 'ಲೆಕಾಂಟೆಯನ್ನು ಕುರಿತ ಲೇಖನ, ಅವನ ಕವನಗಳ ಅನು... ಭಾಷಾಂತರಗಳು ಇವು ಪ್ರಕಟವಾದ ಮೇಲೆ ಜೋಸೆಫಿನ್ ಸೌಲರಿಯನ್ನು ಕುರಿತ ಇನ್ನೊಂದು ಲೇಖನ ಪ್ರಕಟವಾಯಿತು. ಈ ವಿಮರ್ಶಾತ್ಮಕ ಬರವಣಿಗೆಯಲ್ಲಿ ತೋರು ತನ್ನ ಪ್ರಬುದ್ಧ ವಿಮರ್ಶೆ ಎಷ್ಟನ್ನು ಮೆಚ್ಚಬಹುದೋ ಅದಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಕವಿಯನ್ನೂ ಕಾವ್ಯವನ್ನೂ ಮೆಚ್ಚಿದ್ದಾಳೆನ್ನಬಹುದು. ಇದು ನಿಜವಾಗಿ ಆಶ್ಚರ್ಯ... ಕರ. ಆದರೆ ಈಗ ಅದೊಂದು ಪಾಠ ಎನಿಸುತ್ತದೆ. ಈ ಶಕ್ತಿಯುತವಾದ ಅದ... ಮಾರ್ಗದರ್ಶನವಿಲ್ಲದ ವಿಮರ್ಶೆಯನ್ನು ನೋಡಿದರೆ. 1874 ರ ಜುಲೈ ತಿಂಗ... ಅವಳಕ್ಕ ಅರು ಇಪ್ಪತ್ತರ ವಯಸ್ಸಿನಲ್ಲಿ ಕಾಲವಾದಮೇಲಂತೂ ಇವಳು ಇನ್ನ... ಒಬ್ಬಂಟಿಗಳಾದಳು.'

1874 ಡಿಸೆಂಬರ್ ಹದಿನೈದರಂದು ಮೇರಿ ಮಾರ್ಟಿನ್‌ಳಿಗೆ ಬರೆದ ಪತ್ರದಲ್ಲಿ ತೋರು ಹೀಗೆ ಹೇಳಿದ್ದಾಳೆ: 'ನಾವು ಫ್ರೆಂಚಿನಿಂದ ಭಾಷಾಂತರಿಸಿರುವ ಕವನಗಳ ಸಂಖ್ಯೆ ಒ... 200 ಆದೊಡನೆ ಅವನ್ನು ಪ್ರಕಟಿಸುವುದಾಗಿ ಅಪ್ಪ ಹೇಳಿದ್ದಾರೆ. ಈಗ ತ್ರಿಯು... ಡೇ ಸಂಪಾದಿಸುತ್ತಿರುವ ಬೆಂಗಾಲ್ ಮ್ಯಾಗಜೈನಿಗೆ ಅವನ್ನು ಕಳುಹಿಸುತ್ತಿದ್ದೇನೆ. ಕವನಗಳು ಒಟ್ಟು ಇನ್ನೂರರಷ್ಟಾದ ಮೇಲೆ ಸಂಗ್ರಹಿಸಿ ಪ್ರಕಟಿಸಬೇಕೆಂಬುದು ಅ... ಆಸೆ.' ಬೆಂಗಾಲ್ ಮ್ಯಾಗಜೈನ್‌ನಲ್ಲಿ ತೋರು ಹೆ. ಲೂಯಿ ವಿವಿಯನ್ ದೆರೋಜಿ... ಮೇಲಿನ ಲೇಖನವನ್ನು ಪ್ರಕಟಿಸಿದಳು.

1875 ರ ಮೊದಲಲ್ಲೆ ಮೇರಿ ಮಾರ್ಟಿನ್‌ಳಿಗೆ ಬರೆದ ಪತ್ರದಲ್ಲಿ ತೋರು ಬೆಂಗಾ... ಮ್ಯಾಗಜೈನನ್ನು ಖಂಡಿಸಿದ್ದಾಳೆ. 'ನೀನು ನಗುತ್ತಿದ್ದೀಯೇನು? ಡಿಸೆಂಬರ್ ತಿಂ... ಪತ್ರಿಕೆ ಇನ್ನೂ ಬಂದಿಲ್ಲ. ಕಲ್ಕತ್ತದಲ್ಲಿ ಮುದ್ರಕರು ನಿಧಾನವಂತೆ!'

1874 ರ ಕೊನೆಯ ಹೊತ್ತಿಗೆ ತೋರು ಮತ್ತೆ ತೀವ್ರ ಅನಾರೋಗ್ಯದಿಂದ ನರಳ... ಹಾಸಿಗೆ ಹಿಡಿದು ಮಲಗಿದ ಅವಳು ರಕ್ತ ವಾಂತಿ ಮಾಡತೊಡಗಿದಳು. ಅಲ್ಲದೆ ... ಪದೇ ಜ್ವರ ಕಾಣತೊಡಗಿತು. ಇಷ್ಟಾದರೂ ವಿದೇಶಕ್ಕೆ ಮರಳಿ ಹೋಗುವಾಸೆ. ವೈದ್... ಕೂಡ ಮರುವರುಷದ ವಸಂತದ ಹೊತ್ತಿಗೆ ಇದು ಸಾಧ್ಯವಾಗಬಹುದೆಂದು ಹೇಳಿ...

೧೦. 1875

ಜನವರಿ 1 ರಂದು ಗೌರಿ ಮೇರಿಗೆ ಹೊಸವರ್ಷದ ಶುಭಾಶಯ ತೋರು ಬರೆದಳು. ಆದರೆ ಫೆಬ್ರವರಿಯಲ್ಲಿ ತಾನೇ ಕಾಯಿಲೆ ಮಲಗಿದಳು. ವಸಂತದ ವೇಳೆಗೆ ಪ್ರಯಾಣಕ್ಕೆ ಬೇಕಾದ ಸಿದ್ಧತೆಯನ್ನು ಮಾಡಲಾಗಲಿಲ್ಲ. ತೋರು ಅನಾರೋಗ್ಯದಿಂದಲೇ ಇದ್ದುದರಿಂದ ಆ ವರ್ಷ ಪ್ರಯಾಣದ ಆಸೆಯನ್ನು ಕೈಬಿಡಬೇಕಾಯಿತು. ಎಲಿಜಬೆತ್ ಬ್ಯಾರೆಟ್ ಬ್ರೌನಿಂಗಳ ಕವನ ಸಂಕಲನವೊಂದನ್ನು ತಾಯಿ ಆಕೆಗೆ ಕೊಟ್ಟದ್ದರಿಂದ ತೋರು ಅದರಲ್ಲಿ ಮುಳುಗಿದಳು. ಅಲ್ಲದೆ 'ಬ್ಲೀಕ್ ಹೌಸ್' ಕಾದಂಬರಿಯನ್ನು ಓದುತ್ತಿದ್ದಳು. ಜೊತೆಗೆ ಬೆಂಗಾಲ್ ಮ್ಯಾಗಜೈನಿಗೆ ಫ್ರೆಂಚ್ ಕವನಗಳ ಭಾಷಾಂತರಗಳನ್ನು ಕಳುಹಿಸುತ್ತಿದ್ದಳು.

ಆ ವರ್ಷದ ನವೆಂಬರ್ ತಿಂಗಳಲ್ಲಿ ಪ್ರಿನ್ಸ್ ಆಫ್ ವೇಲ್ಸ್ — ವೇಲ್ಸ್‌ನ ರಾಜಕುಮಾರ (ಏಳನೆಯ ಎಡ್‌ವರ್ಡ್) ಭಾರತಕ್ಕೆ ಬರುವುದಿತ್ತು. ತೋರು ಆ ದಿನವನ್ನು ಎದುರು ನೋಡುತ್ತಿದ್ದರೂ ಅದರ ಬಗ್ಗೆ ಮೂಡಿದ್ದ ಅನೇಕ ಪ್ರತಿಕ್ರಿಯೆಗಳನ್ನು ಕುರಿತು ಬರೆದಿದ್ದಾಳೆ. ಜುಲೈ ತಿಂಗಳಲ್ಲಿ ಆವಳ ಅಜ್ಜ ತೀರಿಕೊಂಡರು. ಆದರೆ ಶವಸಂಸ್ಕಾರಕ್ಕೆ ತೋರು ಹೋಗಲಾಗಲಿಲ್ಲ. ಅಷ್ಟು ಅನಾರೋಗ್ಯದಿಂದ ಇದ್ದಳು. ಎದೆಯ ಮೇಲೆ ಪಟ್ಟಿ ಕಟ್ಟಿದ್ದರು. ಶ್ವಾಸಕೋಶಗಳ ತೊಂದರೆಗೆ ಆ ಕಾಲಕ್ಕೆ ಬಳಕೆಯಲ್ಲಿದ್ದ ಸಿದ್ಧ ವೈದ್ಯ ಅದು.

ಸೆಪ್ಟೆಂಬರ್ ತಿಂಗಳ ಹೊತ್ತಿಗಾಗಲೆ ರಾಜಕುಮಾರನ ಭೇಟಿಯ ಬಗ್ಗೆ ಇಡೀ ಕಲ್ಕತ್ತ ನಗರ ಸಂಭ್ರಮದ ಬೀಡಾಯಿತು. ಎಲ್ಲೆಲ್ಲೂ ಉತ್ಸಾಹ ಕೌತುಕ. ಸ್ವಾಗತ ಸಮಿತಿಯ ಸದಸ್ಯನಾಗಬೇಕೆಂದು ಗೋವಿಂದ ಚಂದ್ರನನ್ನು ಕೋರಲಾಯಿತು. ಈ ಒಂದು ಸಂದರ್ಭದ ಹೊರತು ದಿನದ ಉಳಿದ ಕೆಲಸ ಕಾರ್ಯಗಳು ಯಥಾಪ್ರಕಾರ. ದಿನದ ಕಾರ್ಯಕ್ರಮ ಸಾಧಾರಣವಾಗಿ ಹೋಗುತ್ತಿತ್ತೆಂದು ತೋರು ಬರೆದಿದ್ದಾಳೆ. 'ನಮ್ಮದು ಇಲ್ಲಿ ಶಾಂತ ರೀತಿಯ ಜೀವನ. ಹೀಗಾಗಿ ಹೇಳಲು ಅಂತಹ ವಿಶೇಷ ಸಮಾಚಾರವೇನೂ ಇಲ್ಲ. ಬೆಳಗ್ಗೆ ನಾಲ್ಕುವರೆಗೆ ಏಳುತ್ತೇನೆ. ಆಮೇಲೆ ಎರಡು ಕಪ್ಪು ಚಾಕೊಲೇಟ್ ಮಾಡುತ್ತೇನೆ. ಒಂದು ನನಗೆ. ಇನ್ನೊಂದು ಅಪ್ಪನಿಗೆ. ಆಮೇಲೆ ಬಟ್ಟೆ ಬದಲಾಯಿಸಿಕೊಂಡು ಬರುತ್ತೇನೆ. ಅಷ್ಟರಲ್ಲಿ ಅಪ್ಪ ಅಮ್ಮ ಇಬ್ಬರೂ ಎದ್ದಿರುತ್ತಾರೆ. ಅಪ್ಪ ಬೆಳಗಿನ ಸಿಗಾರ್ ಸೇದುತ್ತಿರುತ್ತಾರೆ. ಆಮೇಲೆ ಮನೆಯ ಚಾವಣಿಯ ಮೇಲೆ ಹೋಗುತ್ತೇನೆ. ಮುಂಜಾನೆ ಅಲ್ಲಿ ಬಹಳ ತಂಪಾಗಿರುತ್ತದೆ. ಆಮೇಲೆ ಬಂಗಾಳಿಗೂ ಹಿಂದೂಗೂ ಬೆಳಗಿನ ತಿಂಡಿ ಕಾಳು ಮಿಠಾಯಿ ತಿನ್ನಿಸುತ್ತೇನೆ. ಅಲ್ಲಿಂದ ಬಂದು ಈ ರೂಮಿನ ಕಿಟಕಿಯ ಬಳಿ ಕೂರುತ್ತೇನೆ. ಈ ಕಿಟಕಿಯ ಅಡಿಯಲ್ಲಿ ಕೆಳಗೆ ಹೆಂಟಲ್ ಹಾಗೂ ಚೆರಿಪ್ ಕಾಳೂ ಬಿಟ್ಟಿವೆ. ತಿನ್ನುತ್ತವೆ. ಬರ್ಡ್‌ನ ಹಿಟ್ಟನ್ನು ಭಾರತದಲ್ಲಿ ಹಸುಗಳಿಗೆ ಹಾಕುತ್ತಾರೆ. ಬೇಸಿಗೆಯಲ್ಲಿ 'ಇದು ತಂಪು'

ಕುದುರೆಗಳಿಗೆ ತಿಂಡಿ ಹಾಕಿದ ಮೇಲೆ ಬೆಳಗಿನ ಉಪಹಾರ. ಅಮೇಲೆ ಅಮ್ಮನ ದಿನನಿತ್ಯದ ಕೆಲಸಕಾರ್ಯಗಳು. ಇದಾದ ಮೇಲೆ ನಾನು ಪುಸ್ತಕ ಓದುತ್ತೇನೆ. ಇಲ್ಲವೆ ಚಿಕ್ಕನ ಮಂಗಳ ಜೊತೆಗೆ ಆಟವಾಡುತ್ತೇನೆ. ಅಪ್ಪ ಓದುತ್ತಾರೆ. ಬರೆಯುತ್ತಾರೆ ಇಲ್ಲವೆ ಇಂಡಿಯನ್ ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಮಗ್ನರಾಗುತ್ತಾರೆ. ಹನ್ನೆರಡು ಗಂಟೆಗೆ ಊಟ. ಅಮೇಲೆ ಮೂರು ಗಂಟೆಯವರೆಗೂ ಓದೋ ಬರೆದೋ ಮಾಡುತ್ತೇನೆ. ಅಮೇಲೆ ಒಂದು ಹಣ್ಣು ತಿನ್ನುತ್ತೇನೆ. ಐದು ಗಂಟೆಗೆ ಬಟ್ಟೆ ಬದಲಾಯಿಸಿ ಹೊರಗೆ ಹೋಗುತ್ತೇವೆ. ನಾನು ಹಾಗೇ ತಿರುಗಾಡಿಕೊಂಡು ಬರುತ್ತೇನೆ. ಅಮ್ಮ ಅಪ್ಪ ತೋಟಕ್ಕೆ ಹೋಗುತ್ತಾರೆ. ರಾತ್ರಿ ಏಳು ಗಂಟೆಗೆ ನಮ್ಮ ಊಟ. 8.30ಕ್ಕೆ ಒಂದು ಬಟ್ಟಲು ಚಹ. ಹತ್ತು ಗಂಟೆಗೆ ಮಲಗುತ್ತೇವೆ.'

ತೋರುವಿನ ಭಾಷಾಂತರಗಳಲ್ಲಿ ಯೂಜೀನ್ ಮ್ಯಾನ್ಯುಯಲ್‌ನ 'ಆತ್ಮ ಚರಿತ್ರೆ'ಯೂ ಒಂದು. ಇದು ದೇವ ಕ್ರಿಯೆಯ ರಹಸ್ಯದ ಬಗ್ಗೆ ಇಹಪರಗಳ ಪರಸ್ಪರ ಸಂಬಂಧದ ಬಗ್ಗೆ ತೋರುವಿಗಿದ್ದ ಆಸ್ಥೆಯನ್ನು ಪ್ರತಿಪಾದಿಸುತ್ತದೆ.

ಕಾಣಿಸದಾ ತೆರದಲ್ಲಿ ಗುಂಪಿನಾ ಮಧ್ಯದಿಂದ
ಬರುತ್ತಿಹನು ಆಗಾಗ ದೇವ ಬಂದಾತ್ಮಹನು
ದುಃಖಿ ಅನ್ಯಾಯ ನಡುವೆ ಕೈಯ ಹಿಡಿದು ನಡೆಹನು
ನಡೆ ನಿಧಾನವಾದರೂ ಗುರಿಯನಂತು ಮುಟ್ಟಿಹನು
ಕಂಭದಾ ಕೊನೆಯ ತೆರದಿ ದೇವ ಅಲ್ಲಿ ಅವಳ ಕಂಡು
ತನ್ನ ಕಾರ್ಯಕ್ಕೆ ತಾನೆ ಹೊಸತು ನಗೆಯ ನಗುವನು
ಒಂದು ಆತ್ಮವನ್ನು ದೇವ ಇಂತು ಸೃಜಿಹನು

ರಾಜಕುಮಾರನ ಸಲುವಾಗಿ ಕಲ್ಕತ್ತೆಯ ಮೈದಾನದಲ್ಲಿ ಬಾಣ ಬಿರುಸುಗಳ ದೊಡ್ಡ ಪ್ರದರ್ಶನವೊಂದು ಏರ್ಪಟ್ಟಿತ್ತು. '1869ರಲ್ಲಿ ಎಡಿನ್‌ಬರೋದ ಡ್ಯೂಕ್ ಬಂದಾಗ ಸುಮಾರು ಒಂಬತ್ತು ಸಾವಿರ ಪೌಂಡುಗಳಷ್ಟನ್ನು ಬಾಣ ಬಿರುಸಿಗಾಗಿ ಖರ್ಚುಮಾಡಿದರು. ಇಷ್ಟೊಂದು ಹಣವನ್ನು ಬರಿಯ ಹೊಗೆಯಾಗಿಸುವಂತಾಗಲಿಲ್ಲವೆ?' ತೋರುವನ್ನು ಪಂದ್ಯಗಳಿಗೆ ಕರೆದೊಯ್ಯುವುದಾಗಿ ತಂದೆ ಹೇಳಿದ್ದರು. ಇದರ ಬಗ್ಗೆ ತೋರು, 'ಅಲ್ಲಿಗೆ ಹೋಗಲು ನನಗೆ ಬಹಳ ಇಷ್ಟ' ಎಂದಿದ್ದಾಳೆ.

ಇಷ್ಟು ಹೊತ್ತಿಗೆ ತೋರು ತನ್ನ 'ಫ್ರೆಂಚ್ ಹೊಲಗದ್ದೆಗಳಲ್ಲಿ ಕಟ್ಟಿದ ಗೊಂಚಲು' ಮುಗಿಸಿದ್ದಳು. ಈ ಸಂಕಲನದ ಕೊನೆಯ ಕವನ ಭಾಷಾಂತರವಲ್ಲ. ಬದಲಾಗಿ ಬಹಳ ಸುಂದರವಾದ ಸ್ವತಂತ್ರಕವನ. ಕೆಲವು ವಿಮರ್ಶಕರು, ಈ ಕವನವನ್ನು 'ಪರಿಪೂರ್ಣತೆ'ಯನ್ನು ಪಡೆದ ಕವನ ಎಂದಿದ್ದಾರೆ.

'ಹುಟ್ಟಿದ ನೆಲದಲ್ಲಿ ರೆಂಬೆ ಕೊಂಬೆ ಎಲೆ ಬಳಗದ ನಡುವೆ
ಹೂಗಳ ಸೊಗಸೇ ಸೊಗಸು. ಬಿಡಿಸಿದರೆ ಮುಗಿಯಿತು
ಆದವು ಅಂದಗೆಟ್ಟು ಬಣ್ಣಗೆಟ್ಟು ಒಡವೆ.
ಬಿಡಿಗೆಟ್ಟು ಕಷ್ಟಪಟ್ಟು ಕಟ್ಟಿದ ಹಾರ ಬಾಡೇ ಹೋಯಿತು.

ಜೀವನ ಜಂಜಾಟದಿಂದ ದೂರದೂರವಿದ್ದ ಸ್ಥಾನ
ಶಿರಂಗಾಡದಾ ಕಣಿವೆ ತುಂಬ ರಮ್ಯವಾದ ತಾಣ
ಒಂದು ನಿಮಿಷ ಬಿಸಿಲಿನಲ್ಲಿ ಒಂದು ನಿಮಿಷ ನೆಳಲಿನಲ್ಲಿ
ಕಣ್ತುಂಬಿತು ಮನದುಂಬಿತು ವನಸುಮಗಳ ಸಗ್ಗದಲ್ಲಿ
ಆದರೆ ಹೂಗಳ ಕೊಯ್ದರೆಮಾತ್ರ ಮುಗಿದೇಹೋಯಿತು ಕಥೆ
ನನಗಿಂತ ಹೆಚ್ಚು ಬಲ್ಲವರಿಹರೆ ಈ ಹೂಜೀವಿಗಳಾ ವ್ಯಥೆ
ಕೊಯ್ಯುವಾಗಲೇ ಕುಸುಮಗಳವು ಬಾಡಿಹೋಗಲಿಲ್ಲವೇಕೆ
ಬಾಡಿದ ಕುಸುಮಕೆ ನೀ ಹೊಸಜೀವವ ಕೊಡುವೆಯೇನು ?
ಪುಷ್ಪೋದ್ಯಾನದ ಹೂಗಳ ಚೆಲುವನು ಕಂಡಿಹ ನೀನು ?
ಸ್ಮರಿಸು.

ಈ ಪುಸ್ತಕವನ್ನು ಬರೆದು ಮುಗಿಸಿದ ಮೇಲೆ ಹೆಚ್ಚೇನೂ ಮಾಡಲು ಇಲ್ಲದ ತೋರು ಸಂಸ್ಕೃತವನ್ನು ಕಲಿಯಬೇಕೆಂಬ ತನ್ನ ಬಹುದಿನದ ಅಪೇಕ್ಷೆಯನ್ನು ಈಡೇರಿಸಿಕೊಂಡಳು. 'ಅಪ್ಪ ನಾನು ಇಬ್ಬರೂ ಸಂಸ್ಕೃತ ವ್ಯಾಸಂಗವನ್ನು ಪ್ರಾರಂಭಿಸುತ್ತೇವೆ.' ಡಿಸೆಂಬರ್ ನಾಲ್ಕರಂದು ತೋರು ತನ್ನ ಅಧ್ಯಯನವನ್ನು ಆರಂಭಿಸಿದಳು. ರಾಮಾಯಣ ಮಹಾಭಾರತಗಳನ್ನು ಮೂಲದಲ್ಲಿ ಓದಬೇಕೆಂಬುದು ತೋರುವಿನ ಹೆಬ್ಬಯಕೆಯಾಗಿತ್ತು.

ಹೊರಪ್ರಪಂಚದೊಡನೆ ಅವರು ಹೊಂದಿದ್ದ ಅಲ್ಪ ಸಂಪರ್ಕವನ್ನು ಬಿಟ್ಟರೆ ಉಳಿದ ಜೀವನ ಯಥಾಪ್ರಕಾರ. ಅವರ ಸ್ನೇಹಿತರಲೊಬ್ಬಳಾದ ಆ್ಯಡಸ್ಮಿತ್ ಕಲ್ಕತ್ತೆಗೆ ಬಂದಿದ್ದಳು. ದತ್ ಕುಟುಂಬ ಅವಳನ್ನು ಬಾಗ್‌ಮರಿ ತೋಟದ ಮನೆಗೆ ಕರೆದೊಯ್ದರು. ತೋರುವಿನ ಒಬ್ಬ ಚಿಕ್ಕಮ್ಮ ಅವಳಿಗೆ 'ತನ್ನ ಹೆರಳಿನ ಕರಂಡ'ವನ್ನು ತೋರಿಸಿದರು. ಬಾಗ್‌ಮರಿ ತೋಟದ ಮನೆಯನ್ನು ನೋಡಿ ಮುಗ್ಧಳಾದ ಆ ಆಂಗ್ಲ ಗೆಳತಿಗೆ ಆಶ್ಚರ್ಯವೋ ಆಶ್ಚರ್ಯ. ಭೂಮಿಯ ಮೇಲೆ ಸ್ವರ್ಗದಂತಿರುವ ಇಂಥ ಮನೆಯಿರಲು ದತ್ ಕುಟುಂಬದವರೇಕೆ ಇಂಗ್ಲೆಂಡಿಗೆ ವಾಪಸಾಗಲು ಬಯಸುತ್ತಿದ್ದಾರೆ ಎಂದು ಆಕೆಗೆ ತಿಳಿಯಲಿಲ್ಲ.

ರಾಜಕುಮಾರನ ಭೇಟಿಗಾಗಿ ಭರ್ಜರಿಯ ಏರ್ಪಾಟಾಗುತ್ತಿತ್ತು. ಡಿಸೆಂಬರಿನ ಹೊತ್ತಿಗೆ ರಾಜ ಮಹಾರಾಜರೆಲ್ಲ ಕಲ್ಕತ್ತೆಗೆ ಬಂದಿಳಿದರು. ಕೋಟೆಗೂ ಸೈನಿಕ ವಸತಿಗೂ ಹೊಸದಾಗಿ ಬಣ್ಣ ಹಚ್ಚಿದರು. ದೊಡ್ಡ ದೊಡ್ಡ ಕಮಾನುಗಳನ್ನು ಕಟ್ಟಿದರು. ರಾಜಕುಮಾರನ ಭೇಟಿ ಕೇವಲ ಒಂದು ವಾರದ ಭೇಟಿಯಾದರೂ ಏರ್ಪಾಟುಮಾತ್ರ ಭಾರಿ. ಒಬ್ಬ ರಾಜ ತನಗಾಗಿ ಒಂದು ಮುತ್ತು ಮಾಣಿಕ್ಯದ ಉಡುಪನ್ನು ತರಲಾಜ್ಞೆಮಾಡಿದ್ದ. ಅದಕ್ಕಾಗಿ ಅವನು ಖರ್ಚುಮಾಡಿದ್ದು ಹದಿನೈದು ಲಕ್ಷ ರೂಪಾಯಿ! ರಾಜಕುಮಾರನಿಗಾಗಿ ಇನ್ನೊಂದು ಮೂವತ್ತು ಲಕ್ಷ ರೂಪಾಯಿ ಖರ್ಚು ಮಾಡಲು ಸಿದ್ಧನಾಗಿದ್ದ.

ಗೋವಿಂದಚಂದ್ರ ತೋರುವಿನ ಫ್ರೆಂಚ್ ಭಾಷಾಂತರಗಳನ್ನು ಕಲ್ಕತ್ತೆಯ ಪ್ರಕಾಶಕರೊಬ್ಬರಿಗೆ ತೋರಿಸಿದನು. ಆದರೆ ಕಲ್ಕತ್ತೆಯ ಪ್ರಕಾಶಕರಿಗೆ ಬಲು ಹೆದರಿಕೆ. ಹಸ್ತಪ್ರತಿ

ಪ್ರಕಾಶಕನಿಂದ ಪ್ರಕಾಶಕನಿಗೆ ಹೋಯಿತು. ತೋರುವಿನ ಮೊದಲ ಕೃತಿ ಬೆಳಕು ಕಾಣದೆಯೇ ಒಂದು ವರುಷ ಕಳೆಯಿತು.

ತೋರು ಸಂಸ್ಕೃತಾಭ್ಯಾಸಕ್ಕೆ ತನ್ನೆಲ್ಲ ಕಾಲವನ್ನೂ ಮೀಸಲಾಗಿಟ್ಟಳು. ಭಾಷೆಗಳನ್ನು ಕಲಿಯುವುದರಲ್ಲಿ ತನಗಿದ್ದ ಪ್ರತಿಭೆಯ ಮೂಲಕ ಸ್ವಲ್ಪ ಕಾಲದಲ್ಲೇ ಸಂಸ್ಕೃತವನ್ನು ಸುಲಲಿತವಾಗಿ ಓದಲು ಕಲಿತಳು. ಆದರೆ ಆಕೆಗಿದ್ದ ಕಾಲ ಹತ್ತು ತಿಂಗಳು ಮಾತ್ರ. ಆಕೆಯ ಆರೋಗ್ಯ ಬಹಳ ಬೇಗ ಕ್ಷೀಣಿಸತೊಡಗಿತು. ವೈದ್ಯರ ಸಲಹೆಯ ಮೇರೆಗೆ ತನ್ನ ಹೊಸ ಅಭ್ಯಾಸವನ್ನು ಆಕೆ ಸಪ್ಟೆಂಬರಿನ ಹೊತ್ತಿಗಾಗಲೇ ಕೈಬಿಡಬೇಕಾಯಿತು. ಸಂಸ್ಕೃತ ಬಹಳ ಕಠಿಣವಾದ ಭಾಷೆಯೆಂದೂ ಆದರೆ ಹೇಗಾದರೂ ಮಾಡಿ ಅದರಲ್ಲಿ ಪಾಂಡಿತ್ಯವನ್ನು ಸಂಪಾದಿಸಬೇಕೆಂದೂ ತೋರು ಬಯಸಿದಳು. ಆರೇಳು ವರ್ಷಗಳಿಗಿಂತ ಕಡಿಮೆ ಕಾಲದಲ್ಲಿ ಸಂಸ್ಕೃತವನ್ನು ಸಂಪೂರ್ಣವಾಗಿ ಕಲಿಯಲು ಕಷ್ಟವೆಂಬುದು ಆಕೆಗೆ ತಿಳಿದಿತ್ತು. ತೋರು ಸಂಸ್ಕೃತಾಭ್ಯಾಸವನ್ನು ಆರಂಭಿಸಿದಾಗ ಆ ಭಾಷೆಯನ್ನು ಕಲಿಯಲು ತನಗಿದ್ದ ಆಸೆ, ಆಸಕ್ತಿ, ತನ್ನ ಗುರುವಿಗೆ ಸಂತೋಷವನ್ನುಂಟು ಮಾಡಿದವೆಂದೂ ಆ ಆಸಕ್ತಿಯಿಂದ ತೋರು ಮುಂದೆ ಮಹತ್ಕಾರ್ಯಗಳನ್ನು ಮಾಡಬಹುದೆಂದೂ ಆ ಪಂಡಿತ ಮಹಾಶಯರು ಅಭಿಪ್ರಾಯಪಟ್ಟಿದ್ದರೆಂದೂ ತೋರು ಹೇಳಿದ್ದಾಳೆ. ದೀರ್ಘಾಯುಷಿಯಾಗಿದ್ದರೆ ತೋರು ಎಷ್ಟು ದೊಡ್ಡ ಸಂಸ್ಕೃತ ವಿದ್ವಾಂಸಳಾಗಬಲ್ಲವಳಾಗಿದ್ದಳೆಂಬುದು ಯಾರಿಗೆ ಗೊತ್ತು. 1876 ರ ಜುಲೈ ಹೊತ್ತಿಗೆ ತೋರು ಈ ಮಾತುಗಳನ್ನು ಬರೆದಳು: 'ನಾನು ಸಂಸ್ಕೃತ ವ್ಯಾಸಂಗವನ್ನು ಕೊನೆಗೊಳಿಸುವನೆಂದು ಕಾಣುತ್ತದೆ.' ವ್ಯಾಕರಣ ಕ್ಲಿಷ್ಟವಾಗಿತ್ತು. ಕಾಳಿದಾಸನ ಶಾಕುಂತಲವನ್ನು ಅಭ್ಯಾಸಮಾಡಬೇಕಾಗಿತ್ತು. ಆದರೆ ಅಷ್ಟರಲ್ಲೇ ಆಕೆಯ ವ್ಯಾಸಂಗ ಮುಕ್ತಾಯವಾಯಿತು.

೧೧. ಇಪ್ಪತ್ತು ವರುಷವಾದಾಗ

ರಾಜಕುಮಾರ ಭಾರತಕ್ಕೆ ಭೇಟಿಯಿತ್ತು ಹಿಂತಿರುಗಿ ಹೋದಾದ ಮೇಲೆ ಕಲ್ಕತ್ತ ಸ್ತಬ್ಧವಾಯಿತು. 'ರಾಜಕುಮಾರ ಕಳೆದ ಸೋಮವಾರ ಹಿಂತಿರುಗಿದ' ಎಂದು ತೋರು ಬರೆದಳು. 1876 ಜನವರಿ ಹದಿಮೂರರಂದು ತೋರು ಹೀಗೆ ಬರೆದಳು: 'ಆತನ ಸುಂದರ ಮುಖವನ್ನೂ ಮಿನುಗುವ ನೀಲ ನಯನಗಳನ್ನೂ ನಾನು ಚೆನ್ನಾಗಿಯೇ ನೋಡಿದೆ.' ಆತ ಬೆಳ್ಳಗಿದ್ದ. ಆದರೆ ಸ್ವಲ್ಪ ಕೂದಲುದುರಿತ್ತು. ಬೆಲ್ಗಾಚಿಯದ ಒಂದು ಮನರಂಜನೆ ಕಾರ್ಯಕ್ರಮದಲ್ಲಿ ತೋರು ಆತನನ್ನು ಇನ್ನೊಮ್ಮೆ ನೋಡಲು ಅವಕಾಶವಾಯಿತು. ಆದರೆ ಭಾರತೀಯರು ಆತನಿಗಾಗಿ ಮಾಡಿದ 'ಅತಿಮೆಚ್ಚು'ವ ಬಗ್ಗೆ ತೋರು ತೀವ್ರವಾಗಿ ಖಂಡಿಸಿದ್ದಾಳೆ. ಕಾಶ್ಮೀರ

ಮಹಾರಾಜರು ಕೊಟ್ಟ ಅಂಗಿ ಕಡೆಯ ಪಕ್ಷ ಮಸುಕನ್ನು ಲಕ್ಷ್ಯವಾದರೂ ಆಗುತ್ತದೆ. ಆತ ಕೊಟ್ಟ ಉಡುಗೊರೆಯೂ ಅಷ್ಟೆ. 101 ಹುಟ್ಟಿರದ ಕಾಲುಂಗುರಗಳು, ವಜ್ರಖಚಿತವಾದ ಚಿನ್ನದ ಹುಕ್ಕ, ಚಿನ್ನ ಹಾಗೂ ಬೆಳ್ಳಿಯ ಬಣ್ಣ ಮುತ್ತು ಜೊತೆಗೆ ಇನ್ನೂ ಹಲವಾರು ಅತ್ಯಂತ ಬೆಲೆಬಾಳುವ ಸಾಮಾನುಗಳನ್ನು ಉಡುಗೊರೆಯಾಗಿ ಕೊಟ್ಟ.

ಬಾಬು ಜಗದಾನಂದ ಮುಖರ್ಜಿ ರಾಜಕುಮಾರನನ್ನು ತನ್ನ ಮನೆಗೆ ಆಹ್ವಾನಿಸಿ ತನ್ನ ಕುಟುಂಬದ ಕೆಲವು ಮಹಿಳೆಯರಿಗೆ ಆತನ ಪರಿಚಯ ಮಾಡಿಕೊಟ್ಟಾಗಲಂತೂ ಬಹಳ ಕೋಲಾಹಲ. ಬಂಗಾಳಿ ಹೆಂಗಸರು ಆ ಕಾಲಕ್ಕೆ ಬಹುಪಾಲು ಪರದಾ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆದರೆ ಬಾಬು ಜಗದಾನಂದ ಈ ಹಿಂದೂ ಸಂಪ್ರದಾಯವನ್ನು ಮುರಿದಿದ್ದ. ಈ ಘಟನೆ ಹಿಂದೂ ಸಮಾಜಕ್ಕಾದ ಅವಮಾನ ಎಂದರು ಅವನ ಬಾಂಧವರು. ಇತರ ಬಂಗಾಳಿಗಳು. ರಾಜಕುಮಾರ ಬೇರಾರ ಮನೆಗೂ ಹೋಗಿರಲಿಲ್ಲ. ಆದರೆ ಜಗದಾನಂದ ಬಾಬು ತನ್ನ ಮನೆಯ ಹೆಂಗಸರನ್ನು ಪರಿಚಯ ಮಾಡಿಕೊಡುವುದಾಗಿ ಹೇಳಿದ್ದರಿಂದ ರಾಜಕುಮಾರ ಅಲ್ಲಿಗೆ ಮಾತ್ರ ಹೋದ. ಇದು ಅಕ್ಷಮ್ಯ ಅಪರಾಧ ಎಂದಿತು ಒಂದು ಪತ್ರಿಕೆ. ಮುಂದೆ ಈ ಘಟನೆಯ ಆಧಾರದ ಮೇಲೆ ಒಂದು ನಾಟಕವನ್ನು ಪ್ರದರ್ಶಿಸಲಾಯಿತು. ಆದರೆ ಲಾರ್ಡ್ ನಾರ್ತ್‌ಬ್ರೂಕ್ ಬ್ರಿಟಿಷ್ ಅಧಿಕಾರಿಯ ವಿರುದ್ಧ ಹಗೆತನ, ದ್ವೇಷ ಬೆಳೆಸುವ ಯಾವ ನಾಟಕವೂ ಪ್ರದರ್ಶಿತವಾಗಬಾರದೆಂದು ಆಜ್ಞೆ ಮಾಡಿದ.

ಅಂತೂ ಕಡೆಗೊಮ್ಮೆ ತೋರುವಿನ ಪುಸ್ತಕ ಪ್ರಕಟಣೆಗೆ ಸಿದ್ಧವಾಯಿತು. ತೋರು ಅದರ ಕರಡನ್ನು ತಿದ್ದುವುದರಲ್ಲಿ ಮಗ್ನಳಾದಳು. ಅಚ್ಚಿನ ದೋಷಗಳು ಅವಳಿಗೆ ಸ್ವಾರಸ್ಯವನ್ನುಂಟುಮಾಡಿದವು.

'ಆನರ್ಸ್ ಥ್ರೋನ್' (ಗೌರವದ ಸಿಂಹಾಸನ) ಎಂದಿದ್ದದ್ದು 'ಹಾರ್ನ್ಸ್ ಥ್ರೋನ್' (ಮುಳ್ಳಿನ ಸಿಂಹಾಸನ) ಎಂದಾಗಿತ್ತು.

ಫ್ರೆಂಚಿನಿಂದ ಹೊತ್ತಿಗೆ ಗೊಂಚಲು ಮುದ್ರಣದ ಘಟ್ಟಕ್ಕೆ ಬಂದಿತ್ತು.

ಅಷ್ಟರಲ್ಲಿ ಭಾರತದ ಸ್ತ್ರೀಯರ ಬಗ್ಗೆ ಫ್ರೆಂಚ್ ಮಹಿಳೆಯೊಬ್ಬಳು ಬರೆದ ಕೃತಿ ತೋರುವಿನ ಗಮನ ಸೆಳೆಯಿತು. ತೋರು ಆ ಕೃತಿಯನ್ನು ಅನುವಾದಿಸಲು ಅನುಮತಿ ಬೇಡಿದಳು. ಇದಾದ ನಂತರ ಈ ಕೃತಿಯ ಕರ್ತೃ ಕ್ಲಾರಿಸ್ ಬಾದರಳ ಹಾಗೂ ತೋರುವಿನ ನಡುವೆ ಗಾಢವಾದ ಮೈತ್ರಿ ಬೆಳೆಯಿತು. ಭಾರತೀಯ ಮಹಿಳೆಯರ ಬಗ್ಗೆ ತನಗಿದ್ದ ಮೆಚ್ಚುಗೆಯನ್ನು ತೋರು ಬಾದರ್‌ಗೆ ಬರೆದ ಪತ್ರವೊಂದರಲ್ಲಿ ಹೀಗೆ ವ್ಯಕ್ತಪಡಿಸಿದ್ದಾಳೆ. 'ನಮ್ಮ ಪೌರಾಣಿಕ ಕಥೆಗಳು ಎಷ್ಟು ಉದಾತ್ತವಾಗಿವೆ. ಎಷ್ಟು ಮನೋಜ್ಞವಾಗಿವೆ, ಹಾಗೂ ಎಷ್ಟು ಕರುಣಾಜನಕವಾಗಿವೆ. ಭಾರತೀಯ ಪತ್ನಿಗೆ ತನ್ನ ಗಂಡನಲ್ಲಿರುವ ಭಕ್ತಿ. ಪತಿ ಏನೇ ಇರಲಿ, ಹೇಗೇ ಇರಲಿ ಅವನಲ್ಲಿ ಅವನ ಪತ್ನಿಗಿರುವ ವಿಧೇಯತೆ. ಆಕೆ ಆತನನ್ನು ತನ್ನ ದೇವರಾಗಿ, ತನ್ನ ಜೀವದ ಜೀವವಾಗಿ ಕಾಣುವ ರೀತಿ' ಅಸಾಧಾರಣ.

ಮಾರ್ಚ್ ನಾಲ್ಕರಂದು ತೋರುವಿನ ಹುಟ್ಟುಹಬ್ಬ. ಇನ್ನೂ ಇಪ್ಪತ್ತರ ಹೊಸ್ತಿಲಿನಲ್ಲಿದ್ದರೂ ತೋರು ಕ್ಲಾರಿಸಳಿಗೆ ಹೀಗೆ ಬರೆದಳು: "ನನಗೆ ವಯಸ್ಸಾಗುತ್ತಿದೆ" ಫ್ರೆಂಚ್ ಮಹಿಳೆಯೊಬ್ಬಳು ತೋರುವಿಗೆ ಮದುವೆಯಾಗಿದೆಯೆ ಎಂದೊಮ್ಮೆ ಕೇಳಿದಳಂತೆ.

ಇಲ್ಲವೆಂದು ಹೇಳಿ ತೋರು ಅವರ ಬಗ್ಗೆ ಹೀಗೆ ಬರೆದಿದ್ದಾಳೆ. "ಒಂದು
ನಿನಗೆ ತಿಳಿದಿರುವಂತೆ, ಮದುವೆಗೆ ಬಹಳ ಪ್ರಾಮುಖ್ಯತೆ. ನಮ್ಮ ದೇಶದಲ್ಲಿ
ವರುಷದ ಅವಿವಾಹಿತ ಹುಡುಗಿ ಇಲ್ಲವೆ ಇಲ್ಲ." ಹಿಂದೂ ಹುಡುಗಿಯರಿ
ನಾಲ್ಕು ವರುಷದ ಹೊತ್ತಿಗಾಗಲೆ ಮಗಳು ಅಜ್ಜಿಯಾಗಿರುತ್ತಿದ್ದಳು.
ಮದುವೆಯಾಗುತ್ತದೆ. ಕೆಲವು ಸಲವಂತೂ ನಾನೂ ಬಹಳ ದುಃಖಿತಳಾ
ತ್ತದೆ.'

ಅವಳ ಮರಣ ಹುಟ್ಟಿದ ದಿನ ಬಾದರಳ ಪುಸ್ತಕ ಫ್ರಾನ್ಸಿನಿಂದ ಬಂದಿತು. '
ಸಂಚಿಕೆ ಮಾರ್ಚ್ 24 ರಂದು ಪ್ರಕಟವಾಯಿತು. ಮೇರಿಗೆ ಒಂದು ಪ್ರತಿ
'ಪತ್ರಿಕೆಗಳು ನನ್ನ ಪುಸ್ತಕದ ಬಗ್ಗೆ ಏನು ಹೇಳುತ್ತವೋ ತಿಳಿಯದು. ಏನು ಹೇ
ಕೆಲವು ಪರವಾಗಿ, ಕೆಲವು ವಿರೋಧವಾಗಿ ಹೇಳುತ್ತವೆ. ನಾನಂತೂ ಸ್ವ
ಅದೆಲ್ಲವನ್ನೂ ಸ್ವೀಕರಿಸಲು ಆಗಲೆ ಸಿದ್ಧತೆ ಮಾಡಿಕೊಂಡಿದ್ದೇನೆ.'

ಕೆಲವೊಮ್ಮೆ ತೋರು ತನ್ನ ಕುಲದವರನ್ನು ಬಹಳ ಕಟುವಾಗಿಯೇ ಟೀಕಿ
ತನ್ನ ಅಪ್ಪಯ್ಯ ಕ್ರೈಸ್ತನಾಗಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸಿದಾಗ ತೋ
ಹೇಳಿದ್ದಾಳೆ: "ಅವರೆ ಕ್ರೈಸ್ತರು ಎಂದು ಹೇಳಿಕೊಳ್ಳುವ ಏಷ್ಯಾ ಜನರಿಗಿಂತ
ಉತ್ತಮ." ಕಲ್ಕತ್ತೆಯ ಹಾಗೂ ಭಾರತದ ಕ್ರೈಸ್ತರ ಬಗ್ಗೆ ತೋರು ಹೇಳಿರು
ಗಳು ಸ್ವಾರಸ್ಯಪೂರ್ಣವಾಗಿವೆ. "ಕಲ್ಕತ್ತ ಒಂದು ಕಸದ ತೊಟ್ಟಿ!
ಅಲ್ಲದೆ (ಇವರಲ್ಲೂ ಅನೇಕ ಶ್ರೇಷ್ಠರಿದ್ದರು) ಬಂಗಾಳಿ ಕ್ರೈಸ್ತರಲ್ಲೂ ಕೂಡ
ನಡೆಸಿದೆ. ತಂದೆ ಮೊದಲನ್ನು ಉಗ್ರವಾದಮಾಡುವ ಬಿಷಪರೆಂದರೆ ಕ್ರೈ
ಬಗ್ಗೆ ಹಿಂದೂಗಳಿಗೆ ತಪ್ಪು ಅಭಿಪ್ರಾಯವಿದೆ. ಕ್ರೈಸ್ತ ಧರ್ಮ ಒಂದು ಮುಸು
ಆ ಮುಸುಕು ಹೊದೆದು ಕೆಲವರು ನಾನಾ ಅಪರಾಧಗಳನ್ನು ಮಾಡು
ಹಿಂದೂಗಳು ನಂಬಿದ್ದಾರೆ. ಇದು ನಿಜ. ಬಂಗಾಳಿ ಕ್ರೈಸ್ತ ಸಮಾ
ನೀತಿಗಳು (ಕೆಲವರನ್ನು ಬಿಟ್ಟರೆ) ಎಂತಹ ಸಂಕೋಚವ ಪಡೆಯದೆಯೂ
ಮಾಡುತ್ತವೆ. ಅತ್ಯಂತ ಅನಾಚಾರಿಗಳನ್ನೂ ಸಹಿಸಿಕೊಳ್ಳುತ್ತವೆ."

ಪತ್ರಿಕೆಗಳನ್ನು ಶ್ರದ್ಧೆಯಿಂದ ಓದಿ ತೋರು ಮೇರಿಗೆ ಸ್ವಾರಸ್ಯಪೂರ್ಣ
ಘಟನೆಗಳನ್ನು ವರದಿ ಮಾಡಿದಳು. ಒಬ್ಬ ಸೈನಿಕ ಒಮ್ಮೆ ನಡೆದು
ದಟ್ಟು ಹೊಡೆದು ಕೊಂದ. ಹಳ್ಳಿಗರು ಅವನನ್ನು ಮುತ್ತಿದರು. ಅ
ಸರ್ಕಾರದ ದೃಷ್ಟಿಯಲ್ಲಿ ಬ್ರಿಟಿಷ್ ಸೈನಿಕನೊಬ್ಬನ ಜೀವ ಅಮೂಲ್ಯವಾದ
ನನ್ನು ಬಿಟ್ಟುಬಿಡಲಾಯಿತು.

ಕೆಲವು ಸೈನಿಕರು ಒಂದಿಷ್ಟು ಜನ ಬಂಗಾಳಿಗಳನ್ನು ಕೊಂದುಹಾಕಿದರು
ಜನರಿಗೆ ಗಾಯಗಳಾಗಿದ್ದವು. ಇದರ ಜೊತೆಗೆ ಇನ್ನೂ ಹಲವಾರು
ಅನ್ಯಾಯವಾಗಿತ್ತು. ಬ್ರಿಟಿಷರ ವಿರುದ್ಧ ಭಾವನೆಗಳು ಉಗ್ರ ರೀತಿ
ವಾತಾವರಣದಲ್ಲಿ ಬೆಳೆದ ತೋರುವಿನ ಮನಸ್ಸನ್ನು ಕಲಕಿದ
ಮೇಲೇರಿ ಬಂದ ನಾಯಕರೊಂದಿಗೆ ತನ್ನನ್ನು ಕಾಪಾಡಿಕೊಂಡಿದ್ದಳಾಗಿ
ನಿಗೆ ಮಹಾರಾಜರುಗಳ ಕಥಾ ಸಂಚಯವಾಯಿತು. ಕಾರಣ ನಾವು ಅನ್ಯ

ಪತ್ರಿಕೆಗಳು ಇದರ ವಿರುದ್ಧ ಹೋರಾಡುತ್ತಿವೆ. ನ್ಯಾಯವನ್ನು ಈ ರೀತಿ ತಿರುವು ಮುರುವು ಮಾಡಿದ್ದಕ್ಕಾಗಿ ಸೆಷನ್ಸ್ ನ್ಯಾಯಾಧೀಶರನ್ನೂ ಮ್ಯಾಜಿಸ್ಟ್ರೇಟರನ್ನೂ ಅಧಿಕಾರದಿಂದ ತೆಗೆದುಹಾಕಬೇಕು. ಹುಡುಗನೊಬ್ಬನಿಗೆ ಮ್ಯಾಜಿಸ್ಟ್ರೇಟನೇನಾದರೂ ಇಂಥ ಶಿಕ್ಷೆ ವಿಧಿಸಿದ್ದರೆ ಇಂಗ್ಲೆಂಡಿನಲ್ಲಿ ಎಷ್ಟು ಗಲಾಟೆಯಾಗುತ್ತಿತ್ತು, ಊಹಿಸಬಲ್ಲೆಯಲ್ಲವೆ? ಆದರೆ ಲಾರ್ಡ್ ಲಿಟ್ಟನ್ ತನ್ನ ಕುದುರೆಯಾಳನ್ನು ಕೊಂದ ಆಂಗ್ಲನಿಗೆ ಶಿಕ್ಷೆ ವಿಧಿಸುವಾಗ ಮಾತ್ರ ಬಹಳ ಉದಾರಿಯಾದ. ಆಂಗ್ಲ ನ್ಯಾಯಾಧೀಶನ ದೃಷ್ಟಿಯಲ್ಲಿ ಭಾರತೀಯನೊಬ್ಬನ ಜೀವನ ಎಷ್ಟು ಅಲ್ಪವೆಂದು ನೋಡಿದೆಯಾ? ಆಂಗ್ಲ ಅಧಿಕಾರಿಗೆ ಏಟು ಹೊಡೆಯುವುದಕ್ಕೂ ಲಾರ್ಡ್ ಲಿಟ್ಟನ್ ಒಪ್ಪಲಿಲ್ಲ. ಇಷ್ಟಾದರೂ ತೋರು ಲಾರ್ಡ್ ಲಿಟ್ಟನ್‌ನನ್ನು ಗೌರವದಿಂದ ಕಾಣುತ್ತಿದ್ದಳಲ್ಲದೆ ತನ್ನ ಫ್ರೆಂಚ್ ಕಾದಂಬರಿಯನ್ನು ಅವನಿಗೆ ಅರ್ಪಿಸಿದಳು.

ತೋರು ತನ್ನ ಪತ್ರಗಳಲ್ಲಿ 'ಭಾರತೀಯ' ಎಂದು ಹೇಳುವ ಕಡೆ 'ನೇಟಿವ್' (ದೇಶೀಯ) ಎಂಬ ಪದವನ್ನು ಉಪಯೋಗಿಸುತ್ತಿದ್ದಳು. ಸಾಮಾನ್ಯವಾಗಿ ತುಚ್ಛ ಭಾವನೆಯಿಂದಲೇ ಉಪಯೋಗಿಸಲ್ಪಡುತ್ತಿದ್ದ ಈ 'ನೇಟಿವ್' ಪದವನ್ನು ಬಳಸಿ ತೋರು ತನ್ನ ನಾಡಿನವರಿಗೆ ಯಾವ ರೀತಿಯ ಅವಮಾನವನ್ನೂ ಮಾಡುವ ಉದ್ದೇಶವನ್ನು ಹೊಂದಿರಲಿಲ್ಲ. ಆಂಗ್ಲ ಕ್ರೈಸ್ತರಿಂದ ಹಾಗೂ ಆ್ಯಂಗ್ಲೋ ಇಂಡಿಯನ್ನರಿಂದ ತಮ್ಮನ್ನು ಬೇರ್ಪಡಿಸಿಕೊಳ್ಳಲು ಈ ಪದವನ್ನು ಬಳಸುತ್ತಿದ್ದಿರಬೇಕು. ಆದರೆ ತೋರುವಿನ ಈ ಪದ ಪ್ರಯೋಗ ಅಷ್ಟು ಸೂಕ್ತವಾಗಿರಲಿಲ್ಲ. ಬಣ್ಣದ ಜನಾಂಗವನ್ನು ಬಿಳಿಯರಿಂದ ಬೇರ್ಪಡಿಸಲು ಆಂಗ್ಲರು ಬಳಸುತ್ತಿದ್ದ ಈ ಪದವನ್ನು ಭಾರತೀಯರು ಒಪ್ಪಲಿಲ್ಲ. ಬರಿ 'ಬಣ್ಣ' ದವರೆಂದಲ್ಲದೆ ಆಂಗ್ಲರು ಮೊದಲಿಗೆ ದೇಶೀಯರನ್ನು 'ನಿಗ್ಗರ್ಸ್' (ಕರಿಯರು) ಎಂದೂ ಹೇಳುತ್ತಿದ್ದುದುಂಟು. ಮೇರಿ ಮಾರ್ಟಿನ್ ಈ ಪದದ ಬಳಕೆಯ ಅರ್ಥವನ್ನು ತೋರುವಿಗೆ ಸೂಚಿಸಿ ಹೇಳಿದಳು. ತನ್ನ ತಪ್ಪನ್ನು ತಿದ್ದಿದ್ದಕ್ಕಾಗಿ ತೋರು ಮಾರ್ಟಿನಳನ್ನು ವಂದಿಸಿ ಮುಂದೆ ಪದಗಳ ಉಪಯೋಗದಲ್ಲಿ ಎಚ್ಚರಿಕೆಯಿಂದಿರುವುದಾಗಿ ಹೇಳಿದಳು.

ಬ್ರಿಟಿಷರು ಬಂಗಾಳಿಗಳನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ತೋರು ಆಸಕ್ತಿಯಿಂದ ಗಮನಿಸುತ್ತಲೇ ಇದ್ದಳು. ರಾಜಕುಮಾರನಿಗಾಗಿ ಏರ್ಪಡಿಸಿದ್ದ ಸಾರ್ವಜನಿಕ ಸಮಾರಂಭವೊಂದರಲ್ಲಿ ಒಬ್ಬ ಆಂಗ್ಲ ಬಂಗಾಳಿಯೊಬ್ಬನನ್ನು ವೇದಿಕೆಯಿಂದ ಹೊರತಳ್ಳಿದ್ದ. ರಾಜಕುಮಾರ ಕೂಡಲೆ ತನ್ನ ಆಪ್ತ ಪರಿವಾರದವನೊಬ್ಬನನ್ನು ಕಳಿಸಿ ಆ ಆಂಗ್ಲ ಅಷ್ಟು ಒರಟಾಗಿ ನಡೆದುಕೊಳ್ಳದಂತೆ ತಡೆದಿದ್ದ.

ಭಾರತೀಯ ಮಹಿಳೆಯರ ಸ್ಥಾನಮಾನದ ಬಗ್ಗೆ ತೋರುವಿಗೆ ಆಸಕ್ತಿ ಇದ್ದಿತಾದರೂ ಆ ಆಸಕ್ತಿ ಅಂತಹ ಗಹನವಾಗಿರಲಿಲ್ಲ. ಬರಹ ಅಧ್ಯಯನಗಳಲ್ಲಿ ಮುಳುಗಿದ್ದ ಅವಳಿಗೆ ಅವಳ ಅಲ್ಪ ಜೀವಿತಕಾಲದಲ್ಲಿ ಸಮಾಜ ಸೇವೆಗಾಗಲಿ, ಸಮಾಜ ಸುಧಾರಣೆಗಾಗಲಿ ಕಾಲಾವಕಾಶವಿರಲಿಲ್ಲ. ಆ ಕಾಲದ ಪ್ರಸಿದ್ಧ ಬಂಗಾಳಿಗಳಲ್ಲಿ ಒಬ್ಬನಾದ ಆನಂದ ಮೋಹನ್ ಬೋಸನನ್ನು ತೋರು ಆಗಾಗ ಕೇಂಬ್ರಿಜ್‌ನಲ್ಲಿ ಸಂಧಿಸಿದ್ದಳು. ಯೂರೋಪಿಗೆ ಮರಳಿ ಭೇಟಿಕೊಡುವ ಆಸೆಯನ್ನು ದತ್ ಕುಟುಂಬ ಇನ್ನೂ ಹೊಂದಿದ್ದ ಕಾಲದಲ್ಲಿ ಈತ

ಬಿಟ್ಟು ಅವರನ್ನು ಕಾಣಲು ಹೋದ. ಇದನ್ನು ಕುರಿತು ತೋರು ಹೀಗೆ ಬರೆದಿದ್ದಾ
'ಮನುಷ್ಯ ಮುಂದುವರಿಯುವಾಗ ಈತ ನಮ್ಮನ್ನು ಹಾಗೆ ಭೇಟಿಯಾದಂತೆ ನನ
ನನ್ನನ್ನು ಕೇಳಿದರು. ಇಲ್ಲಿರುವ ಮುಂದುವರಿದವರು ಸಾಮಾನ್ಯವಾಗಿ ಸಂಪ್ರದಾಯ ಬಿಡ
ಮನೆತನಕ್ಕೆ ಸೇರಿದವರಲ್ಲ. ಅವರು ಬ್ರಹ್ಮ ಸಮಾಜಕ್ಕೆ ಇಲ್ಲವೆ ಕ್ರೈಸ್ತ ಮತಕ್ಕೆ ಸೇ
ಧರ್ಮಕ್ಕೆ ಸೇರಿದವರು. ನಾವು ಬರುವ ಯುರೋಪಿನ ಹಾಗೆ ಮನೆಗೆ ಹೋಗುವುದಿ
ದನ್ನು ಕೇಳಿ ಅವರಿಗೆ ಬೇಸರವಾಯಿತು. ಏಕೆಂದರೆ ನಮ್ಮ ಹಾಡುಗಾರಿಕೆ ಮಹಿಳೆಯ
ವಿದ್ಯಾಭ್ಯಾಸದಲ್ಲಿ ನಮ್ಮಂಥ ಬಹಳ ಉಪಯೋಗವಾಗುತ್ತದೆ ಎಂದುಕೊಂಡಿದ್ದಾರಂತೆ ಅ

ಆಗ ಬಂಗಾಲದವರು ಅನುಭವಿಸುತ್ತಿದ್ದ ಸ್ವಾತಂತ್ರ್ಯ, ತೋರುವಿಗೂ ಇದು ಸಂ
ದಾಯದ ಸಮಾಜದ ಬಿಗಿಮುಷ್ಟಿಯಿಂದ ತಾನು ರಕ್ಷಿತಳಾದ್ದರಿಂದ ತೋರು ಸಾಮಾ
ವಾಗಿ ಮಹಿಳೆಯರು ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ಹೆಚ್ಚು ಯೋಚಿಸದೆ ಇರ
ಸಾಕು. ಯುರೋಪಿನಲ್ಲಿ ತಾನು ಇದ್ದ ಹೆಚ್ಚು ಸ್ವತಂತ್ರಳಾಗಿ ಇರುವುದಾಗಿ
ಎಂಬುದು ವಿಶಿಷ್ಟ ಅವಳನ್ನು ಕಾಡುತ್ತಿತ್ತು. ಆಗಿನ ಕಾಲದಲ್ಲಿ 'ಕ್ಲಬ್'ಗಳು ಪ್ರಾ
ರಿಗೆ ಮಾತ್ರ ಮೀಸಲಾಗಿದ್ದು, ಅವುಗಳಲ್ಲಿ ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಮಹಿ
ಯರು ಸಾಮಾನ್ಯವಾಗಿ ಮನೆಗಳಲ್ಲೇ ಇದ್ದು ಬಿಡುತ್ತಿದ್ದರು. ಹೀಗಾಗಿ ತೋರು ಬಂಗಾ
ಗಳ ಜೊತೆ ಹೆಚ್ಚಾಗಿ ಸೇರಲು ಸಾಧ್ಯವಾಗಲಿಲ್ಲ.

'ಅವಳ ಕೊಠಡಿಯಲ್ಲಿ ಕುಳಿತುಕೊಳ್ಳುತ್ತಿದ್ದು, ಅವಳನ್ನು ಕಾಣಲು ಬರುತ್ತಿಂದಿ
ಅಷ್ಟು ತುಂಬ ಹಾಡುಗಾರರಾಗಿರುತ್ತಾರೆ. ಅಷ್ಟರಲ್ಲಿ ನಾನು ಹೇಳಿದ್ದೇನೆ. ನನ್ನ
ಬೇಕಾದರೆ ಗಾಯನ ಪೆಟ್ಟಿಗೆಯಲ್ಲಿ ಇಟ್ಟು ಬಿಡಿ ಎಂದು. ಅಷ್ಟು ತಿಳಿದುಕೊಂಡಿರುವುದು
ನಾನು ಹಾಡುವುದಿಲ್ಲ. ಆದರೆ ನಾನು ಹಾಡುತ್ತೇನೆ ಅಷ್ಟೇ ಹೇಗೆ ಬೇಡವೆ!' ತೋ
ರು ತಂದೆ ಅವಳಿಗೆ ವಿಕ್ಟರ್ ಹ್ಯೂಗೋನ ಕಾದಂಬರಿಗಳನ್ನು ತಂದುಕೊಟ್ಟಿದ್ದರು. ತೋ
ಹೆಚ್ಚು ಹೆಚ್ಚಾಗಿ ಫ್ರೆಂಚ್ ಕವನಗಳನ್ನು ಅನುವಾದ ಮಾಡುತ್ತಿದ್ದಳು. 'ಗೊಂಚಲು
ಸಂಕಲನಕ್ಕೆ ಬಹಳ ಬೇಡಿಕೆಯಿತ್ತು. ಈ ಸಂಕಲನ ಎರಡನೆ ಮುದ್ರಣ ಕಾಣುವುದ
ಅನುಮತಿ ಅವಳಿಗಿತ್ತು. 'ಕಲ್ಕತ್ತ ರೆವ್ಯೂ' ಅವಳ ಕೆಲವು ಕವನಗಳನ್ನು ಪ್ರಕಟ
ಸ್ವೀಕರಿಸಿತ್ತು. ಅವಳ ತಂದೆಗೆ ಬಹಳ ಸಂತೋಷ. ಆದರೂ ಅಷ್ಟೆ. ಏಕೆ
ಭಾರತದಲ್ಲಿ 'ಕಲ್ಕತ್ತ ರೆವ್ಯೂ' ಪತ್ರಿಕೆ ಅತ್ಯುತ್ತಮ ಪತ್ರಿಕೆಯಾಗಿತ್ತು.

ಹೆಚ್ಚು ಹೆಚ್ಚಾಗಿ ಕವನಗಳನ್ನು ಕಳುಹಿಸುವಂತೆ ಬೆಂಗಾಲ್ ಮ್ಯಾಗಜೈನ್
ತೋರುವಿಗೆ ಕರೆ ಬಂದಿತ್ತು. ಬೆಂಗಾಲ್ ಮ್ಯಾಗಜೈನಿಗೆ ಬರೆದ ಲೇಖನವೊಂದ
ಗೋವಿಂದ ಚಂದ್ರ ಸೌಲರಿಯ ಕವನಗಳ ಭಾಷಾಂತರಗಳು 'ಗೊಂಚಲು' ಸಂ
ದಲ್ಲಿಲ್ಲದೆ ಬೇರೆಲ್ಲೂ ಇಲ್ಲವೆಂದು ಬರೆದಳು.

1876 ಡಿಸೆಂಬರಿನಲ್ಲಿ ತೋರುವಿಗೆ ಅನಾರೋಗ್ಯ ಕಾಣಿಸಿಕೊಂಡಿತು. ಆಕೆಯ
ಪರೀಕ್ಷಿಸುತ್ತಿದ್ದ ವೈದ್ಯರು ಇಲ್ಲದಿದ್ದಾಗ ಮೆಡಿಕಲ್ ಕಾಲೇಜಿನ ಡಾ॥ ಸ್ಮಿತ್ ತೋರು
ಪರೀಕ್ಷಿಸುತ್ತಿದ್ದರು. ರಕ್ತವಾಂತಿ ಔಷಧಿಗಳಿಂದ ನಿಂತಿರಲಿಲ್ಲ. 'ಯಾವು
ಔಷಧಿಯಿಂದಲೂ ಪರಿಣಾಮವಾಗಲಿಲ್ಲ. ಹೊಸ ಮದ್ದು ಕೊಟ್ಟಾಯಿತು. ತೋ
ಮೇರಿಗೆ ಹೀಗೆ ಬರೆದಿದ್ದಾಳೆ: 'ಡಾ॥ ಸ್ಮಿತ್ ಮೊದಲ ಬಾರಿಗೆ ನನ್ನನ್ನು ನೋಡ

ಬಂದಾಗ ಬಂದು ವೈದ್ಯರಂತೆಯೇ ಪರೀಕ್ಷಿಸಿ ರೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಕೇಳಿದರು. ಇದ್ದಕ್ಕಿದ್ದಂತೆ ಮೇಜಿನ ಮೇಲಿದ್ದ ಕಿತ್ತಳೆ ಬಣ್ಣದ ಹೊದಿಕೆಯ ಪುಸ್ತಕದ ಮೇಲೆ ಅವರ ದೃಷ್ಟಿ ಬಿದ್ದಿತು. ಅವರ ಮುಖದಲ್ಲಿ ಎಲ್ಲಿಲ್ಲದ ಕಾಂತಿ ಮೂಡಿತು. 'ಈ ಪುಸ್ತಕವನ್ನು ಬರೆದವರು ನೀವೇನೆ?' ಎಂದರು. ನನ್ನ ಆರೋಗ್ಯದ ಬಗ್ಗೆ ಅವರ ಆಸಕ್ತಿ ದ್ವಿಗುಣವಾದದ್ದನ್ನು ನೀನು ನೋಡಬೇಕಾಗಿತ್ತು. ಈ ಹುಡುಗಿ ಇದರ ಕರ್ತೃ! ಅವರಿಗೆ ಆಶ್ಚರ್ಯವಾಗಿತ್ತು. ಅಷ್ಟೇ ಆಸಕ್ತಿಯೂ ಕುದುರಿತ್ತು. ಸಂತೋಷವೂ ಆಗಿತ್ತು. ನೋಡಿದೆಯಾ. ಅಂತೂ 'ಗೊಂಚಲು' ಇಷ್ಟು ಕೆಲಸವನ್ನಾದರೂ ಮಾಡಿದೆಯಲ್ಲ!'

೧೨. ಮುಕ್ತಾಯ

ತೋರುವಿನ ಜೀವನದ ಅತ್ಯಂತ ಸುಂದರ ಘಟನಾವಳಿಗಳಲ್ಲಿ ಕ್ಲಾರಿಸ್ ಬಾದರ್ ಹಾಗೂ ತೋರುವಿನ ಗೆಳೆತನವೂ ಒಂದು. ಬಾದರಳ ಪುಸ್ತಕವನ್ನು ಭಾಷಾಂತರಿಸ ಬೇಕೆಂದು ಬಯಸಿ ಅನುಮತಿಗಾಗಿ 1877 ಫೆಬ್ರವರಿ ಎರಡರಂದು ತೋರು ಪತ್ರ ಬರೆದಳು. ಜೊತೆಗೆ 'ಗೊಂಚಲು' ಸಂಕಲನದ ಒಂದು ಪ್ರತಿಯನ್ನೂ ಅದರ ಜೊತೆಗೆ ಕಳುಹಿಸಿದಳು. ಈ ಪತ್ರಕ್ಕೆ ಉತ್ತರವಾಗಿ ಬಾದರ್ ಹೀಗೆ ಬರೆದಿದ್ದಾಳೆ: 'ಗಂಗಾನದಿಯ ಬಯಲಿನ ಪ್ರಾಚೀನ ಆರ್ಯರಿಗೆ ಅರ್ಪಿತವಾಗಿರುವ ಈ ಕೃತಿಯನ್ನು ಅನುವಾದ ಮಾಡಲು ಬಯಸಿರುವಳು ನನ್ನ ಪ್ರಿಯ ಹಿಂದೂ ಮಾತೆಯರ ವಂಶಜಳೆ?' ಭಾಷಾಂತರಕ್ಕೆ ಕೂಡಲೆ ಒಪ್ಪಿಗೆ ಸಿಕ್ಕಿತು. ಮಹಿಳೆಯರನ್ನು ಕುರಿತು ಕ್ಲಾರಿಸ್ ನಾಲ್ಕು ಸಂಪುಟಗಳನ್ನು ಬರೆದಿದ್ದಳು — ಭಾರತೀಯ. ಹೀಬ್ರೂ. ಗ್ರೀಕ್. ಹಾಗೂ ರೋಮನ್ ಮಹಿಳೆಯರನ್ನು ಕುರಿತ ಕೃತಿಗಳು. ಈ ಎಲ್ಲ ಮಹಿಳಾ ಮಣಿಗಳಲ್ಲಿ ಬೈಬಲಿನ ಮಹಿಳೆಯರನ್ನು ಬಿಟ್ಟರೆ ಪ್ರಾಚೀನ ಭಾರತದ ಮಹಿಳೆಯರಲ್ಲಿ ಕ್ಲಾರಿಸ್ ಪಾವಿತ್ರ್ಯ, ಭಕ್ತಿಗಳ ಪರಾಕಾಷ್ಠತೆಯನ್ನು ಕಂಡಿದ್ದಳು.

ತೋರು ಕ್ಲಾರಿಸಳಿಗೆ ಮರುಉತ್ತರ ಬರೆಯುತ್ತ 'ನಮ್ಮ ಮಹಾಕಾವ್ಯಗಳ ನಾಯಕಿಯರು ಎಲ್ಲ ರೀತಿಯ ಪ್ರೇಮ ಗೌರವಗಳಿಗೆ ಅರ್ಹರಾಗಿದ್ದಾರೆ. ಸೀತೆಗಿಂತ ಪ್ರೇಮ ಯೋಗ್ಯ ಹೃದಯಸ್ಪರ್ಶಿ ನಾಯಕಿ ಇದ್ದಾಳೆಯೆ?' ಕ್ಲಾರಿಸ್‌ಳನ್ನು ನೋಡಬೇಕೆಂಬ ತೋರುವಿನ ಹಂಬಲ ಈಡೇರಲಿಲ್ಲ. 1877 ಏಪ್ರಿಲ್ ಹದಿಮೂರರಂದು ತನ್ನ ಫ್ರೆಂಚ್ ಗೆಳತಿಗೆ ಪತ್ರ ಬರೆದು ತಾನು ಬಹಳ ಅನಾರೋಗ್ಯದಿಂದ ಇರುವುದಾಗಿ ತಿಳಿಸಿದಳು. 'ನಿನ್ನ ಭಾವಚಿತ್ರವಿರುವ [illegible] ಕಾಗದ ಸಾಕು. ನಮ್ಮ ಯೋಜನೆಯೆಲ್ಲ ಬದಲಾಗಿದೆ. ಏಪ್ರಿಲ್ ತಿಂಗಳಲ್ಲಿ ನಾವು ಯೂರೋಪಿಗೆ ಹೋಗಲು ಸಾಧ್ಯವಿಲ್ಲ. ಮಾನವ ನೊಂದು ಬಗೆದರೆ ದೈವವೊಂದು ಬಗೆಯುತ್ತದೆ.' ಈ ಮಾತಿನಿಂದ ವ್ಯಥೆಗೊಂಡ ಕ್ಲಾರಿಸ್

ಮಾರುತ್ತರ ಬರೆದು ತೋರುವನ್ನು ನೋಡಲಾಗದೆ ಇರುವುದರಿಂದ ತನಗಾಗಿರುವ ನಿರಾಸೆಯನ್ನು ತೋಡಿಕೊಂಡಳು. ತೋರುವಿನ ಕೃತಿಗಳೂ ಪತ್ರಗಳೂ ಸುಸಂಸ್ಕೃತ ಸುಂದರ ಅಂತಃಸತ್ವದ ನಿದರ್ಶನಗಳೆಂದು ಕ್ಲಾರಿಸ್ ತಿಳಿದಿದ್ದಳು. ತೋರು ಇನ್ನು ಹೆಚ್ಚು ಬರೆಯಲಿಲ್ಲ. ಗತಿಸುವ ಒಂದು ತಿಂಗಳ ಮುನ್ನ ಜುಲೈ 30 ರಂದು ಕೆಲವೊಂದು ಸಾಲುಗಳನ್ನು ಬರೆದಳು. ಆದರೆ ತೋರುವಿನ ಅಂತ್ಯ ಅಷ್ಟು ಬೇಗ ಆಗುವುದೆಂಬುದನ್ನು ಅರಿಯದ ಕ್ಲಾರಿಸ್ ಸೆಪ್ಟೆಂಬರಿನಲ್ಲಿ ಪತ್ರ ಬರೆದು ತೋರುವಿನ ಕಾಗದ ತಡವಾಗಿ ತಲುಪಿತೆಂದು ಹೇಳಿದಳು 'ಏನು! ನಿನ್ನ ಚಿತ್ರದಲ್ಲಿ ಕಾಣುವ ಆ ಚೈತನ್ಯವನ್ನು ನಿನ್ನ ಅನಾರೋಗ್ಯ ಕುಂದಿಸಿದೆಯೆ? ಆ ಸುಂದರ ಕಣ್ಣುಗಳಲ್ಲಿನ ಆ ತೇಜಸ್ಸು ಕರಗಿಹೋಗುತ್ತಿದೆಯೆ? ಅದೊಂದು ಮೂಡಿ ಮುಗಿಯುವ ಘಟ್ಟ ಮಾತ್ರ!'

ಆದರೆ ತೋರು ಆಗಸ್ಟ್ 30 ರಂದು ತೀರಿಕೊಂಡಳೆಂಬ ಸುದ್ದಿಯನ್ನು ಹೊತ್ತು ತಂದ ಗೋವಿಂದಚಂದ್ರನ ಸೆಪ್ಟೆಂಬರ್ 30 ರ ಪತ್ರ ಅವಳಿಗೆ ದಂಗುಬಡಿಸಿತು. ತೋರುವನ್ನು ನೋಡದೆಯೇ ಅವಳನ್ನು ಪ್ರೀತಿಸತೊಡಗಿದಳು. ಭಾರತೀಯ ಸಂಸ್ಕೃತಿ ಹಾಗೂ ಐರೋಪ್ಯ ವಿದ್ವತ್ತನ್ನು ತನ್ನಲ್ಲಿ ಸಮನ್ವಯಗೊಳಿಸಿದ್ದ ತೋರು ಕ್ರೈಸ್ತಳಾಗಿ ವಿಶ್ವಕ್ಕೊಂದು ಕಾಂತಿಯುತ ನಿದರ್ಶನವಾಗಿದ್ದಳು.

ತೋರುವಿನ ಜೀವನದ ಕೊನೆಯ ದಿನಗಳಲ್ಲಿ ಅವಳನ್ನು ನೋಡಲು ಅನೇಕ ಮಹನೀಯರು ಬಂದಿದ್ದರು. ಅವರಲ್ಲಿ ಸರ್ ವಿಲಿಯಂ ಹಂಟರ್ ಹಾಗೂ ಆನಂದ ಮೋಹನ್ ಬೋಸ್ ಕೂಡ ಇದ್ದರು. ತೋರುವಿನ ಅಧ್ಯಯನ ಅಳವಾಗಿತ್ತು. ಪ್ಯಾಟಿಸನ್ ಹೊಸಪುಸ್ತಕಗಳ ಒಂದು ಕಟ್ಟನ್ನು ಕಳುಹಿಸಿದ್ದ. ಆದರೆ ತೋರುವಿನ ಕಾಯಿಲೆ ತುಂಬ ಹೆಚ್ಚಿತು. ಜೂನ್ ತಿಂಗಳಿನಲ್ಲಿ ಮೇರಿಗೆ ಬರೆದ ಪತ್ರದಲ್ಲಿ ಕೊರಳಿನ ಎಲುಬಿನ ಮೇಲೆ ಹದಿನೈದು ದಿನಗಳಲ್ಲಾಗಲೇ ಮೂರು ಅಗ್ನಿ ಪ್ಲಾಸ್ಟ್ರಗಳನ್ನು ಹಾಕಿದರೆಂದೂ ಅವು ಬಹಳ ನೋವನ್ನುಂಟುಮಾಡಿದವೆಂದೂ ಬರೆದಳು. 'ನೋವಿನಿಂದ ಹುಚ್ಚಳಂತಾಗಿದ್ದೇನೆ! ಒಂದೂ ಇನ್ನೂ ಪೂರ್ಣವಾಗಿಲ್ಲ.' ಮುಂದಿನ ತಿಂಗಳು ಹೀಗೆ ಬರೆದಳು: 'ನಮ್ಮ ಕಷ್ಟವನ್ನು ಸೈರಣೆಯಿಂದ ಅನುಭವಿಸಲು ದೇವರು ಶಕ್ತಿ ಕೊಡಲಿ.' ತೋರು ನ್ಯೂಮನ್ನನ ಪ್ರಾರ್ಥನೆಯೊಂದನ್ನು ಉದ್ಧರಿಸಿದಳು. 'ನಾನು ಒಂದು ನಿಟ್ಟುಸಿರಿಂದಾಗಲಿ ಕಣ್ಣೀರ ಹನಿಯಿಂದಾಗಲಿ ತಪ್ಪಿಸಿಕೊಳ್ಳಲು ಇಚ್ಛಿಸುವುದಿಲ್ಲ.' 1873 ರಲ್ಲಿ ತೋರು ಭಾರತಕ್ಕೆ ಹಿಂದಿರುಗಿದ ಮೇಲೆ ಮೇರಿಗೆ ಬರೆದ ಐವತ್ತ ಮೂರನೆಯ ಹಾಗೂ ಕೊನೆಯ ಪತ್ರ ಇದು.

ತಮ್ಮ ಮೂರು ಮಕ್ಕಳನ್ನೂ ಕಳೆದುಕೊಂಡು ಮೃತ್ಯುವನ್ನೇ ಎದುರುನೋಡುತ್ತ ಇನ್ನೆಂದಿಗೂ ಕೇಳಿಸದ ದನಿಗಳ ನೆನಪಿನಲ್ಲೇ ಬದುಕಿ ಉಳಿದ ಆ ವೃದ್ಧ ದಂಪತಿಗಳು ಹೇಗಿದ್ದಿರಬೇಕು ಊಹಿಸಿಕೊಳ್ಳಿ. ಮನೆಯ ಹಲವಾರು ಆಳುಕಾಳುಗಳು, ಪ್ರೀತಿಯ ಕುದುರೆಗಳು, ಬೆಕ್ಕುಗಳು, ತೋರು ಪ್ರೀತಿಯಿಂದ ಸಾಕಿದ್ದ ಪ್ರತಿ ಗಿಡ, ಮರ ಬಳ್ಳಿಯೂ ಅಲ್ಲಿದ್ದವು. ಆದರೆ ಅಷ್ಟು ಸುಂದರವಾದ, ಪ್ರತಿಭಾಶಾಲಿಗಳಾದ ಆ ಮಕ್ಕಳು ಮಾತ್ರ ಇರಲಿಲ್ಲ. ತೋರುವಿನ ಆ ನಗು, ಆ ಹಾಡು, ಆ ವಿದ್ವತ್ತು ಮುಗ್ಧತೆ ಎಲ್ಲಿ? ಆದರೆ ಕ್ರೈಸ್ತ ಧರ್ಮದ ಆಶ್ವಾಸನೆಯಂತೆ ತೋರು ಅರು ಅಬ್ಜು ಇವರ ಜೊತೆಗೂಡಿ ತನ್ನ

ತಂದೆ ತಾಯಿಯರ ಜೊತೆ ಸೇರುತ್ತಾಳೆ. ಆ ಪುನರ್ಮಿಲನ ಚಿರಾಯು. ಈ ನಂಬಿಕೆಯಿಂದ ಆ ವೃದ್ಧ ತಂದೆ ನಡುಗುತ್ತಿರುವ ಕೈಗಳಿಂದಲೇ ತನ್ನ ಮಗಳ ಹಸ್ತಪ್ರತಿಗಳನ್ನು ಹುಡುಕಿ ತೆಗೆಯುವ ಮನಸ್ಥೈರ್ಯ ಪಡೆದ. ತನ್ನ ಮಕ್ಕಳ ಅದರಲ್ಲೂ ತೋರುವಿನ ಸ್ಮರಣೆಯಲ್ಲಿ ಗೋವಿಂದ ಚಂದ್ರ ತೋರುವಿನ ಮರಣಾನಂತರ ತಾನು ಬದುಕಿ ಉಳಿದಿದ್ದ ಕೆಲಕಾಲವನ್ನು ಕಳೆದ.

ತನ್ನ ಸುತ್ತಲೂ ಪುಸ್ತಕಗಳನ್ನು ಹರಡಿಕೊಂಡು ತೋರು ಕಾಲವಾಗಿದ್ದಳು. ತೋರುವಿನ ಕಾಲಾನಂತರ ಮೇರಿಗೆ ಕಾಗದ ಬರೆದು ಗೋವಿಂದ ತೋರು ಜುಲೈವರೆಗೆ ಅವಳ ಎಲ್ಲ ಕಾಗದಗಳನ್ನೂ ಓದಿದ್ದಳೆಂದೂ ಅದು ಅವಳ ಮನಸ್ಸಿಗೆ ತುಂಬ ಸಮಾಧಾನವನ್ನು ಇತ್ತವೆಂದೂ ತಿಳಿಸಿದ. ರಾಂಬಾಗನ್‌ನಲ್ಲಿ ಆಗಸ್ಟ್ ಮೂವತ್ತರಂದು ಕಾಲವಾದಳು. ಆಗ ತೋರುವಿಗೆ ಇಪ್ಪತ್ತೊಂದು ವರುಷ ನಾಲ್ಕು ತಿಂಗಳು. ಏಸುಕ್ರಿಸ್ತನ ಮೇಲೆ ಪೂರ್ಣ ನಂಬಿಕೆಯಿಟ್ಟು ದೃಢ ಮನಸ್ಸಿನಿಂದ ಪೂರ್ಣ ಶಾಂತಿಯಿಂದ ತೋರು ಇಹಲೋಕ ತ್ಯಜಿಸಿದಳು. ತೋರು ಕಾಲವಾದ ಮರುದಿನ ಗೋವಿಂದ ಚಂದ್ರ ಮೇರಿಗೆ ಪತ್ರ ಬರೆದ. 'ತೋರು ಇಹಲೋಕ ತ್ಯಜಿಸಿದಳು. ನೆನ್ನೆ ರಾತ್ರೆ ಎಂಟುಗಂಟೆಗೆ ಅವಳು ನಮ್ಮನ್ನಗಲಿದಳು. ಅಂತ್ಯ ಶಾಂತಿಯುತವಾಗಿತ್ತು.' ಅಪ್ಪರ್ ಸರ್ಕ್ಯುಲರ್ ರಸ್ತೆಯ ಸಿ. ಎಮ್. ಎಸ್. ರುದ್ರಭೂಮಿಯಲ್ಲಿ ಅವಳನ್ನು ಮಣ್ಣು ಮಾಡಲಾಯಿತು. ಸ್ಮಾರಕ ಕಲ್ಲಿನ ಮೇಲೆ ಹೀಗೆ ಬರೆಯಲಾಗಿದೆ.

ತೋರುದತ್
ಗೋವಿಂದ ಚಂದ್ರ ದತ್ತರ
ಕಿರಿಯ ಪುತ್ರಿ
ಜನನ 1856 ಮಾರ್ಚ್ 4
ಮರಣ 1877 ಆಗಸ್ಟ್ 30
"ನೀನು ಸಾವಿನಲ್ಲಿ ಶ್ರದ್ಧೆಯಿಂದಿರು
ನಾನು ನಿನಗೆ ಬದುಕಿನ ಕಿರೀಟವಿಡುತ್ತೇನೆ."

ರೆ. 11. 10.

ಇಂದಿಗೂ ತೋರು ಹಾಗೂ ಅವಳ ಸಹೋದರಿ ಸಹೋದರನ ಗೋರಿಗಳು ಅಕಾಲ ಮರಣಕ್ಕೀಡಾದ ಈ ಕಿರಿಯ ಚೇತನಗಳ ನೆನಪಿನ ಗುರುತಾಗಿವೆ. ಬದುಕಿದ್ದರೆ ಏನಾಗಬಹುದಿತ್ತೋ ಎನ್ನುವ ಭಾವದಿಂದ ಹೃದಯವನ್ನು ಭಾರವಾಗಿಸುತ್ತವೆ. ಕ್ಲಾರಿಸ್ಸಳಿಗೆ ಬರೆಯುತ್ತ ಗೋವಿಂದ ಚಂದ್ರ ಹೀಗೆ ಹೇಳಿದ, 'ವಿರಹವಾಗಲಿ ದುಃಖವಾಗಲಿ ಇಲ್ಲದ ನಾಡಿಗೆ ನಮ್ಮನ್ನಗಲಿ ಹೋದಳು ಅವಳು. ತನ್ನ ಉದ್ಧಾರಕನಲ್ಲಿ ಅವಳಿಗೆ ಅಚಲವಾದ ನಂಬಿಕೆ. ಅವಳ ಆತ್ಮ ಪೂರ್ಣ ಶಾಂತಿಯನ್ನು ಅನುಭವಿಸಿತು. ಅನುಭವಕ್ಕೂ ಮಿಗಿಲಾದ ಶಾಂತಿಯದು. ಅವಳಿಗಿಂತ ಹೆಚ್ಚು ಮಧುರವಾಗಿರುವ ಮಗು ಜೇರೊಂದಿರುವುದಿಲ್ಲ. ಅವಳು ನನ್ನ ಕೊನೆಯ ಮಗಳು. ನಮ್ಮ ವೃದ್ಧಾಪ್ಯದಲ್ಲಿ ನಾನೂ ನನ್ನ ಪತ್ನಿಯೂ ಬರಿದಾದ ಹಾಳುಗರೆಯುವ ಮನೆಯಲ್ಲಿ ಏಕಾಂಗಿಗಳಾದೆವು.

ಆದರೆ ನಾವು ಪರಿತ್ಯಕ್ತರಾಗಿಲ್ಲ. ನಮ್ಮ ಪ್ರಭುವಿನ ಸನ್ನಿಧಿಯಲ್ಲಿ ನಾವು ಇನ್ನೆಂದಿಗೂ ಬೇರ್ಪಡದಂತೆ ಒಟ್ಟುಗೂಡುವ ಕಾಲವೊಂದು ಬಂದೇ ಬರುತ್ತದೆ. ಆ ಸಮಾಧಾನ ನಮಗಿದೆ.'

೧೩. ಒಂದು ಕಾವ್ಯಗುಚ್ಛ

ಫ್ರೆಂಚ್ ಹೊಲಗಳಲ್ಲಿ ಕಟ್ಟಿದ 'ಗೊಂಚಲು' ಗ್ರಂಥವನ್ನು ಶ್ರೀಮತಿ ಗೋವಿಂದ ಚಂದ್ರರಿಗೆ ಸಮರ್ಪಿಸಲಾಗಿದೆ. ಅರ್ಪಣಾ ಪದ್ಯಕ್ಕೆ ಹಿಲ್ಲರನ ಸಾಲುಗಳನ್ನು ಬಳಸಲಾಗಿದೆ.

'ಬೇರೊಂದು ನಾಡಿನಲಿ
ಆಯ್ದ ಹೂ ಹಣ್ಣುಗಳ
ತಂದಿಹೆನು. ಬೇರೊಂದು
ಬೆಳಕಿನವು. ಸೊಗ್ಗ ಸುಖದ ಬೀಡಿನವು.'

1876 ಮಾರ್ಚ್ ತಿಂಗಳ ಮೊದಲ ಮುದ್ರಣಕ್ಕೆ ಮುನ್ನುಡಿಯಾಗಲಿ ಪ್ರಸ್ತಾವನೆಯಾಗಲಿ ಇಲ್ಲದಿದ್ದರೂ ಅದೇನೂ ಗಮನ ಸೆಳೆಯದ ಕೃತಿಯಾಗಿರಲಿಲ್ಲ. ಭಾರತದಲ್ಲಿ ಮುದ್ರಿತವಾದ ಈ ಕೃತಿ 252 ಪುಟಗಳ ಸಂಪುಟ. ಅದರಲ್ಲಿ ೪0 ಪುಟ ಟಿಪ್ಪಣಿ. ಈ ಟಿಪ್ಪಣಿಗಳನ್ನು ಓದಿದರೆ ತೋರುವಿಗೆ ಫ್ರೆಂಚ್ ಸಾಹಿತ್ಯದ ಪರಿಚಯ ಎಷ್ಟು ಆಳವಾಗಿತ್ತು ಎನ್ನುವುದು ತಿಳಿಯುತ್ತದೆ. ಇದರಲ್ಲಿರುವ 195 ಕವನಗಳಲ್ಲಿ ಎಂಟು ಕವನಗಳು ಅರುದಿನವು. ಉಳಿದವು ತೋರುವಿನವು. ಸುಮಾರು 75 ಪಾರ್ನಾಸಿಯನ್ ಕವಿಗಳ ಕವನಗಳನ್ನು ಭಾಷಾಂತರಿಸಲಾಗಿದೆ. ಇವರಲ್ಲಿ ಪ್ರಮುಖರು ಡ್ಯುಬೆಲೆ. ಡ್ಯು ಬಾರ್ಟ ಸ್ಕಾವ, ದಿಯು. ಪೆರ್ ಕಾರ್ನೆಯು. ದುಪಾರ್ನಿ. ಲುಕೊಂಟ್‌ದ ಗ್ರಮೌ. ದು ಫ್ಲಾರಿಯಾನ್. ದಿವಿನಿ. ಹಿನಿಯೆ. ಮುಸ್ಸೆ. ಬೆರಾಂಜಿ. ಸೆಂಟ್ ಬಾವ್. ಪ್ರೀಯು ದ್ಯುಪಾ. ದಲಪಾರ್ಕ್. ವಿಕ್ಟರ್ ಹ್ಯೂಗೊ. ಲಿಮಾರ್ಟಿನ್. ಬೊಡಲೇರ್. ಲುಕೊಂಟ್ ದಿ ಲಿಲ್. ದಿ ಬಾಷ್ದ ವೆಲ್‌ಮುರ್.

ಮೊದಲನೆಯ ಮುದ್ರಣದ ಪ್ರತಿಗಳು ಬಹಳ ಬೇಗ ಮಾರಾಟವಾಗಿ ತೋರು ಎರಡನೆಯ ಮುದ್ರಣದ ಸಿದ್ಧತೆಯಲ್ಲಿ ತೊಡಗಿದಳು. ಆದರೆ ಆ ಮುದ್ರಣ ಪ್ರಕಟವಾಗುವವರೆಗೂ ಅವಳು ಬದುಕಿ ಉಳಿಯಲಿಲ್ಲ. ಮೊದಲನೆಯ ಮುದ್ರಣಕ್ಕೆ ಮಸುಕು ನೀಲಿ ಬಣ್ಣದ ಕಾಗದದ ಮೇಲೆ ಚಿನ್ನದ ಬಣ್ಣದ ಅಕ್ಷರಗಳು 1876 ರಲ್ಲಿ 'ಎಗ್ಸಾಮಿನರ್' ಪತ್ರಿಕೆಯ ಕಚೇರಿಯಲ್ಲಿ ಅದನ್ನು ನೋಡಿದ ಗಾಸನಿಗೆ ಅದು ಅತ್ಯಂತ ಅನಾಕರ್ಷಕವಾದ ಕಿತ್ತಳೆ ಬಣ್ಣದ ಕವಚದ ಪುಸ್ತಕವಾಗಿ ಏಕೆ ಕಂಡಿತೆಂದರೆ ಅದಕ್ಕಿದ್ದದ್ದು ಬರಿಯ ಕಾಗದದ ರಟ್ಟು. ಹೀಗೆಂದು ತೋರು ಮೇರಿಗೆ ಬರೆದ ಒಂದು ಕಾಗದದಲ್ಲಿ

ತಿಳಿಸಿದ್ದಾಳೆ. ತೆಳುವಾಗಿ ಹೆಚ್ಚು ಬೆಲೆಯಿಲ್ಲದ ಪ್ರತಿಗಳನ್ನು ಯೂರೋಪಿಗೆ ಏಕೆ ಕಳುಹಿಸಲಾಯಿತೆಂದರೆ ಅವನ್ನು ಅಂಚೆಯ ಮೂಲಕ ರವಾನಿಸುವುದು ಸುಲಭವಾಗಿತ್ತು. ಅಷ್ಟೇನೂ ಗಮನ ಸೆಳೆಯದ ಇಂತಹ ಸಣ್ಣದೊಂದು ಪುಸ್ತಕಕ್ಕೆ ಅಂತಹ ಗಮನಾರ್ಹ ಸ್ವಾಗತ ದೊರೆಯಿತೆಂದರೆ ಆಶ್ಚರ್ಯವಾಗುತ್ತದೆ. ಇದಕ್ಕೆ ಆ ಸಂಪುಟದಲ್ಲಿದ್ದ ಕವನಗಳ ಶ್ರೇಷ್ಠತೆಯೇ ಕಾರಣ. ಈ ಕವನ ಸಂಕಲನವನ್ನು ವಿಮರ್ಶಿಸಿದ ಪ್ರಖ್ಯಾತರಲ್ಲಿ ಪ್ರಮುಖರು ಫ್ರಾನ್ಸಿನ ಆಂಡ್ರೆಥೀಯುರಿಯೆಟ್ ಹಾಗೂ ಇಂಗ್ಲೆಂಡಿನ ಎಡ್‌ಮಂಡ್‌ಗಾಸ್.

ಮೊದಲ ಮುದ್ರಣವನ್ನು ಪ್ರಕಟಿಸಿದ ಪ್ರಕಾಶಕರೇ ಎರಡನೆಯ ಮುದ್ರಣವನ್ನೂ ಪ್ರಕಟಮಾಡಿದರು. ಇವರು ಭವಾನಿ ಪುರದ ಸಾಪ್ತಾಹಿಕ ಸಂವಾದದ ಮುದ್ರಕರು. 1878 ರಲ್ಲಿ ಪ್ರಕಟವಾದ ಈ ಮುದ್ರಣಕ್ಕೆ ತೋರುವಿನ ದುಃಖತಪ್ತ ತಂದೆ ಒಂದು ಮುನ್ನುಡಿ ಬರೆದಿದ್ದಾರೆ. ಇದನ್ನು ಆತ ತನ್ನ ಬಾಗ್‌ಮರಿ ತೋಟದ ಮನೆಯಲ್ಲಿ 1877 ರ ಅಕ್ಟೋಬರ್‌ನಲ್ಲಿ ಬರೆದು ಮುಗಿಸಿದರು.

ಈ ಮುನ್ನುಡಿಯಲ್ಲಾತ ಎಷ್ಟೇ ಉತ್ತಮವಾದ ಔಷಧೋಪಚಾರಗಳಾದರೂ ತಾನು ತೋರುವನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲ ಎಂದು ಮರುಗಿದ್ದಾನೆ. ಎರಡನೆಯ ಮುದ್ರಣದಲ್ಲಿ ಸುಮಾರು ಮೂವತ್ತು ಹೊಸ ಭಾಷಾಂತರಗಳಿದ್ದು ಒಟ್ಟು ಸಂಖ್ಯೆ ಸುಮಾರು 200. ಈ ಕೃತಿಯ ಮೂರನೆಯ ಮುದ್ರಣವನ್ನು 1850 ರಲ್ಲಿ ಲಂಡನ್ನಿನ ಕೇಗನ್ ಪಾಲ್ ಪ್ರಕಾಶಕರು ಪ್ರಕಟಿಸಿದರು. ಅಲ್ಲದೆ ಇಂಡಿಯನ್ ಮ್ಯಾಗಜೈನ್ ಮತ್ತು ರೆವ್ಯೂ ಎಂಬ ಸಂಕಲನದಲ್ಲಿ ಎರಡು ಭಾಷಾಂತರಗಳನ್ನು ಸೇರಿಸಲಾಯಿತು. ಆತ 'ತೋರುದತ್ತಳ ಕಾವ್ಯ' ಎಂಬ ಲೇಖನವನ್ನೂ ಬರೆದ.

'ಗೊಂಚಲು' ಮೊದಲು ಪ್ರಕಟವಾದಾಗ ತೋರು ಕಾತುರದಿಂದ ವಿಮರ್ಶೆಗಳನ್ನು ಎದುರು ನೋಡುತ್ತಿದ್ದಳು. ಪ್ರಕಟವಾದ ವಿಮರ್ಶೆಗಳಲ್ಲಿ ಮೊದಲನೆಯದು 1876 ಮೇ ತಿಂಗಳಲ್ಲಿ ಬೆಂಗಾಲ್ ಮ್ಯಾಗಜೈನಿನಲ್ಲಿ ಪ್ರಕಟವಾದ ವಿಮರ್ಶೆ. 'ಹೆಚ್ಚಾಗಿ ಆಧುನಿಕ ಫ್ರೆಂಚ್‌ಕವಿಗಳ ಕವನಗಳ ಭಾಷಾಂತರಗಳಾಗಿ 'ಟಿ. ಡಿ' ಎಂಬ ಅಂಕಿತದಲ್ಲಿ ಈ ಪತ್ರಿಕೆಯಲ್ಲಿ ಈಗ ಎರಡು ವರುಷಗಳಿಂದಲೂ ಪ್ರತಿ ತಿಂಗಳೂ ಪ್ರಕಟವಾದ ಈ ಸುಂದರ ಕವನಗಳನ್ನು ಬೆಂಗಾಲ್ ಮ್ಯಾಗಜೈನಿನ ಓದುಗರು ತುಂಬ ಸಂತೋಷದಿಂದ ಓದಿರಬೇಕು. ಈ ಕವನಗಳೊಂದಿಗೆ ಇನ್ನಿಷ್ಟು ಕವನಗಳನ್ನು ಕೂಡಿಸಿ ಇದೀಗ ತಾನೆ ಸುಮಾರು 234 ಪುಟಗಳ ಒಂದು ಕಾವ್ಯ ಸಂಪುಟ ಪ್ರಕಟವಾಗಿದೆ. ಬೆಂಗಾಲ್ ಮ್ಯಾಗಜೈನಿನ ಟಿ. ಡಿ ಈ ಕಾವ್ಯ ಸಂಕಲನದ ಕರ್ತೃ ತೋರುದತ್ ಫ್ಯಾಮಿಲಿ ಅಲ್ಬಂನ ಸಂಪಾದಕರಾದ ಬಾಬು ಗೋವಿಂದಚಂದ್ರದತ್ತರ ಪ್ರತಿಭಾವಂತ ಪುತ್ರಿ. ಬಹುಶಃ ಬಂಗಾಳ ದಲ್ಲೇ ಅತ್ಯಂತ ಪ್ರತಿಭಾನ್ವಿತ ಕುಟುಂಬಕ್ಕೆ ಸೇರಿದವಳು ಈಕೆ. ಕಲ್ಕತ್ತದ ರಾಂಬಾಗಾನಿನ ದತ್ತ ಮನೆತನದವರಲ್ಲಿ ಬಹುತೇಕ ಮಂದಿ ತಮ್ಮ ಪ್ರತಿಭೆಯಿಂದ ಬೆಳಗಿದ್ದಾರೆ. ಈ ಕುಟುಂಬದ ಹಿರಿಯ ಬಾಬು ರಾಸಮಯ ದತ್ತ ಅತ್ಯಂತ ಪ್ರತಿಭಾಶಾಲಿ. ತೀರ ಸಣ್ಣ ರೀತಿಯಲ್ಲಿ ಜೀವನವನ್ನಾರಂಭಿಸಿ ಬೇಡಿಕೆಗಳ ನ್ಯಾಯಾಲಯದ ಕಮಿಷನರ್ ಸ್ಥಾನಕ್ಕೆ ಏರಿದ. ಇನ್ನೂ ಯುವಕನಾಗಿದ್ದಾಗಲೇ ಆತನ ಇಬ್ಬರು ಗಂಡು ಮಕ್ಕಳು ತೀರಿ ಕೊಂಡರು. ಮೂವರು ಜನ ಗಂಡು ಮಕ್ಕಳು ಈಗ ಇದ್ದಾರೆ. ಅವರೇ ಗೋವಿಂದ.

ಹರ, ಗಿರೀಶ. ಕುಮಾರಿ ತೋರುದತ್ತಳ ಹಿರಿಯಕ್ಕ ಕುಮಾರಿ ಅರುದತ್ತ ಈಗೆರಡು ವರುಷಗಳ ಹಿಂದೆ ತೀರಿಕೊಂಡಳು. ಆಕೆಯೂ ತೋರುದತ್ತಳಂತೆಯೇ ಪ್ರತಿಭಾನ್ವಿತೆ. ಕೆಲವುಸಲ ತನ್ನ ಕಾವ್ಯ ಪ್ರತಿಭೆಯ ಕುಸುಮಗಳನ್ನು ಪ್ರಕಟನೆಗಾಗಿ 'ಎ. ಡಿ.' ಎಂಬ ಅಂಕಿತದಲ್ಲಿ ನಮ್ಮಲ್ಲಿಗೆ ಕಳುಹಿಸುವ ಕೃಪೆದೋರಿದ್ದಳು. ಕುಮಾರಿ ದತ್ ಕ್ರೈಸ್ತಳು.'

ಉಳಿದ ವಿಮರ್ಶೆಗಳೂ ಬೇಗ ಬಂದವು. 'ಇಂಗ್ಲಿಷ್‌ಮನ್' ಕಾವ್ಯರಚನೆಯಲ್ಲಿದ್ದ ಕೆಲವೊಂದು ತಪ್ಪುಗಳನ್ನು ತೋರಿಸಿದರೂ ಒಟ್ಟಿನಲ್ಲಿ ಮೆಚ್ಚುಗೆಯ ಮಾತಾಡಿತ್ತು. ಕೃತಿಯ ಕೊನೆಯ ಪದ್ಯ ಸಂಗೀತ ಯಾವ ರೀತಿಯ ಕುಂದೂ ಇಲ್ಲದ ಕವನ ಎಂದು ಹೊಗಳಿತ್ತು. ಮದರಾಸ್ ಸ್ಟ್ಯಾಂಡರ್ಡ್ ತೋರುವನ್ನು ಪುರುಷನೆಂದು ಭಾವಿಸಿತ್ತು. ತೋರುವಿಗೆ ನಗು ಬಂದಿತ್ತು, ಜೊತೆಗೆ ಹೆಮ್ಮೆಯೂ ಆಗಿತ್ತು. ತೋರುವಿಗೆ ಅಸಾಧಾರಣ ಪ್ರತಿಭೆಯಿದೆಯೆಂದೂ ಮುಂದೆ ಇನ್ನೂ ಶ್ರೇಷ್ಠಮಟ್ಟದ ಕವನಗಳನ್ನು ರಚಿಸುವ ಸಾಮರ್ಥ್ಯವಿದೆಯೆಂದೂ ಹೇಳಿತ್ತು. ಫ್ರೆಂಡ್ ಆಫ್ ಇಂಡಿಯಾ 'ಈ ಬಂಗಾಳಿ ಹುಡುಗಿ ಹಿಂದೂವಾಗಿಯೂ ಮೆಚ್ಚುವಂತಹ ಕಾವ್ಯ ಶೈಲಿಯಲ್ಲಿ ಫ್ರಾನ್ಸಿನ ಮಹಾಕವಿಗಳ ಕವನಗಳ ಭಾಷಾಂತರವನ್ನು ಕೊಟ್ಟಿದ್ದಾಳೆ' ಎಂದಿತು. ಭಾರತೀಯ ಗೊಂದಲ 'ಈ ಕೃತಿ ದೇಶೀಯಳೊಬ್ಬಳ ಕೃತಿ ಎಂದು ನಂಬುವುದೇ ಕಷ್ಟ. ಕಾವ್ಯ ಸೊಗಸಾಗಿದೆ ಅಲ್ಲದೆ ಇಂಗ್ಲಿಷ್. ಫ್ರೆಂಚ್ ಇವೆರಡರಲ್ಲೂ ಕೃತಿಕಾರಳಾಗಿರುವ ಪಾಂಡಿತ್ಯಕ್ಕೆ ನಿದರ್ಶನವಾಗಿದೆ.' ಭಾರತದ ಅನೇಕ ಪತ್ರಿಕೆಗಳು ಕಾವ್ಯ ಸಂಕಲನವನ್ನು ಹೊಗಳಿದವು. ಸ್ವಲ್ಪ ಕಾಲವಾದಮೇಲೆ 'ಎಕ್ಸಾಮಿನರ್' ಪತ್ರಿಕೆ ಎಡ್‌ಮಂಡ್ ಗಾಸ್ ಬರೆದ ಎರಡು ಕಲಮಿನ ವಿಮರ್ಶೆಯನ್ನು ಪ್ರಕಟಿಸಿತು. ಒಬ್ಬ ಭಾರತೀಯಳು ಈ ಕವನಗಳನ್ನು ಮೂಲದ ಛಂದಸ್ಸಿಗನುಗುಣವಾಗಿ ಭಾಷಾಂತರಿಸಿರುವುದನ್ನು ಕಂಡು ಗಾಸನಿಗೆ ಆಶ್ಚರ್ಯವಾಗಿತ್ತು. ಈ ಅಸಾಧಾರಣ ಕೆಲಸವನ್ನು ಆಕೆ ಯಶಸ್ವಿಯಾಗಿ ಮಾಡಿದ್ದಳು. ತೋರು ಮೂಲಕ್ಕೆ ಸ್ವಲ್ಪವೂ ಕುಂದು ಬಾರದ ರೀತಿಯಲ್ಲಿ ಭಾಷಾಂತರಿಸುವ ಅಸಾಧಾರಣ ಪ್ರತಿಭೆಯನ್ನು ಹೊಂದಿದ್ದಳು. ಆಂಗ್ಲ ಅನುವಾದಕರು ಅನೇಕಸಲ ಮೂಲದ ಸೊಗಸನ್ನು ಇರುವಂತೆಯೇ ಅನುವಾದಿಸುವುದಿಲ್ಲ. ಏಕೆಂದರೆ ಅದು ಕ್ಲಿಷ್ಟ. ಅದಕ್ಕಾಗಿ ಅದನ್ನು ನಯಮಾಡಿಬಿಡುತ್ತಾರೆ. ಆದರೆ ತೋರು ಕೆಲವೊಮ್ಮೆ ಕಾವ್ಯ ಗುಣ ಕಡಿಮೆಯಾಗುವುದೆಂದು ತಿಳಿದರೂ ಮೂಲಕ್ಕೆ ಸ್ವಲ್ಪವೂ ಕುಂದಿಲ್ಲದಂತೆ ಅನುವಾದಿಸುತ್ತಿದ್ದಳು. ತೋರುವಿಗೆ ಈ ವಿಮರ್ಶೆ ತುಂಬ ಹಿಡಿಸಿತು. 'ವಿಮರ್ಶೆ ವಿನಯದಿಂದ ಕೂಡಿದೆ. ಯಥಾರ್ಥವಾಗಿದೆ. ಸ್ವಲ್ಪ ತಮಾಷೆಯಾಗಿಯೂ ಇದೆ. 'ಗೊಂಚಲ' ಬಗ್ಗೆ ಬಂದಿರುವ ವಿಮರ್ಶೆಗಳಲ್ಲಿ ಇದು ಅತ್ಯುತ್ತಮ ವಿಮರ್ಶೆ. ವಿಮರ್ಶಕರು ಯಾರೇ ಆಗಲಿ ಅವರಿಗೆ ನಾನು ಕೃತಜ್ಞಳು.'

ಆದರೆ ಪಾಪ ತೋರುವಿಗೆ ಎಡ್‌ಮಂಡ್ ಗಾಸನ ಪರಿಚಯವಾಗಲೇ ಇಲ್ಲ. ಆತನೊಡನೆ ಪತ್ರವ್ಯವಹಾರವನ್ನೂ ಮಾಡಲಿಲ್ಲ. ಇಪ್ಪತ್ತು ವರುಷಗಳಾದ ಮೇಲೆ ಸರೋಜಿನಿ ನಾಯುಡು ಅವರನ್ನು ಭೇಟಿಯಾದಳು. ಗಾಸನ ಹಿತವಚನ, ಸಹಾಯ ತೋರುವಿನ ಬರವಣಿಗೆಯ ಮೌಲ್ಯವನ್ನು ಹೆಚ್ಚಿಸುತ್ತಿತ್ತೆಂಬುದು ನಿಸ್ಸಂದೇಹ. ಅಲ್ಲದೆ ಅವು ಅವಳ ಕಾವ್ಯದ ಅಂಕುಡೊಂಕುಗಳನ್ನು ತಿದ್ದಬಲ್ಲವಾಗಿದ್ದವು.

ವಿಮರ್ಶಕ ಇ. ಎಚ್. ಥಾಮಸ್ ಬರೆದೊಂದು ಸ್ವಾರಸ್ಯಪೂರ್ಣವಾದ ವಿಮರ್ಶೆ 'ಲಂಡನ್ ಕ್ವಾರ್ಟರ್ಲಿ ರೆವ್ಯೂ'ನಲ್ಲಿ ಪ್ರಕಟವಾಯಿತು. ಇದನ್ನು 'ಜೀವನ ಹಾಗೂ ಪತ್ರಗಳು' ಕೃತಿಯ ಕಡೆಯಲ್ಲಿ ಪೂರ್ಣವಾಗಿ ಉದ್ಧರಿಸಲಾಗಿದೆ. ಟಿಪ್ಪಣಿಗಳು ವಿಶಾಲವಾದ ಫ್ರೆಂಚ್ ಸಾಹಿತ್ಯದಲ್ಲಿ ತೋರುವಿಗಿದ್ದ ಪಾಂಡಿತ್ಯವನ್ನು ತೋರಿಸುತ್ತವೆ. ಅಲ್ಲದೆ ಕವನಗಳಂತೂ ಅತ್ಯಂತ ಶ್ಲಾಘ್ಯವಾಗಿವೆ. ತೋರು ಮಾಡಿರುವ ಕೆಲಸ ಸೊಗಸಾಗಿದೆ. ಅಪಾರವೂ ಆಗಿದೆ. ಡಾ॥ ಬ್ರಜೇಂದ್ರನಾಥ್ ಈ ವಿಮರ್ಶಕರೊಡನೆ ಮಾತಾಡುತ್ತ ತನಗೂ ಆ ಟಿಪ್ಪಣಿಗಳು ತುಂಬ ಹಿಡಿಸಿದವೆಂದೂ ಕವನಗಳನ್ನಲ್ಲದೆ ಹೋದರೂ ಬರಿಯ ಟಿಪ್ಪಣಿಗಳನ್ನು ಮಾತ್ರವೇ ಮತ್ತೆ ಪ್ರಕಟಿಸಬೇಕೆಂದೂ ಹೇಳಿದನು. 'ಇಷ್ಟು ಸಣ್ಣ ವಯಸ್ಸಿನ ಭಾರತೀಯ ಹುಡುಗಿಗೆ ಫ್ರೆಂಚ್ ಸಾಹಿತ್ಯದ ಬಗ್ಗೆ ಇಷ್ಟು ಅಪಾರ ಜ್ಞಾನವಿದೆಯೆಂದು ನಂಬುವುದೇ ಕಷ್ಟ. ಟಿಪ್ಪಣಿಗಳಲ್ಲಿ ತೋರು ಅತ್ಯಂತ ಧೈರ್ಯಶಾಲಿಯಾಗಿ ವಿಮರ್ಶೆಮಾಡುವಾಗಲೂ ಎಲ್ಲಿಯೂ ಹುಡುಗಾಟಿಕೆಯಾಗುವುದಿಲ್ಲ. ಅಲ್ಲದೆ ಫ್ರೆಂಚ್ ಮಹಾಕವಿಗಳನ್ನು ವಿಮರ್ಶಿಸುವಾಗ ತನ್ನ ಸರಿಸಮನಾದವರನ್ನು ಕುರಿತು ಬರೆಯುವಂತೆ ಬರೆದಿದ್ದಾಳೆ. ಇವನ್ನು ಓದುವಾಗ ಯಾವುದನ್ನು ಹೆಚ್ಚು ಮೆಚ್ಚಬೇಕೆಂದೇ ತಿಳಿಯುವುದಿಲ್ಲ. ಅವಳ ಅಪಾರ ಪಾಂಡಿತ್ಯವನ್ನೇ ಅಥವಾ ಸ್ವತಂತ್ರ ಪೌರುಷಮಯ ವಿಮರ್ಶೆಯನ್ನೇ? ಈ ಭಾರತೀಯ ಹೆಣ್ಣು ಮಕ್ಕಳು ತಮಗೇ ತಿಳಿದಿರುವಂತೆ ಈ ಟಿಪ್ಪಣಿಗಳಲ್ಲಿ ತಮ್ಮ ಮನಸ್ಸನ್ನು ಬಿಚ್ಚಿ, ತೋರಿಸಿದ್ದಾಳೆ. ಈ ಅರಿವು ಈ ಶಕ್ತಿ ನಾವು ಅವಳನ್ನು ಗೌರವಿಸುವಂತೆ ಮಾಡಿವೆ. ಆರು 'ಗೊಂಚಲ'ಲ್ಲಿನ ಕೆಲವು ಅತ್ಯುತ್ತಮ ಕವನಗಳನ್ನು ಬರೆದಳೆಂದು ಆತನ ಅಭಿಪ್ರಾಯ.

'ಟಿಪ್ಪಣಿ'ಗಳು ಸ್ವಾರಸ್ಯವಾಗಿವೆ. ಅಷ್ಟೇ ಆಶ್ಚರ್ಯವನ್ನೂ ಉಂಟುಮಾಡುತ್ತವೆ. ಕೆಲವೊಮ್ಮೆ ಈ ಬರಹಗಾರಳ ಅಜ್ಞಾನ ಎಷ್ಟು ಮುಗ್ಧತೆಯಿಂದ ಕೂಡಿದೆ ಎನಿಸುತ್ತದೆ. ಇನ್ನೂ ಕೆಲವೆಡೆ ಆಕೆಯ ಜ್ಞಾನ ಎಷ್ಟು ಅಪಾರ ಎಂದು ಅಚ್ಚರಿಯಾಗುತ್ತದೆ. ಒಟ್ಟಿನಲ್ಲಿ ಪುಸ್ತಕದಲ್ಲಿ ವ್ಯಕ್ತವಾಗಿರುವ ಸಿದ್ಧಿ ಅದ್ಭುತವಾಗಿದೆ. ತೋರು ಹೆಚ್ಚಾಗಿ ಆಧುನಿಕ ಕವಿಗಳನ್ನೇ ಭಾಷಾಂತರಿಸಿದ್ದಳು. ಪ್ರಾಚೀನ ಕವಿಗಳು ಅಷ್ಟಾಗಿ ಅವಳ ಗಮನ ಸೆಳೆದಿರಲಿಲ್ಲ. ತೋರುವಿನ ಬಗ್ಗೆ ಹೇಳುವುದಾದರೆ ಅವರನ್ನು ಅವಳು ಗಮನಕ್ಕೇ ತಂದುಕೊಂಡಿರಲಿಲ್ಲ. ಅವಳ ಪಾಲಿಗೆ ಅವರು ಇಲ್ಲದಂತೆಯೇ ಸರಿ ಎಂದಿದ್ದಾನೆ ಗಾಸ್. ಅವಳ ಪ್ರಕಾರ ದ್ಯುಬಾರ್‌ಟಿ ಆದಮೇಲೆ ಪ್ರಮುಖವಾಗಿ ಗೋಚರಿಸುವುದು ಆಂಡ್ರೆಷಿನಿಯೆ. ಕೆಲವೊಮ್ಮೆ ಆಕೆ ಸೇಂಟ್ಸ್‌ಬರಿಗಾಗಲಿ ಲುಡ್ಯು ಅಸೆಲಿನೊಗಾಗಲಿ ಅಗೌರವತರದಂತಹ ಸಂಶೋಧನಾ ಸಾಮರ್ಥ್ಯ ತೋರುತ್ತಿದ್ದಳು. ನೆಪೊಲ್ ಲೊ ಪಿರಿರೆನೆಯುನ ಮೇಲೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಬೊದಲೆಯರನಲ್ಲಿನ ಕೃತಿ ಚೌರ್ಯವನ್ನು ಕಾಣುತ್ತಿದ್ದಳು. ಆದರೆ ಅವಳು ಅಲೆಗ್ಸಾಂಡರ್ ಸ್ಮಿತ್ ಬದುಕಿದ್ದಾನೆಂದು ತಿಳಿದಿದ್ದಳು. ಅಲ್ಲದೆ ಸೇಂಟ್ ಬಾವನ ಕೆಲಸ ಕಾರ್ಯಗಳ ಬಗ್ಗೆ ಅಸ್ಪಷ್ಟವಾಗಿದ್ದಳು.

ಗೊಂಚಲಲ್ಲಿನ ಮೊದಲ ಕವನ ಲು ಕೌಂಟನದು. ಈತನ ಬಗ್ಗೆ ತೋರು ಬೆಂಗಾಲ್ ಮ್ಯಾಗಜೈನಿನಲ್ಲಿ ಒಂದು ಲೇಖನವನ್ನೂ ಬರೆದಿದ್ದಳು. ಈ ಕವಿಯಂತೆ

ತೋರುವೂ ಸಚ್ಚಿದಾನಂದವನ್ನು ಅರಿಯಬೇಕೆಂಬ, ಅನಂತವನ್ನು ತಿಳಿಯಬೇಕೆಂಬ ಹಂಬಲವನ್ನು ಹೊಂದಿದ್ದಳು. ಇಬ್ಬರಲ್ಲೂ ಸಾವಿನ ಬಗ್ಗೆ ಅದೇ ಸಂತಸ. ಸಮರ್ಪಣ ಭಾವ. ಸೂರ್ಯದೇವನನ್ನು ಕುರಿತು ಆ ಫ್ರೆಂಚ್ ಕವಿ ಹೀಗೆ ಹಾಡಿದ:

'ಕಣ್ಣೀರಕಲೆಯಂತೆ ನಿನ್ನ ಕೀರ್ತಿ ಪರಿಶುದ್ಧವಾಗಿರಲಿ
ನಿನಗಾದ ವ್ರಣದಿಂದ ಹೊರಬರಲಿ ನಿನ್ನವಸಾನ ಸಂತಸವ ಕೊಡಲಿ
ನೀನೆದ್ದೆ ಏಳುತ್ತಿ. ನಿನ್ನಾಸೆ ನಿತ್ಯಸತ್ಯವಾಗಿರಲಿ.'

ತೋರು ತನ್ನನ್ನು ತಾನು ಸಾವಿಗೆ ಸಮರ್ಪಿಸಿಕೊಳ್ಳಲು ಕಾರಣ ಪುನರ್ಜನ್ಮದಲ್ಲಿ ಅವಳಿಗಿದ್ದ ನಂಬಿಕೆ. ವಿಕ್ಟೋರಿಯಾ ಮಹಾರಾಣಿಯ ಕಾಲದಲ್ಲಿದ್ದ ಅನೇಕರಿಗೆ ಈ ನಂಬಿಕೆಯಿತ್ತು. ಹಾರ್‌ಲೆಟ್ ಬ್ರಾಂಟೆ ದೇವರ ಆಣತಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕೆನ್ನುವ ಮಾತನ್ನು ಮತ್ತೆ ಮತ್ತೆ ಹೇಳಿದ್ದಾಳೆ. ಬಾಳಿನಲ್ಲೂ ಸಾಹಿತ್ಯದಲ್ಲೂ ಮೇಲಿಂದ ಮೇಲೆ ಒದಗುತ್ತಿದ್ದ ದುರಂತ ಘಟನೆಗಳ ಜೊತೆಗೇ ಒಂದು ರೀತಿಯ ಮಧುರವಾದ ಸಮರ್ಪಣ ಭಾವವೂ ಆ ಕಾಲದಲ್ಲಿ ಸ್ಪಷ್ಟವಾಗಿ ಮೂಡಿತ್ತು.

ಶೌಂಟ್‌ನನ್ನು ಭಾಷಾಂತರಿಸಿದಾಗ ಆತ ಆಧುನಿಕ ಫ್ರೆಂಚ್ ಕವಿಗಳಲ್ಲಿ ಅತ್ಯುತ್ತಮ ಕವಿ ಎನಿಸಿತು. ಈತ ಇಟಾಲಿಯನ್ ಭಾಷೆಯಲ್ಲೂ ಅನೇಕ ಕವನಗಳನ್ನು ಬರೆದಿದ್ದ. ತೋರು ಕಾಲವಾದಮೇಲೆ ಆಕೆಯ ಹಸ್ತಪ್ರತಿಗಳ ನಡುವೆ ಈ ಕವಿಯ ಕೆಲವೊಂದು ಉತ್ತಮ ಅಷ್ಟ ಪದ್ಯಗಳೂ ಅಪ್ರಕಟಿತ ಭಾಷಾಂತರಗಳೂ ಸಿಕ್ಕಿದುವು.

ವಿಕ್ಟರ್ ಹ್ಯೂಗೊ ತೋರುವಿನ ಅಚ್ಚುಮೆಚ್ಚಿನ ಕವಿ. ಈತನನ್ನು ಜೀವಂತ ಕವಿಗಳಲ್ಲಿ ಅತ್ಯಂತ ಶ್ರೇಷ್ಠನೆಂದು ತೋರು ಪರಿಗಣಿಸಿದ್ದಳು. ಮೇರಿಗೆ ಬರೆದೊಂದು ಪತ್ರದಲ್ಲಿ ತೋರು ಹೀಗೆ ಹೇಳಿದ್ದಾಳೆ: ಕೆಲವೊಮ್ಮೆ ವಿಕ್ಟರ್ ಹ್ಯೂಗೊನನ್ನು ಶಬ್ದಕೋಶವಿಲ್ಲದೆ ಅರ್ಥಮಾಡಿಕೊಳ್ಳುವುದು ಕಷ್ಟ. ಆತ ಉಪಯೋಗಿಸಿರುವ ಎಲ್ಲ ತಾಂತ್ರಿಕ ಪದಗಳೂ ಅರ್ಥವಾಗುವುದು ಕಷ್ಟ. ಆದರೆ ಆತನ ಫ್ರೆಂಚ್ ಎಷ್ಟು ಸೊಗಸಾಗಿದೆ!

ಸೌಲರಿಯನ್ನು ಕುರಿತ ಟಿಪ್ಪಣಿಗಳಲ್ಲಿ ತೋರು ಈತ ಬಹಳ ಜಾಗರೂಕತೆಯಿಂದ ಟಿಪ್ಪಣಿಗಳನ್ನು ವಿಸ್ತರಿಸುವುದರಲ್ಲಿ ನಿಪುಣ ಎಂದಿದ್ದಾಳೆ. ಪ್ರತಿಯೊಂದೂ ಒಂದು ಉತ್ತಮ ಜಾನಪದ ದೃಶ್ಯ. ಇಲ್ಲವೆ ಸೊಗಸಾದ ನಾಟಕ. ಸೌಲರಿಯನ್ನು 'ಫ್ರಾನ್ಸಿನ ಪೆಟ್ರಾರ್ಕ್' ಎಂದು ಕರೆದದ್ದು ಯೋಗ್ಯವಾಗಿಯೇ ಇದೆ.'

ಟಿಪ್ಪಣಿಗಳಲ್ಲಿ ಭಾಷಾಂತರ ಕವನಗಳ ಮೂಲ ಕವಿಗಳ ಬಗ್ಗೆ ಪುಟ್ಟ ಪುಟ್ಟ ಆತ್ಮೀಯ ವಿವರಗಳಿವೆ. ಬೆರಾಂಜೆಯ ವೊಕೇಷನ್ (ಪ್ರೇರಣೆ) ಥ್ಯಾಕರೆಗೆ ಅಚ್ಚುಮೆಚ್ಚಿನ ಪುಸ್ತಕ ಎಂಬುದು ಈಕೆಗೆ ಹೇಗೆ ತಿಳಿಯಿತೊ ಆಶ್ಚರ್ಯ. ಚಾರ್ಲ್ಸ್ ನೋಡಿಯರನ ಗದ್ಯ ಅವನ ಪದ್ಯಕ್ಕಿಂತ ಹೆಚ್ಚು ಸತ್ವಶಾಲಿಯಾಗಿತ್ತು. 'ಆತನ ಕತೆಗಳು ಸ್ವಾರಸ್ಯವಾಗಿದ್ದು ವಾಷಿಂಗ್‌ಟನ್ ಇರ್‌ವಿಂಗನ ನೆನಪು ತರುತ್ತದೆ. ಅಲೆಗ್ಸಾಂಡರ್ ಡ್ಯೂಮಾ ಈತನ ಆತ್ಮೀಯ ಗೆಳೆಯ. ಡ್ಯೂಮಾ ನೋಡಿಯರನ ಜೀವನ ಹಾಗೂ ಕೃತಿಗಳ ಬಗ್ಗೆ ವಿಸ್ತಾರವಾಗಿ ಬರೆದಿದ್ದ. ನೋಡಿಯರ್ ಇಂಗ್ಲೆಂಡಿನಲ್ಲೂ ಸ್ಕಾಟ್‌ಲೆಂಡಿನಲ್ಲೂ ಪ್ರವಾಸ

ಮಾಡಿದ ಅನಂತರ ಬರೆದು ಸರ್ ವಾಲ್ಟರ್ ಸ್ಕಾಟನಿಗೆ ಅರ್ಪಿಸಿದ ಕೆಲವು ಕವನಗಳು ಬ್ಲ್ಯಾಕ್‌ವುಡ್ ಮ್ಯಾಗಜೈನಿನ ಮೊದಲ ಸಂಚಿಕೆಗಳಲ್ಲಿವೆ.

ಆ್ಯಂಡ್ರೆ ಲುಮೇಯು ಹೆಚ್ಚು ಬರೆಯಲಿಲ್ಲ. ಆದರೆ ಆತ ಬರೆದದ್ದು ಮೆಚ್ಚು ಗೆಯಿತ್ತು. ಪೈರ್‌ದ್ಯುಪಾ 'ಜಡವರ ಸುಖ ದುಃಖಗಳ ಕವಿ'. ನಿಕೋಲಸ್ ಮಾರ್ಟಿನ್ ಜರ್ಮನಿಯ ಉಜ್ವಲ ಕಾವ್ಯ ಪರಂಪರೆಯನ್ನು ಮೈಗೂಡಿಸಿಕೊಂಡಿದ್ದ. ಆತ ಬಾನ್ ನಗರದಲ್ಲಿ ಹುಟ್ಟಿದ. ತಾಯಿ ಜರ್ಮನ್ ಮಹಿಳೆ. ಕಾರ್ಲ್ ಸಿಮ್‌ರಾಕನ ಸಹೋದರಿ. ಕಾರ್ಲ್ ಸಿಮ್‌ರಾಕ್ ವಿಶ್ವದ ಮೂರು ಮಹಾಕಾವ್ಯಗಳಲ್ಲೊಂದು ಎಂದು ಯಾವ ಕೃತಿಯನ್ನು ಪರಿಗಣಿಸಿದ್ದನೊ ಆ ನಿಬೆರೆಂಜನ್ ಕೃತಿಯ ಅನುವಾದಕ. ವಿಶ್ವದ ಮಹಾ ಕಾವ್ಯಗಳಲ್ಲಿ ಉಳಿದವೆರಡು ರಾಮಾಯಣ ಮಹಾಭಾರತಗಳೆಂದು ತೋರು ಹೆಮ್ಮೆ ಯಿಂದ ಹೇಳಿಕೊಂಡಿದ್ದಾಳೆ.

ತೋರು ಭಾಷಾಂತರಿಸಿದ ಅತ್ಯಂತ ಸುಂದರವಾದ ಕವನಗಳಲ್ಲಿ ಡಿ ಪಾರ್ನಿಯ 'ಯುವತಿಯ ಮರಣ' ಎಂಬ ಕವನವೂ ಒಂದು. ಅಕ್ಕನನ್ನು ಕಳೆದುಕೊಂಡ ತೋರು ಈ ಕವನದಲ್ಲಿ ತನ್ನ ದುಃಖದ ಅಭಿವ್ಯಕ್ತಿಯನ್ನು ಕಂಡಿರಬೇಕು.

'ಬಾಲಲೀಲೆಯ ದಿನ ಕಳೆದುರುಳಿ ಹೋದರೂ
ಇವಗಿಂತ ಮುಗ್ಧಳಿನ್ನೊಬ್ಬಳಿಲ್ಲ
ಅಂಗಾಂಗದಲ್ಲೆಲ್ಲ ನಯವಿನಯ ತುಂಬಿದರೂ
ಮನಸಂತು ಸ್ವಚ್ಛಂದ ಭ್ರಮೆಗಳೊಂದಿಲ್ಲ.

ನಾಲ್ಕಾರು ತಿಂಗಳಲಿ ಹತ್ತಾರು ದಿನಗಳಲಿ
ಪ್ರೇಮ ಕುಸುಮವು ಜನಿಸಿ ಅರಳುತಿತ್ತೇನೊ
ವಸಂತ ಋತುವಿನಲಿ ಸುಖದ ಹೊಂಬೆಳಕಿನಲಿ
ಪ್ರೇಮಗುಲಾಬಿ ತಾನಾಗಿ ಬಳುಕುತಿತ್ತೇನೊ

ಆದರಾದೇವ ವಿಧಿಸಿದ್ದೆ ಬೇರೆ
ಬಂದಿತ್ತು ಮೃದು ಮಧುರ ನಿದ್ದೆ ಅವಳಿಂಗೆ
ತಾರಾಕಾಶದ ಜೀವಿ ಇವಳೊಬ್ಬ ತಾರೆ
ಸೌಂದರ್ಯ ನಿಧಿ. ಈ ಬದುಕು ಸಲ್ಲ ಇವಳಿಂಗೆ

ಯೌವನದ ಹೊಸಿಲಿನಲ್ಲೆ ಮರಣ ಇವಳ ಪಾಡು
ಬಿಡಲಿಲ್ಲ ಹಿಂದೆ ಒಂದೂಗುರುತು ತೀರಿಕೊಂಡಳಿವಳು
ಕಾಡಿನ ಎಲೆಗುಂಪಲ ನಡುವೆ ಹಕ್ಕಿಗಳ ಹಾಡು
ಚೆಲುವಿಂದ ಮರೆಯಾಯ್ತು ಮಿನುಗಿನೊಂದೆಸಳು.

ಲಿಮಾರ್ಟಿನನ ಬಗ್ಗೆ ತೋರು ಹೀಗೆ ಹೇಳಿದ್ದಾಳೆ: 'ಪ್ರಿಯ ಓದುಗ ಆತನ ಜೀವನ ಹಾಗೂ ಪ್ರವಾಸಗಳ ಬಗ್ಗೆ ಆತನೇ ಬರೆದಿರುವುದನ್ನು ನೀನಿನ್ನೂ ಓದದಿದ್ದರೆ ಓದು,

ಆಮೇಲೆ ಸೂಚನೆಗಾಗಿ ನಮ್ಮನ್ನು ವಂದಿಸು. ಉಜ್ವಲ ಕಲ್ಪನೆಯಲ್ಲಿ, ಭವ್ಯತೆಯಲ್ಲಿ, ಶೈಲಿಯಲ್ಲಿ—'ಕವಿ'ಯನ್ನು ಸೃಷ್ಟಿಸುವ ಎಲ್ಲದರಲ್ಲಿ — ಶೀಲ ಸಂಪತ್ತೊಂದನ್ನು ಬಿಟ್ಟು— ಈ ಕವಿ ವಿಕ್ಟರ್ ಹ್ಯೂಗೋಗೆ ಮಣಿಯಲೇಬೇಕು.' ಇದಾದ ಮೇಲೆ ತೋರು ಹೀಗೆ ಬರೆದಿದ್ದಾಳೆ. 'ವಿಕ್ಟರ್ ಹ್ಯೂಗೊ ದೊಡ್ಡ ಕವಿಯಾದರೂ ಆತನ ಸಾಹಿತ್ಯದಲ್ಲಿನ ಅನೇಕ ಭಾಗಗಳನ್ನು ಇನ್ನೂ ರೀತಿನೀತಿಗಳು ಸ್ಫುಟಗೊಳ್ಳದ ಕಿರಿಯರ ಕೈಗಿಡಲಾಗುವುದಿಲ್ಲ. ಆದರೆ ಲಿಮಾರ್ಟಿನನನ್ನು ಯಾರ ಕೈಗೆ ಬೇಕಾದರೂ ಕೊಡಬಹುದು'. ಓದಬಹುದಾದ ಒಳ್ಳೆಯ ಸಾಹಿತ್ಯದ ಕಲ್ಪನೆಯಲ್ಲಿ ತೋರು ವಿಕ್ಟೋರಿಯಾ ರಾಣಿಯ ಕಾಲದ ಸಾಹಿತಿಯೇ ಆಗಿದ್ದಳು. ಆಕೆಯ ವಿಮರ್ಶೆಯಲ್ಲೂ, ಕಾವ್ಯದಲ್ಲೂ ಇರುವ ಈ 'ಮಡಿವಂತಿಕೆ' ಒಂದು 'ಕೊರತೆ'ಯಾಗಿ ಕಂಡರೂ ಜೇನ್ ಆಸ್ಟಿನ್ ಷಾರ್ಲೆಟ್ ಬ್ರಾಂಟೆ ಇವರನ್ನು ಮೆಚ್ಚುವಂತೆ ನಾವು ತೋರುವನ್ನೂ ಈ ದೃಷ್ಟಿಕೋನಕ್ಕಾಗಿ ಮೆಚ್ಚಬೇಕು. ಏಕೆಂದರೆ ಇದಿಲ್ಲದೆ ಇನ್ನಾವ ರೀತಿಯ ಪದ್ಯದಲ್ಲೇ ಆಗಲಿ ಗದ್ಯದಲ್ಲೇ ಆಗಲಿ ತಾನು ಮುಟ್ಟಿದ ಉನ್ನತ ಮಟ್ಟವನ್ನು ಮುಟ್ಟುತ್ತಿರಲಿಲ್ಲ. 'ದರಿದ್ರರು' ಕಾದಂಬರಿಯಲ್ಲಿ ಕೆಲವೊಂದು ದುಷ್ಟ ಭಾಗಗಳಿವೆ — ಎಲ್ಲ ಫ್ರೆಂಚ್ ಕಾದಂಬರಿಗಳಲ್ಲಿ ಇರುವಂತೆ ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ನಾವು ಆಕೆಯ ಸಂಪ್ರದಾಯಬದ್ಧ ನೈತಿಕ ಮೌಲ್ಯಶೋಧನಾ ರೀತಿಯನ್ನು ಕ್ಷಮಿಸಬೇಕು.

ಸೇಂಟ್ ಬಾವ್ ಫ್ರಾನ್ಸಿನ ಅತ್ಯಂತ ಶ್ರೇಷ್ಠ ವಿಮರ್ಶಕನೂ ಸಾಹಿತ್ಯಜ್ಞನೂ ಆದರೂ ಶ್ರೇಷ್ಠ ದರ್ಜೆಯ ಕವಿಯಲ್ಲ. ಹೀಗೆಂದ ಮಾತ್ರಕ್ಕೆ ಆತ ತೀರ ಕಳಪೆಯೆಂದಾಗಲಿ ಸಾಧಾರಣವೆಂದಾಗಲಿ ಅರ್ಥವಲ್ಲ. ಹ್ಯೂಗೊ ಲಿಮಾರ್ಟಿನ್ ಇವರ ಸಾಲಿನಲ್ಲಿ ಈತನಿಗೆ ಸ್ಥಳವಿಲ್ಲವಾದರೂ ಎರಡನೆ ದರ್ಜೆಯ ಉತ್ತಮ ಕವಿ ಈತ ಎಂದಿದ್ದಾಳೆ ತೋರು.

ಇದೇ ರೀತಿಯಾಗಿ ಸುಮಾರು ನಲವತ್ತು ಪುಟಗಳಷ್ಟು ಟಿಪ್ಪಣಿ ಬರೆದಿದ್ದಾಳೆ. ಇದು ನಿಷ್ಕಲ್ಮಷವಾದ ಮುಗ್ಧ ಹೃದಯದ ವಿಮರ್ಶಾತ್ಮಕ ಟಿಪ್ಪಣಿಗಳು. ಕೃತಿಯ ಕೊನೆಯ ಪುಟವನ್ನು ಓದುವವರೆಗೂ ಬಿಡಲು ಮನಸ್ಸಾಗುವುದಿಲ್ಲ. 'ಆಲ್‌ಫ್ರೆಡ್ ಡಿ ಮ್ಯೂಸೆಗೆ ಸತ್ವವಿದೆ, ತೇಜಸ್ಸಿದೆ. ಈತನ ನಿಸರ್ಗ ಪ್ರೇಮ ಕೆಲವೊಮ್ಮೆ ಕೃತಕವಾಗುತ್ತದೆ. ಬೈರನ್ ಕವಿಯಂತೆ ಆತ ಒಮ್ಮೊಮ್ಮೆ ವಿಲಕ್ಷಣ ವ್ಯಕ್ತಿಯಾಗಿಬಿಡುತ್ತಿದ್ದ. ಜ್ಯೂಲ್ ಲುಫೆವ ದುಮಿಯೆ ಹತ್ತೊಂಬತ್ತನೆಯ ಶತಮಾನದ ಫ್ರೆಂಚ್ ಕವಿಗಳಲ್ಲಿ ಅತ್ಯಂತ ಸತ್ವಯುತ ಕವಿ. ಈತನದು ಸತತ ಪ್ರಯತ್ನ. ಲಿಮಾರ್ಟಿನ್, ವಿಕ್ಟರ್ ಹ್ಯೂಗೊ ಮೊದಲಾದವರು ಹೊಡೆದಾಡಿ ಹೊಡೆದಾಡಿ ಹೊಸ ಕಾವ್ಯ ಪರಂಪರೆಯನ್ನು ಆರಂಭಿಸಿದಾಗ ಅವರೊಂದಿಗೆ ಹೋರಾಟದಲ್ಲಿ ಭಾಗಿಯಾದವರಲ್ಲಿ ಈತನೂ ಒಬ್ಬ. ಈ ಕಾವ್ಯ ಪರಂಪರೆ ಫ್ರಾನ್ಸಿನಲ್ಲಿ ಈಗ ಬಹಳ ಜನಪ್ರಿಯವಾಗಿದೆ.'

ತೋರು ಲಂಡನ್ನಿನಲ್ಲಿದ್ದಾಗ ಫ್ರಾನ್ಸಿನ ಕ್ರಾಂತಿ ಕವಿಗಳನ್ನು ಆಳವಾಗಿ ಅಭ್ಯಾಸ ಮಾಡಿದಳು. ರೊಮ್ಯಾಂಟಿಕ್ ಕವಿಗಳನ್ನು ಕಂಡರೆ ಅವಳಿಗೆ ತುಂಬ ಮೆಚ್ಚುಗೆ. ಅವರ ಆದರ್ಶಗಳೆನಿಸಿದ್ದ ಕಲ್ಪನಾ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಇವನ್ನು ತೋರು ಬಹಳವಾಗಿ ಮೆಚ್ಚಿದ್ದಳು. ಹದಿನೇಳು ಹದಿನೆಂಟನೆಯ ಶತಮಾನಗಳಲ್ಲಿ ಕಾವ್ಯರಚನೆಗಿದ್ದ ಇತಿಮಿತಿಗಳು ಹತ್ತೊಂಬತ್ತನೆಯ ಶತಮಾನದಲ್ಲಿರಲಿಲ್ಲ. ಹದಿನೇಳನೆಯ ಶತಮಾನದಲ್ಲಿ ಬಳಕೆ

ಯಲ್ಲಿದ್ದ ಪ್ರಾಚೀನ ಭಾಷಾ ಪದ್ಧತಿ, ಪ್ರಾಚೀನ ಪ್ರೌಢ ಪ್ರಯೋಗಗಳು ಇವು ರೋಮ್ ಹಾಗೂ ಗ್ರೀಸಿನ ಮಾದರಿಗಳ ಅನುಸರಣೆ ಎಂದು ತೋರು ತಿಳಿದಳು. ಆದರೆ ರೊಮ್ಯಾಂಟಿಕ್ ಕವಿಗಳ ಕಾವ್ಯ ಸರಳ ಸ್ಫುಟ, ಸುವ್ಯಕ್ತ ಹಾಗೂ ಋಜು. ಆದರೆ ತೋರು ಫ್ರೆಂಚ್ ನವೋದಯ ಕವಿಗಳನ್ನು ಪರಿತ್ಯಜಿಸಲಿಲ್ಲ. ಬೆರಾಂಜಿ, ಲೆಮಾರ್ಟಿನ್ ಇವರಿಗಿಂತ ಹಿಂದಿನ ಪಾರ್ನಿ ಮತ್ತು ಡಿ ಫ್ಲೋರಿಯನ್ ಇವರನ್ನೂ ಹದಿನೇಳನೆಯ ಶತ ಮಾನದ ಕಾರ್ನಿಲ್ ಹಾಗೂ ಸ್ಕರಾನ್ ಇವರನ್ನೂ ಕೊನೆಗೆ ಹದಿನಾರನೆಯ ಶತಮಾನದ ಕವಿಗಳನ್ನೂ ಕೂಡ ಅಭ್ಯಾಸಮಾಡಿದಳು. ಇವರ ಕಾವ್ಯ ಆಧುನಿಕ ಕಾವ್ಯಕ್ಕೆ ನಾಂದಿ. 'ಗೊಂಚಲು' ಸಂಕಲನದಲ್ಲಿ ಹ್ಯೂಗೊಗೆ ಅಗ್ರಸ್ಥಾನ. ಏಕೆಂದರೆ ಅದರಲ್ಲಿ ಹ್ಯೂಗೊನ ಮೂವತ್ತು ಕವನಗಳಿವೆ. ಹ್ಯೂಗೊನಂತರ ಮ್ಯೂಸೆ, ಕೌಂಟ್ ಹಾಗೂ ಜೋಸೆಫಿನ್ ಸೌಲರಿ. ಗೊಂಚಲು ಸಂಕಲನವನ್ನು ತಿರುವಿಹಾಕುತ್ತಿದ್ದರೆ ನಮ್ಮ ಮನಸ್ಸಿನೆದುರು ಒಂದು ಮುಖ್ಯ ಪ್ರಶ್ನೆ ಬಂದು ನಿಲ್ಲುತ್ತದೆ. ನೂರು ವರುಷಗಳ ಹಿಂದೆ ಅವಳ ಕಾವ್ಯಕ್ಕಿದ್ದ ಜನಪ್ರಿಯತೆ ಈಗಿದೆಯೆ? ವಿಕ್ಟೋರಿಯಾ ರಾಣಿಯ ಕಾಲದ ಈ ಪುಟ್ಟ ಹುಡುಗಿ ಭಾರತೀಯ ಸಾಮಾಜಿಕ ವಾತಾವರಣದಲ್ಲಿ ತಾನು ಎದುರಿಸಬೇಕಾದ ಎಲ್ಲ ಇತಿಮಿತಿ ಗಳನ್ನೂ ಎದುರಿಸಿದಳು. ತನ್ನ ಕಾಲದ ಅಡಚಣೆಗಳನ್ನು ಮೀರಿ ನಿಂತಳು. ಎಲಿಯಟ್ ಅನಂತರ ಬಂದ ನವ್ಯಕಾವ್ಯದ ಈ ಕಾಲದಲ್ಲೂ ತೋರುವಿನ ಕಾವ್ಯವನ್ನು ಓದಿ ಸಂತೋಷಿಸಬಹುದು. ಪ್ರಾಚೀನ ಪದಪ್ರಯೋಗಗಳು, ಪ್ರಾಚೀನ ಪ್ರಾಸ, ಛಂದೋಗತಿ, ಹಳೆಯ ಕಾಲದ ರೀತಿಯಲ್ಲಿರುವ ವಿರಾಮ ಚಿಹ್ನೆಗಳು, ಸಂಪ್ರದಾಯಬದ್ಧ ನೈತಿಕ ಮೌಲ್ಯಗಳು, ಆತ್ಮ, ದೇವರು ಇವನ್ನೇ ಪ್ರಧಾನವಾಗಿ ಉಳ್ಳ ಕಾವ್ಯವಸ್ತು ಇವನ್ನು ಬಿಟ್ಟರೆ ಇಂದಿಗೂ ತೋರುವಿಗೆ ಕಾವ್ಯಪ್ರಪಂಚಕ್ಕೆ ತನ್ನದೇ ಆದ ಸ್ಥಾನವಿರಲು ಸಾಧ್ಯ. ಏಕೆಂದರೆ ಎಲ್ಲ ಕಾಲದ ಎಲ್ಲ ಸತ್ವಶಾಲಿಗಳಂತೆ ತೋರು ತನ್ನ ಕಾವ್ಯದಲ್ಲಿ ಸತ್ಯಕ್ಕಾಗಿ ಹೋರಾಡಿದ್ದಾಳೆ. ಆದ್ದರಿಂದಲೇ ಕವಯಿತ್ರಿ ತೋರು ಚಿರಾಯು. ಭಾರತದ ಇನ್ನೊಬ್ಬ ಹಿರಿಯ ಕವಯಿತ್ರಿ ಸರೋಜಿನಿ ನಾಯುಡುವಿನಂತೆ ತೋರು ಬರಿಯ ಸೊಗಸಿನ ಭಾವ ಗೀತೆಗಳನ್ನು ಮಾತ್ರ ಬರೆಯುವುದರಲ್ಲಾಗಲಿ ಅಥವಾ ಕಿವಿಗಿಂಪಾದ ಪದ ಪ್ರಾಸಗಳನ್ನು ಹುಡುಕುವುದರಲ್ಲೇ ಆಗಲಿ ಕಾಲ ಕಳೆಯಲಿಲ್ಲ. ತೋರುವಿನ ಕವನಗಳು ಸಂಖ್ಯೆಯಲ್ಲಿ ಅಷ್ಟೇನೂ ಇಲ್ಲದೆ ಇದ್ದು ಅವಳ ಕಾವ್ಯ ಪ್ರಾಚೀನ ಶೈಲಿಯಲ್ಲಿದ್ದರೂ ಅವು ಶ್ರೀಮಂತ ವಾಗಿವೆ. ತೋರು ಇಂದೂ ಬದುಕಿದ್ದರೆ ಅವಳು ಇಂದಿಗೂ ಕಾವ್ಯ ರಚಿಸುತ್ತಿದ್ದಳು ಎಂದು ನಮಗನ್ನಿಸುತ್ತದೆ. ಇಲ್ಲದೆ ಹೋಗಿದ್ದರೆ ಅವಳಿಗೆ ಪಾರ್‌ನಾಸಿಯನ್ ಪಂಥ, ಬೋಡಲೇರ್, ಸೇಂಟ್ ಬಾವ್ ಮತ್ತಿತರರ ಕಾವ್ಯದಲ್ಲಿ ಆಸಕ್ತಿ ಇರಲು ಹೇಗೆ ಸಾಧ್ಯ ವಾಗುತ್ತಿತ್ತು? ತೋರು ಸ್ವಭಾವತಃ ಕ್ರಾಂತಿಕಾರಿ. ಸಂಪ್ರದಾಯ ವಿರೋಧಿ ಕವಿಗಳ ಮನೋಭಾವವೇ ಇವಳದ್ದೂ ಆಗಿತ್ತು. ಆದ್ದರಿಂದಲೇ ತೋರು ಬಹುಶಃ ಟಿ. ಎಸ್. ಎಲಿಯೆಟ್ಟನ ಪ್ರಪಂಚದ ಒಂದು ಭಾಗವಾಗಲೂ ಸಾಧ್ಯವಿತ್ತು. ಆದರೆ ಇಂದಿನ ಸ್ವೇಚ್ಛಾ ಪ್ರಪಂಚದ ಭಾಗವಾಗುವುದು ಮಾತ್ರ ಸಾಧ್ಯವಿರಲಿಲ್ಲ.

ಗೊಂಚಲಲ್ಲಿನ ಅತ್ಯಂತ ದುಃಖಕರ ಭಾಗವೆಂದರೆ ಅರುವನ್ನು ಕುರಿತ ಕಾವ್ಯ ಭಾಗ. ತೋರು ಹೀಗೆ ಬರೆದಿದ್ದಾಳೆ: 'ಆಕೆ ಬದುಕಿದ್ದರೆ ಆಕೆಯ ಸಹಾಯದಿಂದ ಈ ಪುಸ್ತಕ

ಇನ್ನೂ ಉತ್ತಮಗೊಳ್ಳುತ್ತಿತ್ತೇನೊ. ಅಲ್ಲದೆ ಆ ಕೃತಿಕಾರಳಿಗೆ ತಲೆತಗ್ಗಿಸಲು ಈಗಿರುವಷ್ಟು ಕಾರಣವಿರುತ್ತಿರಲಿಲ್ಲವೇನೊ. ಅಲ್ಲದೆ ಓದುಗರ ಸೈರಣೆಯನ್ನು ಈಗಿನಷ್ಟು ಕೋರಬೇಕಾಗಿರಲಿಲ್ಲವೇನೊ.'

೧೪. ಕಾದಂಬರಿಗಳು

ತೋರುವಿನ ಮರಣಾನಂತರ ಗೋವಿಂದ ಚಂದ್ರನಿಗೆ ಆಕೆಯ ಅಪ್ರಕಟಿತ ಹಸ್ತಪ್ರತಿಗಳ ಜೊತೆಯಲ್ಲಿ ಒಂದು ಫ್ರೆಂಚ್ ಕಾದಂಬರಿ ಸಿಕ್ಕಿತು. 1878 ರಲ್ಲಿ ಆತ ಅದನ್ನು ಕ್ಲಾರಿಸ್ ಬಾದರ್‌ಗೆ ಕಳುಹಿಸಿದ. 'ವೃದ್ಧ ತಂದೆ ಪ್ರತಿ ಮಾಡಿ ಕಳುಹಿಸಿದ ಈ ಕಾದಂಬರಿಯನ್ನು ನಾನು ಭಾರವಾದ ಹೃದಯದಿಂದಲೇ ಸ್ವೀಕರಿಸಿದೆ' ಎಂದು ಆ ಫ್ರೆಂಚ್ ಬರಹಗಾರ್ತಿ ಹೇಳಿದ್ದಾಳೆ. 'ನನ್ನ ಕೈ ನಡುಗುತ್ತಿದೆ—ನಿಧಾನವಾಗಿ ಬರೆಯಬೇಕು' ಎಂದು ಗೋವಿಂದ ಬರೆದಿದ್ದನಾದರೂ ಆ ಸುಂದರ ಸತ್ವಯುತ ಬರವಣಿಗೆಯನ್ನು ನೋಡಿದಾಗ ಅದನ್ನು ನಡುಗುವ ಕೈಗಳಿಂದ ಬರೆಯಲಾಗಿದೆ ಎನ್ನಲಾಗುವುದಿಲ್ಲ. ತನ್ನ ಮನಸ್ಸಿನ ಭ್ರಾಂತಿಯ ಬಲದಿಂದ ಈ ಕಪಿ-ಸಿಪಿ ಕೆಲಸವನ್ನು ಮಾಡುವ ಚೈತನ್ಯವನ್ನು ಪಡೆದಿದ್ದಾನೆ. 'ನಾನು ಬರೆಯುವಾಗ, ಅವಳೊಂದಿಗೆ ಮಾತನಾಡುತ್ತಿರುವೆನೇನೊ ಎನಿಸುತ್ತದೆ' ಎಂದು ಆತ ಬರೆದಿದ್ದ.

ಕಾದಂಬರಿಗೆ ಕ್ಲಾರಿಸ್ ಮುನ್ನುಡಿಯನ್ನು ಬರೆದಳು. ಅಲ್ಲದೆ ಅದರ ಪ್ರಕಟಣೆಗೂ ಅನುವು ಮಾಡಿಕೊಟ್ಟಳು. ತೋರುವನ್ನು ತಾನೆಂದೂ ನೋಡದಿದ್ದ ಆ ಫ್ರೆಂಚ್ ಗೆಳತಿ ಬರೆದಿರುವ ಮುನ್ನುಡಿ ಪುಟ್ಟ ತೋರುವಿನ ಬಗೆಗೆ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. 'ಆಕೆ ಬರಿಯ ಭಾಷಾಂತರಗಳಲ್ಲೇ ತನ್ನ ಬರವಣಿಗೆಯನ್ನು ಮುಕ್ತಾಯ ಮಾಡಿಬಿಡಲಿಲ್ಲ. ತಾನೇ ಸ್ವತಃ ಫ್ರೆಂಚ್ ಬರಹಗಾರ್ತಿಯಾಗಲು ಬಯಸಿದಳು. ಆಕೆ ಬರೆದ ಫ್ರೆಂಚ್ ಕಾದಂಬರಿಯನ್ನು ನಾವಿಂದು ಪ್ರಕಟಿಸುತ್ತಿದ್ದೇವೆ. ತೋರು ಫ್ರೆಂಚ್ ಭಾಷೆ ಸಾಹಿತ್ಯಗಳ ಪ್ರಭಾವಕ್ಕೆ ಮಾತ್ರ ಒಳಗಾಗಲಿಲ್ಲ. ಆದರೆ ಫ್ರಾನ್ಸ್ ದೇಶವನ್ನೇ ಆಕೆ ಪ್ರೀತಿಸಿದಳು. ಅಲ್ಲದೆ ಫ್ರಾನ್ಸ್ ಸಂಕಟದಲ್ಲಿದ್ದಾಗ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದಳು.

ಹತ್ತೊಂಬತ್ತನೆಯ ಶತಮಾನದ ಅರವತ್ತರ ಕಾಲ. ಈ ಕಾಲದ ಫ್ರೆಂಚ್ ಸಾಮಾಜಿಕ ಜೀವನದ ಚಿತ್ರಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಅಲ್ಲದೆ ಕಾದಂಬರಿಗಾರ್ತಿಯ ಅಸಾಧಾರಣ ಪ್ರತಿಭೆ ಪಾಂಡಿತ್ಯಗಳ ನಿದರ್ಶನವಾಗಿದೆ ಈ ಕಾದಂಬರಿ. ಒಬ್ಬ ಡಚ್ ವಿಮರ್ಶಕ ಹೀಗೆ ಹೇಳಿದ್ದಾನೆ: 'ಈ ಪುಸ್ತಕದ ಕರ್ತೃ ವಿದೇಶದವಳು ಎಂದು ಹೇಳುವ ಯಾವ ಅಂಶವೂ ಇಲ್ಲಿಲ್ಲ. ಆಕೆಯ ಜೀವನ ಚರಿತ್ರೆಯನ್ನು ಬರೆದ ಹರಿಹರದಾಸ್ ಹೆಚ್ಚು ಭಾವಪೂರ್ಣವಾಗಿ ಬರೆದಿದ್ದಾನೆ. ವಿದೇಶದ ಭಾಷೆಯೊಂದರಲ್ಲಿ

ಇಷ್ಟು ಅಲ್ಪಕಾಲದಲ್ಲೇ ಇಷ್ಟೊಂದು ಪ್ರಭುತ್ವ ಪಡೆದು ಆ ಭಾಷೆಯಲ್ಲಿ ಸಿದ್ಧ ಶೈಲಿಯಲ್ಲಿ ಒಂದು ಇಡೀ ಕೃತಿಯುನ್ನು ರಚಿಸಿರುವ ನಿದರ್ಶನ ಸಾಹಿತ್ಯ ಚರಿತ್ರೆಯಲ್ಲಿ ಬೇರೊಂದಿದೆಯೆ ಎಂದು ಪ್ರಶ್ನಿಸಬೇಕಾಗಿದೆ.'

ಫ್ರೆಂಚ್ ಕ್ಯಾಥೊಲಿಕ್ ಹುಡುಗಿಯೊಬ್ಬಳು ದಿನಚರಿಯಿಂದ ಆಯ್ದ ಭಾಗಗಳಿರುವ ಈ ಕಾದಂಬರಿ ಮಾರ್ಗರೆಟ್ ಎಂಬ ಕನ್ಯೆ ತಾನಿರುವ ಕಾನ್‌ವೆಂಟನ್ನು ಬಿಟ್ಟು ಬಂದಾಗಿನಿಂದ ಅವಳ ಅಕಾಲ ಮರಣದವರೆಗಿನ ಸುಮಾರು ಒಂದೂವರೆವರುಷ ಕಾಲದ ಚಿತ್ರಣವಾಗಿದೆ. ಈ ಪಾತ್ರದ ಅನಾರೋಗ್ಯ ಹಾಗೂ ಮರಣ ಕಾದಂಬರಿಯ ಹಿನ್ನುಡಿ. ದುಃಖದ ಯಾವ ಛಾಯೆಯೂ ಕವಿಯದ ಪುಟ್ಟ ಹುಡುಗಿಯೊಬ್ಬಳ ಮುದ್ದು ಮಾತಿನಿಂದ ಆರಂಭವಾಗುತ್ತದೆ ಕಾದಂಬರಿ. ಬ್ರಿಟನಿಯಲ್ಲಿ ನೆಲೆಸಿರುವ ನಿವೃತ್ತ ಸೈನ್ಯಾಧಿಕಾರಿಯೊಬ್ಬನ ಏಕಮಾತ್ರ ಪುತ್ರಿ ಇವಳು. ಅವಳು ತನ್ನ ಹದಿನೈದನೆ ಹುಟ್ಟು ಹಬ್ಬವನ್ನು ಆಚರಿಸಲು ಮನೆಗೆ ಹಿಂದಿರುಗಿದಳು. ಅಲ್ಲಿ ಒಬ್ಬ ಶ್ರೀಮಂತ ವಿಧವೆಯನ್ನೂ ಅವಳ ಇಬ್ಬರು ಪುತ್ರರನ್ನೂ ಸಂಧಿಸಿದಳು.

ಮೂರು ದಿನವಾದಮೇಲೆ ಒಬ್ಬ ಯುವಕ ಅಧಿಕಾರಿ ಅವರ ಮನೆಗೆ ಬಂದ. ಅವಳ ತಂದೆ ತಾಯಿಗಳು ತಮ್ಮ ಮಗಳು ಆತನನ್ನು ಮದುವೆಯಾಗಬೇಕೆಂದು ಬಯಸಿದರು, ಆದರೆ ಅವಳು ಶ್ರೀಮಂತಳ ಪುತ್ರ ಕೌಂಟ್ ಡುನ್ವನನ್ನು ಪ್ರೀತಿಸುವುದಾಗಿ ಹೇಳಿದಳು. ಇವರಿಬ್ಬರ ವಿವಾಹಕ್ಕೆ ಆ ಶ್ರೀಮಂತಳೂ ಒಪ್ಪಿಗೆ ಕೊಟ್ಟಳು. ಆದರೆ ಶ್ರೀಮಂತರ ಆ ಇಬ್ಬರು ಪುತ್ರರೂ ಮಾರ್ಗರೆಟ್ ಅವರ ಬಳಿಗೆ ಕಳುಹಿಸಿದ್ದ ಹಳ್ಳಿಯ ಚೆಲುವೆ ಜೆನಟಳನ್ನು ಪ್ರೀತಿಸಿದರು. ಡುನ್ವಾ ಅಸಹನೆಯಿಂದ ತನ್ನ ಸಹೋದರನೊಂದಿಗೆ ಹೋರಾಡಿ ಅವನನ್ನು ಕೊಂದ. ಇದರಿಂದಾಗಿ ಅವನಿಗೆ ಕಠಿಣ ಶಿಕ್ಷೆಯಾಯಿತು. ಅವನು ಆತ್ಮ ಹತ್ಯೆ ಮಾಡಿಕೊಂಡ. ಶ್ರೀಮಂತಗೆ ಹುಚ್ಚು ಹಿಡಿಯಿತು.

ಮಾರ್ಗರೆಟ್ ಕಾಯಿಲೆ ಬಿದ್ದಳು. ಅಲ್ಲದೆ ತನ್ನ ತಂದೆತಾಯಿಯರನ್ನು ಸಮಾಧಾನಗೊಳಿಸಲು ಲೂಯಿಯನ್ನು ವಿವಾಹವಾದಳು. ತಾನು ಅಕಾಲ ಮರಣಕ್ಕೆ ತುತ್ತಾಗುತ್ತೇನೆ ಎನಿಸಿತು ಅವಳಿಗೆ. ಆದರೆ ವಿಧಿಗೆ ತಲೆಬಾಗಿದಳು. ಕೆಲವು ಕಾಲ ದಂಪತಿಗಳಿಬ್ಬರೂ ನೀಸ್ ಪಟ್ಟಣದಲ್ಲಿ ಸಂತೋಷದಿಂದಿದ್ದರು. ಹೆರಿಗೆಗೆ ತೌರು ಮನೆಗೆ ಬಂದ ಮಾರ್ಗರೆಟ್ ಮಗನನ್ನು ಹೆತ್ತು ಕಾಲವಾದಳು. 'ಕಥೆ ಕಠೋರವಾಗಿದೆ. ಆದರೆ ಕೇಳಲು ಅಸಾಧ್ಯವಾಗುವಷ್ಟು ಘೋರವಾಗಿಲ್ಲ. ಅಲ್ಲದೆ ತೀರ ರೌದ್ರವಾದ ವಿವರಗಳಿಲ್ಲ. ಭಾಷೆ ಭಾವ ಎಲ್ಲವೂ ಉದ್ರೇಕಪೂರ್ಣವಾಗಿದ್ದರೂ ಇಡೀ ಕಾದಂಬರಿ ಮೇಲ್ಮಟ್ಟದಲ್ಲಿದೆ. ಪಾತ್ರಗಳು ಸ್ಫುಟವಾಗಿವೆ. ಮಾರ್ಗರೆಟ್ ತನ್ನ ವಯಸ್ಸಿಗೆ ಪ್ರೌಢವಾಗಿಯೇ ಕಂಡು ವಾಸ್ತವಿಕತೆಗೆ ಸ್ವಲ್ಪ ದೂರವಾಗಿದ್ದಾಳೆ. ವಿಧಿ ಸಂಕಲ್ಪದಲ್ಲಿ ಅವಳ ನಂಬಿಕೆ. ಅವಳ ನೋಟ, ಅವಳು ಬದುಕಿ ಬಾಳಿದ ವಾತಾವರಣ ಇವೆಲ್ಲವೂ ತೋರುವಿನ ಜೀವನದ ಅನುಭವವನ್ನೇ ಬಹುಮಟ್ಟಿಗೆ ಹೋಲುತ್ತವೆ. ವೆರೋನಿಕಳ ಚಿತ್ರ ಅರುವನ್ನು ಹೋಲುತ್ತದೆ. ಈ ಕಾರಣದಿಂದ ವಸ್ತು, ವಿವರ ಓದುಗನಲ್ಲಿ ಆಸಕ್ತಿಯನ್ನು ಉಂಟುಮಾಡುತ್ತವೆ. ಈ ಕಾದಂಬರಿಯ ಬಗ್ಗೆ ಬಂದ ವಿಮರ್ಶೆಗಳು ಮೆಚ್ಚುಗೆಯನ್ನೇ ಸೂಚಿಸಿದವು. ಏಡ್ರಿಯನ್ ಡೆಸ್ಪೆರ್ಚೆ 'ಈ ಕೃತಿಯಲ್ಲಿ ಪುಟ್ಟ ಹುಡುಗಿಯೊಬ್ಬಳ ಹೃದಯದ ಶ್ರೀಮಂತಿಕೆ

ಯನ್ನೆಲ್ಲ ಧಾರೆಯೆರೆಯಲಾಗಿದೆ' ಎಂದಿದ್ದಾನೆ. ಗಾರ್‌ಸಿನ್ ಡಿ. ಟಾಸಿಗೆ ಕ್ಲಾರಿಸಳ ಮೂಲಕ ತೋರುವಿನ ಪರಿಚಯವಾಗಿತ್ತು. ಈತನೂ ತೋರುವನ್ನು ತುಂಬ ಮೆಚ್ಚಿಕೊಂಡಿದ್ದಾನೆ.

ಬಂಗಾಳಿಯಲ್ಲಿ ಈ ಕಾದಂಬರಿಯ ಎರಡು ಭಾಷಾಂತರಗಳಿವೆ. ಒಂದು ರಾಜ್‌ಕುಮಾರ್ ಮುಖರ್ಜಿ ಮಾಡಿರುವ ಅನುವಾದ. ಇನ್ನೊಂದು ಪೃಥ್ವೀಂದ್ರನಾಥ ಮುಖ್ಯೋಪಾಧ್ಯಾಯ ಮಾಡಿರುವ ಅನುವಾದ. 'ಕವಿ ತೋರುದತ್' ಎಂಬ ಗ್ರಂಥದಲ್ಲಿ ರಾಜ್‌ಕುಮಾರ್ ಮುಖರ್ಜಿ ಅವಳ ಹಾಗೂ ಅವಳ ಕಾದಂಬರಿಯ ಬಗ್ಗೆ ಮಾಡಿರುವ ವಿಮರ್ಶೆ ಸ್ವಾರಸ್ಯಪೂರ್ಣವಾಗಿದೆ. ತೋರುವಿನ ಬರವಣಿಗೆಯ ರೀತಿ ಮೂಲಭೂತವಾಗಿ ಭಾರತೀಯ ಎಂಬ ಭಾವನೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ತೋರು ತಾನು ಬದುಕಿ ಬಾಳಿದ ಎಲ್ಲ ವಾತಾವರಣಕ್ಕೂ ಸಹಜವಾಗಿ ಹೊಂದಿಕೊಂಡಿದ್ದರಿಂದಲೇ ಅವಳು ಭಾರತ ಇಂಗ್ಲೆಂಡ್ ಎರಡು ಕಡೆಯಲ್ಲೂ ಮೆಚ್ಚುಗೆ ಪಡೆದಳು. ಆಶ್ಚರ್ಯದ ಸಂಗತಿಯೆಂದರೆ ಅನೇಕ ಭಾರತೀಯರು ಆಂಗ್ಲ ಭಾಷೆಯಲ್ಲಿ ಬರೆಯಲಾರಂಭಿಸಿದರೂ ಬಂಗಾಳದ ಈ ಹುಡುಗಿ ಫ್ರೆಂಚ್ ಭಾಷೆಯಲ್ಲಿ ಕಾದಂಬರಿ ರಚಿಸಿದಳು. ಕಥೆಯ ವಸ್ತು ಸಾಧಾರಣ ವಸ್ತುವಿಗಿಂತ ಬೇರೆಯಾಗಿರುವುದರಿಂದ ಈ ವಸ್ತುವಿನ ಘಟನೆಗಳನ್ನು ತೋರು ಪ್ರತ್ಯಕ್ಷವಾಗಿ ನೋಡಿರಬೇಕು. ಜೇಮ್ಸ್ ಡಾರ್‌ಮೆಸ್‌ಟೆಟರನ ಪ್ರಕಾರ ತೋರು ವರ್ಣಿಸಿರುವ ಘಟನೆಗಳು ಇಂಗ್ಲೆಂಡಿನ ಒಂದು ಕುಟುಂಬದಲ್ಲಿ ಸತ್ಯವಾಗಿ ನಡೆದವು. ಅಣ್ಣತಮ್ಮಂದಿರಿಬ್ಬರು ಒಬ್ಬಳೇ ಹುಡುಗಿಯನ್ನು ಪ್ರೀತಿಸಿ ಉಂಟಾದ ವಿರಸದಿಂದ ಒಬ್ಬ ಇನ್ನೊಬ್ಬನನ್ನು ಕೊಂದಿದ್ದ. ಈ ಘಟನೆ ನಡೆದಾಗ ತೋರು ಇಂಗ್ಲೆಂಡಿನಲ್ಲಿ ಇದ್ದಳೋ ಇಲ್ಲವೋ ತಿಳಿಯದು. ಅಕ್ಕತಂಗಿಯರಿಬ್ಬರಲ್ಲಿ ಒಬ್ಬಳು ಕಾದಂಬರಿಯನ್ನು ರಚಿಸುವುದೆಂದೂ ಇನ್ನೊಬ್ಬಳು ಅದಕ್ಕೆ ಚಿತ್ರಗಳನ್ನು ಬರೆಯುವುದೆಂದೂ ತೀರ್ಮಾನವಾಯಿತು. ಆದರೆ ಇದರಲ್ಲಿ ಚಿತ್ರಗಳಿಲ್ಲ. ಬಹುಶಃ ಅರುವಿನ ಮರಣಾನಂತರ ತೋರು ಕೃತಿಯನ್ನು ರಚಿಸಿರಬೇಕು. ಇಂಗ್ಲೆಂಡಿನಲ್ಲಿದ್ದಾಗ ತೋರು ಫ್ರೆಂಚ್ ಭಾಷೆಯಲ್ಲಿ ಅಷ್ಟು ಪ್ರಭುತ್ವವನ್ನು ಪಡೆದಿದ್ದಳೋ ಇಲ್ಲವೋ ಎಂಬ ಸಂಶಯವನ್ನು ಮುಖರ್ಜಿ ವ್ಯಕ್ತಪಡಿಸಿದ್ದಾರೆ. ಆದರೆ ಆಗ ತೋರು ಫ್ರೆಂಚ್ ಭಾಷೆಯನ್ನು ಆಳವಾಗಿ ಅಭ್ಯಾಸಮಾಡುತ್ತಿದ್ದಳು. ಜೇಮ್ಸ್ ಡಾರ್‌ಮೆಸ್ ಟೆಟರನ ಪ್ರಕಾರ ಈ ಕೃತಿಯನ್ನು ತೋರು 1874 ರಲ್ಲಿ ತನಗೆ ಸುಮಾರು ಹದಿನೆಂಟು ವರುಷವಾಗಿದ್ದಾಗ ಬರೆದಳು. ಅದು ಅರು ತೀರಿದ ವರುಷ. ಆದರೆ ಈ ಕಾದಂಬರಿಯ ಬಗ್ಗೆ ತೋರು ಒಂದು ಸಲವಾದರೂ ಮೇರಿಗೆ ಹೇಳದೆ ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ತನ್ನ ತಾಯಿ ಹೇಳುತ್ತಿದ್ದ ಕಥೆಗಳನ್ನು ಕೇಳಿದಮೇಲೆ ಈ ವಸ್ತುವಿನ ಬಗೆಗೆ ಕಲ್ಪನೆ ಬಂದಿರಬಹುದು. ಮುಖರ್ಜಿಯವರು ಹೇಳಿರುವಂತೆ ತಿಲೋತ್ತಮೆಯನ್ನು ಪ್ರೀತಿಸಿದ ಸುಂದ ಉಪಸುಂದರು ಹೊಡೆದಾಡುತ್ತ ಮಡಿದ ಕಥೆ ಕಾದಂಬರಿಗೆ ಪ್ರೇರಣೆಯಾಗಿರಬಹುದು.

ಅಕಾಲ ಮರಣದ ವಿಷಯ ತೋರುವಿನ ಮನಸ್ಸನ್ನು ಆಕ್ರಮಿಸಿಬಿಟ್ಟಿರುವಂತೆ ಕಾಣುತ್ತದೆ. ಆಕೆ ತನ್ನ ಕಾದಂಬರಿಯನ್ನು ರಹಸ್ಯವಾಗಿ ಬರೆದಳು. ಕಾರಣ ತನ್ನ ಕುಟುಂಬದ ದುರಂತ ಕಥೆಯನ್ನು ಇತರರ ಮುಂದೆ ಹೇಳಿಕೊಂಡು ವ್ಯಥೆಪಡಲು ಅವಳು

ಸಿದ್ಧಳಾಗಿರಲಿಲ್ಲ. ಆದರೆ ಮಾರ್ಗರೆಟಳ ಮೂಲಕ ಅವಳು ತನ್ನಲ್ಲಿ ಬತ್ತಿಹೋಗುತ್ತಿದ್ದ ಕೆಲವೊಂದು ಭಾವನೆಗಳನ್ನು ಹೊರಪಡಿಸುವ ಅವಕಾಶವನ್ನು ಕಲ್ಪಿಸಿಕೊಂಡಳು. ಕಾದಂಬರಿಯಲ್ಲಿ ಓದುಗನನ್ನು ಸೆರೆಹಿಡಿಯುವುದು ಕಾದಂಬರಿಯಲ್ಲಿನ ಉದ್ರೇಕವಾಗಲಿ, ವಸ್ತುವಾಗಲಿ ಅಲ್ಲ. ಓದುಗರ ಗಮನ ಸೆಳೆಯುವುದು ಮಾರ್ಗರೆಟ್ ಜೀವನದಲ್ಲಿ ನಡೆದು ಬಂದ ದಾರಿ, ಅವಳ ಅಕಾಲಮರಣ. ತೋರು ಅಕಾಲಮರಣಕ್ಕೀಡಾದ ಸುದ್ದಿ ಹರಡಿದ ಮೇಲೆ ಈ ಕೃತಿ ಪ್ರಕಟವಾಯಿತು.

ತಾಯಾಗಬೇಕೆಂಬ ಮಾರ್ಗರೆಟಳ ಹಂಬಲ ತಾನೂ ತಾಯಾಗುವಷ್ಟು ಶಕ್ತಿವಂತಳೂ ಆರೋಗ್ಯವಂತಳೂ ಆಗಬೇಕೆಂಬ ತೋರುವಿನ ಹಂಬಲವೇ ಆಗಿರಲು ಸಾಕು. ತೋರು ಯಾರನ್ನೇ ಆಗಲಿ ಪ್ರೀತಿಸಿದ ವಿಷಯವಾಗಲಿ, ಯಾರನ್ನಾಗಲಿ ವಿವಾಹವಾಗಬೇಕೆಂದಿದ್ದ ವಿಷಯವಾಗಲಿ ಯಾರಿಗೂ ತಿಳಿದಿಲ್ಲ. ಸಾಮಾನ್ಯವಾಗಿ ಎಲ್ಲ ಸ್ತ್ರೀಯರೂ ಸಹಜವಾಗಿ ಬಯಸುವಂತೆ ಪತಿಯ ಪ್ರೇಮವನ್ನೂ ಮಕ್ಕಳ ಒಲುಮೆಯನ್ನೂ ಅವಳೂ ಬಯಸಿರಬೇಕು.

ಜೇಮ್ಸ್ ಡಾರ್‌ಮೆಸ್‌ಟೆಟರ್, ಎಡ್‌ಮಂಡ್ ಗಾಸ್ ಇಬ್ಬರೂ ಅವಳನ್ನು ಹಿರಿಯ ಸಮಕಾಲೀನ ಕಾದಂಬರಿಗಾರ್ತಿಯರೊಂದಿಗೆ ಹೋಲಿಸಿದ್ದಾರೆ. ಶ್ರೀಮತಿ ಗ್ಯಾಸ್‌ಕೆಲಳ ಕೃತಿ 'ಷಾರ್‌ಲೆಟ್ ಬ್ರಾಂಟೆಯ ಜೀವನ ಚರಿತ್ರೆ'ಯಲ್ಲಿ ಚಿತ್ರಿತವಾಗಿರುವ ಬ್ರಾಂಟೆ ಸಹೋದರಿಯರ ದುರಂತ ಜೀವನ ತೋರುವಿನ ಮನ ಕಲಕಿತು. ಮೇರಿಗೆ ಬರೆದ ಕಾಗದದಲ್ಲಿ ಹೀಗೆ ಹೇಳಿದ್ದಾಳೆ: 'ಆ ಹಳೆಯ ಪಾದ್ರಿಯ ಮನೆಯಲ್ಲಿ, ಯಾರ್ಕ್‌ಷೈರಿನ ಆ ಘೋರ ಕುರುಚಲು ಭೂಮಿಯ ಮಧ್ಯೆ ಅಷ್ಟೊಂದು ಪ್ರತಿಭಾಶಾಲಿಗಳಾದ ಆ ಮೂವರೂ ಏಕಾಂಗಿಗಳಾಗಿದ್ದುದನ್ನು ನೆನೆಸಿಕೊಂಡರೆ . . .' ಷಾರ್‌ಲೆಟಳ ಇಬ್ಬರು ಅಕ್ಕಂದಿರೂ ಕ್ಷಯರೋಗದಿಂದ ಕಾಲವಾಗಿದ್ದರು. ಬ್ರಾಂಟೆ ಸಹೋದರಿಯರ ನಾಯಕಿಯರನ್ನು ಮಾರ್ಗರೆಟ್ ಎಷ್ಟು ಹೋಲುತ್ತಾಳೆ! ವಿಕ್ಟೋರಿಯಾ ರಾಣಿಯ ಕಾಲದ ನಾಯಕಿಯರ ಮೃದುವಾದ ರೀತಿನೀತಿಗಳು, ವಿಧಿ ಬರಹದಲ್ಲಿ ಅವರಿಗಿದ್ದ ನಂಬಿಕೆ ಇವನ್ನು ತೋರುವಿನ ಇಡೀ ಪುಸ್ತಕದಲ್ಲಿ ಕಾಣಬಹುದು. ಜೇನ್‌ಐರ್ ಪಾತ್ರವನ್ನಾಗಲಿ, ವಿಲೆಟ್ ಕಾದಂಬರಿಯ ಲ್ಯೂಸಿಯನ್ನಾಗಲಿ ತೋರು ಚಿತ್ರಿಸಬಹುದಾಗಿತ್ತು. ತೋರು ಫ್ರೆಂಚ್ ಭಾಷೆಯಲ್ಲಿ ತನ್ನ ಕಾದಂಬರಿಯನ್ನು ರಚಿಸಿದ್ದರೂ ತೋರುವಿನ ಶೈಲಿಗೂ ಜೇನ್ ಆಸ್ಟಿನ್, ಜಾರ್ಜ್ ಎಲಿಯಟ್ ಇವರ ಶೈಲಿಗೂ ಇರುವ ಹೋಲಿಕೆ ಅಸಾಧಾರಣ. ಬ್ರಾಂಟೆ ಸಹೋದರಿಯರ ಬಗ್ಗೆ ಈ ಕೆಳಗಿನ ವಾಕ್ಯಗಳನ್ನು ಬರೆದಾಗ ತೋರು ತನ್ನ ಅಂತ್ಯವನ್ನು ತಾನೇ ಮುನ್ಸೂಚಿಸಿದಂತಿತ್ತು. 'ತನ್ನ ಮಕ್ಕಳನ್ನೆಲ್ಲರನ್ನೂ ಒಬ್ಬರಾದ ಮೇಲೊಬ್ಬರಂತೆ ಕಳೆದುಕೊಂಡು ಯಾರ್ಕ್‌ಷೈರಿನ ಆ ಮನೆಯಲ್ಲಿ ಒಬ್ಬಂಟಿಗನಾಗಿ ಬದುಕಿದ ಆ ವೃದ್ಧ ತಂದೆಯ ಸ್ಥಿತಿ ಎಷ್ಟು ಚಿಂತಾಜನಕವಾಗಿರಬೇಡ. ಸತ್ಯವಾಗಿ ನಮ್ಮ ದಿನನಿತ್ಯದ ಜೀವನದಲ್ಲಾಗುವ ದುರಂತಗಳಿಗಿಂತ ಹೆಚ್ಚಿನ ದುರಂತ ಸಾಹಿತ್ಯದಲ್ಲಿಲ್ಲ.'

ತೋರುವಿನ ಎರಡನೆಯ ಕಾದಂಬರಿ 'ಬಿಯಾಂಕ ಅಥವಾ ಸ್ಪ್ಯಾನಿಷ್ ಯುವತಿ' ಒಂದು ಅಪೂರ್ಣ ಕೃತಿ. ತೋರುವಿನ ಮರಣಾನಂತರ ಗೋವಿಂದ ಚಂದ್ರನಿಗೆ ತೋರುವಿನ ಹಸ್ತಪ್ರತಿಗಳ ನಡುವೆ ಸುಮಾರು ಎಂಟು ಅಧ್ಯಾಯಗಳು ದೊರೆತವು. ಈ ಎಂಟು

ಅಧ್ಯಾಯಗಳು 1878 ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ಬೆಂಗಾಲ್ ಮ್ಯಾಗಜೈನಿನಲ್ಲಿ ಪ್ರಕಟವಾದವು. ಅದಕ್ಕೆ ಗೋವಿಂದ ಚಂದ್ರ ಅಡಿಟಿಪ್ಪಣಿಯೊಂದನ್ನು ಸೇರಿಸಿದ. ・ಈ ಕಥೆಯನ್ನು ಇಲ್ಲಿಯವರೆಗೂ ಹೆಣೆದ ಆ ಕೋಮಲವಾದ ಕೈ—ಕುಮಾರಿ ತೋರುದತ್‌ಳ ಕೈ ಇಲ್ಲಿಗೆ ನಿಂತುಹೋಯಿತು. ಅನಾರೋಗ್ಯದ ನಿಮಿತ್ತ ನಿಂತುಹೋಯಿತೆ? ನನಗೆ ತಿಳಿಯದು. ಹಾಗಿರಲಾರದೆಂದುಕೊಂಡಿದ್ದೇನೆ. ಬಹುಶಃ ಈ ಚಿತ್ರ ಪ್ರಥಮ ಪ್ರಯತ್ನವಾಗಿರಬೇಕು. ಏಕೆಂದರೆ ಫ್ರೆಂಚ್ ಭಾಷೆಯಲ್ಲಿರುವ ಕಾದಂಬರಿ ಇದಕ್ಕಿಂತ ಉತ್ತಮವಾಗಿದೆ. ಸಂಪೂರ್ಣವಾಗಿದೆ. ಪ್ರಥಮ ಪ್ರಯತ್ನವನ್ನು ಕೈಬಿಟ್ಟಿರಬೇಕು. ಇದಲ್ಲದೆ ಇನ್ನೂ ಕೆಲವು ಅಸಂಪೂರ್ಣ ಕೃತಿಗಳಿವೆ. ಅವುಗಳಲ್ಲಿ ಕೆಲವು ಗದ್ಯದಲ್ಲಿವೆ. ಕೆಲವು ಪದ್ಯರೂಪದಲ್ಲಿವೆ. ಆದರೆ ಅವುಗಳಿಗೆ ಮೆರಗು ಬಂದಿಲ್ಲ.

ಫ್ರೆಂಚ್ ಕಾದಂಬರಿಯಂತೆಯೇ ಈ ಕಾದಂಬರಿಯ ವಸ್ತುವೂ ದುರಂತ. ಈ ಕಾದಂಬರಿ ಆಂಗ್ಲ ಭಾಷೆಯಲ್ಲಿದೆ. ಇಂಗ್ಲಿಷ್ ಹಳ್ಳಿಯೊಂದರಲ್ಲಿ ನೆಲೆಸಿರುವ ಸ್ಪ್ಯಾನಿಷ್ ಮಹಿಳೆಯೊಬ್ಬಳ ಕಿರಿಯ ಹಾಗೂ ಬದುಕಿ ಉಳಿದಿರುವ ಏಕಮಾತ್ರ ಪುತ್ರಿ ಬಿಯಾಂಕ ಗಾರ್ಸಿಯ. ಬಿಯಾಂಕಳ ಅಕ್ಕ ಇನೆಜ್‌ಳ ಸಾವು. ಫೆಬ್ರವರಿ ತಿಂಗಳ ಮುಂಜಾನೆಯ ಚಳಿಯಲ್ಲಿ ಮಸಣಯಾತ್ರೆ. ಅಂತ್ಯಕ್ರಿಯೆ ಇವುಗಳೊಂದಿಗೆ ಕಾದಂಬರಿ ಪ್ರಾರಂಭ. ಬಿಯಾಂಕ ಹಾಗೂ ಅವಳ ತಂದೆ ದುಃಖಿಸುತ್ತಾರೆ. ಬಿಯಾಂಕಳಿಗೆ ದುಃಖ ಒತ್ತರಿಸಿ ಬರುತ್ತದೆ. ಮಾರ್ಥ ಎಂಬ ಹುಡುಗಿ—ಬಿಯಾಂಕಳ ಮನೆಯಲ್ಲಿದ್ದ ಸ್ಕಾಟಿಷ್ ಕೆಲಸದವಳು—ಕಳೆದುಹೋದುದನ್ನು ಮರೆತುಬಿಡಲು ಬಿಯಾಂಕಳಿಗೆ ಸಲಹೆಮಾಡಿ ಒತ್ತಾಯ ಮಾಡುತ್ತಾಳೆ. ಒಂದು ವರುಷವಾದಮೇಲೆ ಗತಿಸಿದ ಅಕ್ಕನನ್ನು ಪ್ರೀತಿಸುತ್ತಿದ್ದ ಇನ್‌ಗ್ರಮ್ ಎಂಬಾತ ಬಿಯಾಂಕಳನ್ನು ಮದುವೆಯಾಗಬಯಸುತ್ತಾನೆ. ಅಷ್ಟರಲ್ಲೇ ತಂದೆಯೂ ಕಾಲವಾಗುತ್ತಾನೆ. ಇನ್‌ಗ್ರಮ್ ಇನ್ನೂ ಇನೆಜಳನ್ನು ಪ್ರೀತಿಸುತ್ತಿರುತ್ತಾನೆ. ಅಷ್ಟರಲ್ಲಿ ಇವರು ಲೇಡಿ ಮೂರ್ ಎಂಬಾಕೆಯನ್ನೂ ಅವಳ ಮಗ ಮಗಳನ್ನೂ ಸಂಧಿಸುತ್ತಾರೆ. ಬಿಯಾಂಕ ಲೇಡಿ ಮೂರಳ ಮಗನನ್ನು ಪ್ರೇಮಿಸುತ್ತಾಳೆ. ಈತನನ್ನು ಮದುವೆಯಾಗಲು ಕುಟುಂಬದಲ್ಲಿ ಕೆಲವು ಅಡಚಣೆಗಳು ಬರುತ್ತವೆ. ಈತ ಕ್ರಿಮಿಯದ ಯುದ್ಧಕ್ಕೆ ಹೊರಟುಹೋಗುತ್ತಾನೆ. ಕಥೆ ಇಲ್ಲಿಗೆ ಬಂದು ನಿಂತು ಹೋಗಿದೆ. ಈ ಕಾದಂಬರಿಯ ತುಣುಕು ತುಂಬ ಘೋರವಾಗಿ ದುರಂತವಾಗಿ ಕಾಣುತ್ತದೆ. ಮುಂದೆ ಬೆಳೆಸಲು ಈ ಕಥೆ ಅತ್ಯಂತ ದುಃಖಮಯವಾಗಿ ತೋರುವಿಗೇ ಕಂಡಿರಬೇಕು. ಆದರಿಂದಲೇ ಇದನ್ನು ಅಲ್ಲಿಗೇ ನಿಲ್ಲಿಸಿ ತನ್ನ ಫ್ರೆಂಚ್ ಕಾದಂಬರಿಯನ್ನು ಆರಂಭಿಸಿರಬೇಕು. ಅಲ್ಲಿನ ನಾಯಕಿಯ ಜೀವನವೂ ಇದ್ದಕ್ಕಿದ್ದಂತೆಯೇ ಅಕಾಲ ಮರಣದಲ್ಲಿ ಮುಕ್ತಾಯಗೊಂಡರೂ ಅವಳು ಸ್ವಲ್ಪಕಾಲವಾದರೂ ಸಂತೋಷದಿಂದ ಬಾಳುತ್ತಾಳೆ. ಹಿರಿಯಕ್ಕನ ಮರಣದ ಘಟನೆ ತೋರುವಿನ ಮನಸ್ಸನ್ನಾಕ್ರಮಿಸಿ ಅವಳ ವ್ಯಕ್ತಿತ್ವಕ್ಕೆ ಸಹಜವಲ್ಲದ ಒಂದು ಅಸ್ವಸ್ಥತೆಯ ಛಾಯೆ ಕಾದಂಬರಿಯನ್ನು ಮುಸುಕಿದೆ.

೧೫. ಲಾವಣಿಗಳು ಹಾಗೂ ಪುರಾಣ ಕಥೆಗಳು

ತೋರು 'ಹಿಂದೂಸ್ಥಾನದ ಪುರಾತನ ಲಾವಣಿಗಳು ಹಾಗೂ ಪುರಾಣ ಕಥೆಗಳು' ಕೃತಿಯನ್ನು ಬರೆದಾಗ ಅದುವರೆಗೂ ಅರೆಬಿರಿದಿದ್ದ ಕಮಲದ ಮೊಗ್ಗು ಪ್ರಾಚ್ಯ ಸೂರ್ಯನ ಕಾಂತಿಯಲ್ಲಿ ಪೂರ್ಣವಾಗಿ ಅರಳುವಂತಾಯಿತು. ತೋರು ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳನ್ನು ಎಷ್ಟೇ ಪ್ರೀತಿಸಿದರೂ ಆ ದೇಶಗಳ ಬಗ್ಗೆ ಬರೆಯುವಾಗಲೆ ಆಗಲಿ, ಆ ದೇಶಗಳ ಸಾಹಿತ್ಯ ಭಾಗಗಳನ್ನು ಭಾಷಾಂತರಿಸುವಾಗಲೆ ಆಗಲಿ ಯಾವಾಗಲೂ ಸಂಪೂರ್ಣವಾಗಿ ನಿಸ್ಸಂಕೋಚದಿಂದ, ಆರಾಮದಿಂದ ಇರಲಿಲ್ಲ. ಸಂಸ್ಕೃತ ಸಾಹಿತ್ಯ ಭೂಮಿಯಲ್ಲಿ ಬೆಳೆದ ಹೂಗೊಂಚಲೊಂದನ್ನು ಕಟ್ಟುವ ಪ್ರಯತ್ನ ಮಾಡಿದಾಗಲೇ ಅವಳ ನಿಜವಾದ ಕಾವ್ಯ ಪ್ರತಿಭೆ ಗೋಚರವಾದದ್ದು. ಎಡ್‌ಮಂಡ್ ಗಾಸ್ ಹೇಳಿದಂತೆ 'ಫ್ರೆಂಚ್ ಹೊಲ ಗದ್ದೆಗಳಲ್ಲಿ ಕಟ್ಟಿದ ಕಂತೆ ತೋರುವಿನ ಬರವಣಿಗೆಯಲ್ಲೆಲ್ಲ ಅತ್ಯಂತ ಅಸಮರ್ಪಕ. ಆದರೆ ಅದರಿಂದ ಅದರ ಸ್ವಾರಸ್ಯ ಮಾತ್ರ ಸ್ವಲ್ಪವೂ ಕಡಿಮೆಯಾಗಿಲ್ಲ. ಆಕೆಯ ಸ್ವತಂತ್ರ ಆಂಗ್ಲ ಕವನಗಳ ಬಗ್ಗೆ ಆತ ಹೀಗೆ ಹೇಳಿದ್ದಾನೆ. 'ಮುಂದಿನ ಪೀಳಿಗೆಗೆ ತೋರು ಜೀವಂತಳಾಗಿ ಉಳಿಯುವುದು ಅವಳ ಸ್ವತಂತ್ರ ಆಂಗ್ಲ ಕವನಗಳಿಂದ ಎಂದು ನಾವು ನಂಬುತ್ತೇವೆ. ಈ ಲಾವಣಿಗಳು ಅವಳ ಕೊನೆಯ ಹಾಗೂ ಅತ್ಯಂತ ಪ್ರಬುದ್ಧ ಬರವಣಿಗೆ.'

ಲಾವಣಿಗಳ ಮೊದಲ ಮುದ್ರಣ 1882 ರಲ್ಲಿ ಲಂಡನ್ನಿನ ಕೇಗನ್ ಪಾಲ್, ಟ್ರೆಂಚ್ ಮತ್ತು ಕಂಪೆನಿ ಅವರಿಂದ ಪ್ರಕಟವಾಯಿತು. ಇದಕ್ಕೆ ಎಡ್‌ಮಂಡ್ ಗಾಸ್ ಒಂದು ಸ್ಮರಣರೂಪದ ಮುನ್ನುಡಿ ಬರೆದಿದ್ದಾನೆ. ಈ ಮುನ್ನುಡಿ ಬರೆದದ್ದು 1881 ರಲ್ಲಿ. ಅದಾದಮೇಲೆ ಈ ಕೃತಿ ಐದು ಮುದ್ರಣಗಳನ್ನು ಕಂಡಿದೆ. ಕೊನೆಯ ಮುದ್ರಣವನ್ನು 1927 ರಲ್ಲಿ ಮೊದಲ ಮುದ್ರಣದ ಪ್ರಕಾಶಕರೇ ಮುದ್ರಿಸಿದರು. ಇನ್ನೊಂದು ಮುದ್ರಣ ಮದರಾಸಿನಲ್ಲಾಗಿ ಕಾಲಿದಾಸ್ ಕಂಪೆನಿಯವರಿಂದ ಪ್ರಕಟಿಸಲ್ಪಟ್ಟಿತು. ಇದು ಯಾವ ವರುಷ ಆಯಿತೆಂದು ತಿಳಿಯದು. ವರುಷವನ್ನು ಹೆಸರಿಸಿಲ್ಲ. ಇದರಲ್ಲಿ ಗಾಸನ ಮುನ್ನುಡಿಯೂ ಇಲ್ಲ. ಬದಲಾಗಿ ಉಪಯೋಗಕ್ಕೆ ಬರದ ಪ್ರಕಾಶಕರ ನುಡಿ ಮಾತ್ರ ಇದೆ.

ತನ್ನ ಮುನ್ನುಡಿಯಲ್ಲಿ ಗಾಸ್ ಈ ರೀತಿ ಹೇಳಿದ್ದಾನೆ: 'ತೋರು ಇಂದು ಬದುಕಿದ್ದರೆ ಖ್ಯಾತಪೆತ್ತ ಐರೋಪ್ಯ ಬರಹಗಾರರೆಲ್ಲರಿಗಿಂತ ಕಿರಿಯಳಾಗಿರುತ್ತಿದ್ದಳು. ಈಗಾಗಲೆ ಸಾಕಷ್ಟಿರುವ ಅವಳ ಖ್ಯಾತಿ ಸಂಪೂರ್ಣವಾಗಿ ಮರಣಾನಂತರದ ಖ್ಯಾತಿ.' ಈ ಲಾವಣಿಗಳು ತೋರುವನ್ನು ತನ್ನ ನಾಡಿನಲ್ಲಿ ತನ್ನದೇ ಆದ ಪ್ರಪಂಚದಲ್ಲಿ ನೆಲೆಸುಮಂತೆ ಮಾಡಿದವು.

ಇ. ಜೆ. ಥಾಮಸ್ ಈ ರೀತಿ ಹೇಳಿದ್ದಾನೆ: 'ಕೀಟ್ಸ್ ಕವಿಗೆ ಹೇಳಿದಂತೆಯೇ ಇಲ್ಲಿಯೂ

ಕೂಡ ಯಾವುದೋ ಒಂದು ಧ್ವನಿ ಅವಳನ್ನು 'ಏನು ಮಾಡಬೇಕೆಂದಿರುವೆಯೋ ಅದನ್ನು ಬೇಗನೆ ಮಾಡಿ ಮುಗಿಸು' ಎಂದು ಹೇಳುತ್ತಿತ್ತು. ಅರುವಿನ ಮರಣಾನಂತರ ತೋರುವಿನ ಆತುರ ಇನ್ನೂ ಹೆಚ್ಚಿತು. ಆದರೆ ಎಲ್ಲ ರೀತಿಯ ಆತುರ ಅಪ್ರಬುದ್ಧತೆ ಇವುಗಳ ನಡುವೆಯೂ ಅವಳು ಬಹಳ ಬೇಗ ತನ್ನಲ್ಲಿ ಕಾವ್ಯಸಂಬಂಧವಾದ ಕೊರತೆಗಳಿಂದ ಮುಕ್ತಳಾಗುತ್ತಿದ್ದಳೆಂಬುದಕ್ಕೆ ಅನೇಕ ಕುರುಹುಗಳಿವೆ. ಅನುಭವದಿಂದ ಅವಳ ಇತಿಮಿತಿಗಳು ಮಾಯವಾಗಬಹುದು. ಏಕೆಂದರೆ ಅವು ಅಷ್ಟೇನೂ ಬೇರೂರಿರಲಿಲ್ಲ. ಥಾಮಸ್ ಹೀಗೆ ಹೇಳಿದ್ದಾನೆ: 'ಅವಳ ಕೃತಿಗಳಲ್ಲಿ ಲಾವಣಿಗಳು ತಮಗಾಗಿಯೇ ಒಂದು ರೀತಿಯ ಅಮರತ್ವವನ್ನು ಪಡೆಯಲು ಬಹುಮಟ್ಟಿಗೆ ಅರ್ಹವಾಗಿವೆ.' 'ಅವು ಅಷ್ಟೇನೂ ಎಚ್ಚರಿಕೆಯಿಲ್ಲದೆ ಹಾಳುಹಾಳಾಗಿದ್ದರೂ ಅವನ್ನೆಲ್ಲವನ್ನೂ ಸಂಕಲಿಸುವ ಒಂದು ಏಕತೆಯಿದೆ.' ಆದರೆ ತೋರು ಇಲ್ಲಿ ಜಾಗರೂಕಳಾಗಿಲ್ಲವೆಂಬುದು ಮಾತ್ರ ನಿಜ. ಅಷ್ಟೇ ಅಲ್ಲ. ಅವಳು ತಾನು ಬಣ್ಣಿಸುತ್ತಿರುವ ವಸ್ತುಗಳ ಬಗ್ಗೆ ಆಳವಾದ ಸಹಾನುಭೂತಿಯನ್ನು ಹೊಂದಿಲ್ಲ. ವಸ್ತುವಿನ ಪಾತ್ರಗಳ ಹೊರಗೆ ನಿಂತು ನೋಡುತ್ತಾಳೆ ಅವಳು. ಈ ದಂತಕಥೆಗಳನ್ನು ಹೇಳುವಾಗ ಥಾಮಸ್ ತೋರುವನ್ನು ತೀರ ವಿದೇಶೀಯ ವ್ಯಕ್ತಿಯಂತೆ ನೋಡುತ್ತಿದ್ದಾನೆ ಎನಿಸುತ್ತದೆ. ತೋರು ಕ್ರಿಸ್ತಳಾದರೂ ತಾನು ಬಣ್ಣಿಸಿದ ಹಿಂದೂ ವಸ್ತುವಿನ ಭಾಗವಾಗಿ ಅದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದಳೆಂಬುದನ್ನು ಥಾಮಸ್ ತಾನು ಅರಿತಂತೆ ಕಾಣುವುದಿಲ್ಲ. ಅಲ್ಲದೆ ಪ್ರಾಚೀನ ಭಾರತದ ಪುರಾಣ ಐತಿಹ್ಯಗಳು ಆದಿಕಾಲದ ಅಸಂಸ್ಕೃತ ಕಥೆಗಳಲ್ಲ. ಮೊದಲ ಶ್ರೇಣಿಗೆ ಸೇರಿದ ಕಥೆಗಳಿರಬೇಕಾದ ಸಾಹಿತ್ಯ ಮೌಲ್ಯ ಇಲ್ಲದಿರುವ ಸಾಹಿತ್ಯವಾಗಲಿ ಖಂಡಿತ ಅಲ್ಲ. ತೋರು ಆರಿಸಿಕೊಂಡ ಕಥೆಗಳು ಪ್ರಸಿದ್ಧವೂ, ಗ್ರೀಕ್ ಐತಿಹ್ಯಗಳಂತೆ ಪ್ರಾಚೀನ ಸಂಸ್ಕೃತಿ, ಪರಂಪರೆಗಳ ಪ್ರತೀಕವೂ ಆಗಿದ್ದವು. ತೋರುವೇ ಈ ರೀತಿ ಬರೆದಿದ್ದಾಳೆ: 'ಸಂಸ್ಕೃತ ಗ್ರೀಕ್ ಭಾಷೆಯಷ್ಟೇ ಪುರಾತನ ಉಜ್ವಲ.' ಅಲ್ಲದೆ ಈಗಿನ ಬರಹಗಾರರಿಗಿಲ್ಲದ ಒಂದು ಅನುಕೂಲ ಅವಳಿಗಿತ್ತು. ಸಂಸ್ಕೃತ ವಸ್ತುವಿಶೇಷಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯ ಮಾಡಿಕೊಟ್ಟ ಮೊದಲಿಗರಲ್ಲಿ ತೋರು ಒಬ್ಬಳು. ಥಾಮಸ್ ತಾನೇ ಈ ರೀತಿ ಹೇಳಿದ್ದಾನೆ: 'ತೋರು ಒಬ್ಬ ಅನುಪಮ ಮಹಿಳೆ. ಈಕೆಯ ಸ್ಥಾನ ಸ್ಯಾಫೊ ಹಾಗೂ ಎಮಿಲಿ ಬ್ರಾಂಟೆ ಇವರೊಂದಿಗೆ. ಈಕೆಯ ವ್ಯಕ್ತಿತ್ವವೂ ಅವರಷ್ಟೇ ಸತ್ವಯುತ, ಅಜೇತ.'

ಹಿಂದೂ ನೀತಿಕತೆಗಳ, ನೈತಿಕ ಮೌಲ್ಯಗಳ ಬಗ್ಗೆ ತೋರುವಿಗೆ ಸಂಪೂರ್ಣ ಸಹಾನುಭೂತಿಯಿದೆ. ಇದಕ್ಕೆ ಹೊರತಾದದ್ದು ಒಂದು ಮಾತ್ರ. ಆ ಕವನ ರಾಜ ಸನ್ಯಾಸಿ. ಇಲ್ಲಿ ತೋರು ಈ ರಾಜರ್ಷಿ ಇಹದ ವಸ್ತುಗಳ ಬಗೆಗಿರುವ ತನ್ನ ಪ್ರೇಮದಿಂದ ಸಂಪೂರ್ಣ ವಿಮುಕ್ತನಾಗಕೂಡದೆಂದು ಹೇಳುತ್ತಾಳೆ.

"ಆದರೆ ನಾವು, ಅಧಿಕಸುಖದಿಂದ ಜೀವಿಪ ನಾವು
ದೈವ ನಿಯಮದಿಂದಲೆ ಬದುಕಿರುವ ನಾವು
ಬಲ್ಲೆವು. ದೇವನೆಂದರೆ ಪ್ರೇಮ ಮೂರ್ತಿ ಎಂದು.

ಅವಸಿಗೆ ಬೇಡ ಆ ಪೂಜೆ. ಜಿತೇಂದ್ರಿಯರ ಹೆಮ್ಮೆ ಭಾವ
ಸನ್ಯಾಸಿನಿಯು ವ್ರತನಿಯುಮ ಕಠೋರತಪಶ್ಚರ್ಯೆ
ಇವಾವುವೂ ಬೇಡ. ಬೇಕು ಒಂದೇ ಒಂದು ಅದುವೆ ಪ್ರೇಮ
ದೇವ ತೋರಿಪ ಪ್ರೇಮದಂದದ ಸಮಸ್ತರ ಯೋಗಕ್ಷೇಮ."

ರಾಜ ಭರತ ತನ್ನ ಸಾಕು ಜಿಂಕೆಯ ಬಗ್ಗೆ ತುಂಬ ಅಭಿಮಾನದಿಂದದ್ದಕಾರಣ ಅವನು ಒಂದು ದೊಡ್ಡ ಅಪರಾಧವನ್ನೇ ಮಾಡಿದ್ದಾನೆ ಎಂದು ಹೇಳುವ ಬ್ರಾಹ್ಮಣನ ಬಗ್ಗೆ ಅಲ್ಪ ಕರುಣೆಯನ್ನೂ ತೋರಲಾಗುವುದಿಲ್ಲ ಎಂದಿದ್ದಾಳೆ ತೋರು. ಇದೊಂದನ್ನು ಬಿಟ್ಟರೆ ಪ್ರಾಚೀನ ಭಾರತದ ರೀತಿನೀತಿಗಳ ಬಗ್ಗೆ ತೋರು ಸಹಾನುಭೂತಿಯಿಂದಿಲ್ಲದ ಸಮಯವೇ ಇಲ್ಲ.

ಥಾಮಸ್ ತೋರುವಿನ ಗುಣವಾಚಕಗಳೂ ಭಾವನೆಗಳೂ 'ಇತರರಿಂದ ಎರವಲು ಪಡೆದವು. ಆದ್ದರಿಂದ ಹಳತು' ಎಂದು ಹೇಳಿರುವುದು ಸರಿ ಎನಿಸುತ್ತದೆ. ತೋರು ಛಂದೋಗತಿಗಾಗಿ ಬೇಕಿದ್ದಕ್ಕಿಂತ ಹೆಚ್ಚಾಗಿ ಗುಣವಾಚಕಗಳನ್ನು ಉಪಯೋಗಿಸುತ್ತಾಳೆ. ಅಲ್ಲದೆ ಅವಳ ವಿರಾಮ ಚಿಹ್ನೆಗಳ ಬಳಕೆಯೂ ಅಷ್ಟೆ.— ಬಲು ಹೆಚ್ಚು. ಆದರೆ ಅವಳ ಲಾವಣಿಗಳು ತಡೆಯಿಲ್ಲದೆ ಸಾಗುತ್ತವೆ. ಫ್ರೆಂಚ್ ಭಾಷಾಂತರಗಳಿಗಿಂತ ಇವುಗಳ ನುಡಿ ಸುಗಮವಾಗಿದೆ. ಇವು ಅವುಗಳಂತೆ ಕುಂಟುವುದಿಲ್ಲ. ಅಲ್ಲದೆ ಇವುಗಳಲ್ಲಿ ಕಾವ್ಯ ಪ್ರೇರಣೆಯಿದೆ. ತೋರು ಸಂಸ್ಕೃತ ಸಾಹಿತ್ಯದ ಸಮೃದ್ಧ ಸಾಗರವನ್ನು ಕೀಟ್ಸ್ ಕವಿಯ ಅಷ್ಟಪದಿಯಲ್ಲಿ ಕಾರ್‌ಟೆಜ್ ನಿಟ್ಟಿಸಿದಂತೆ ನಿಟ್ಟಿಸುತ್ತಾಳೆ.

ಮತ್ತೆ ಅದೇ ಕಥೆ. ತೋರು ಬದುಕಿದ್ದರೆ ಏನಾಗಬಹುದಾಗಿತ್ತು! ತನ್ನ ನಾಡಿನ ಪ್ರಾಚೀನ ಭಾಷೆಯ ಅಮೂಲ್ಯ ಸಾಹಿತ್ಯರತ್ನಗಳನ್ನು ಆಳವಾಗಿ ಅಭ್ಯಾಸ ಮಾಡಲು ಬೇಕಾದ ಜೀವಿತಕಾಲ ಅವಳದಾಗಲಿಲ್ಲ.

ಸಾಕಷ್ಟು ಅನುಭವವಿಲ್ಲದೆ ಇದ್ದುದರಿಂದ ಅನೇಕ ಕೊರತೆಗಳು ಅವಳ ಕಾವ್ಯದಲ್ಲಿ ಕಂಡರೂ ಅವಳ ಕಾವ್ಯ ಸತ್ವಯುತವಾಗಿದೆ. ಲಾವಣಿಗಳಿಂದ ಇಲ್ಲಿ ಒಂದು ಸುಂದರ ಕಾವ್ಯ ಭಾಗವನ್ನು ಉದ್ಧರಿಸುತ್ತೇನೆ.

ಉಷೆ ಬಂದಳು ವನಕೆ ಚೆಲುವು ತಂದಳು
ಬಿಸಿಲೇರಿತು ವನದಿ ಸೊಬಗು ಮೂಡಿತು
ರವಿ ಮುಳುಗಿದ ಚೆಲುವು ಕಟ್ಟೆಯೊಡೆಯಿತು.

ಮುಸ್ಸಂಜೆಯ ಹೊಂಬೆಳಕು ಬಾಲಚಂದ್ರನ ಹೊಳಪು
ಮೂಡಿ ಮೆರೆದವು. ರೂಪುರೂಪಾಂತರವಾಯಿತು.
ಬಣ್ಣ ಮೆಲ್ಲನೆ ಕರಗಿತು. ಕತ್ತಲು ಆವರಿಸಿತು.

ಬೆಳ್ಳಿ ಸರಿಗೆಯ ನೀಲ ಪದರವು ಇಳೆಯನೆಲ್ಲವ ಕವಿಯಿತು.
ಅಗೋ ಅಲ್ಲಿ ಎಲೆಗಿಡ ಬೆಳೆದಿಹ ಬೆಟ್ಟದ ಬಳಿ

ಮಂಜಿನ ಮಣಿ ಸಂಗದಲರಳಿದ ಮೊಗ್ಗೆಗಳಾ
ಸುಗಂಧದಿಂ ತುಂಬಿದ ಇಳಿಜಾರಿನ ತಡಿ
ಪತಿ ಸಹಧರ್ಮಿಣಿ ಸತಿ ನಡೆದರು.

ಈಗ ಉದ್ಧರಿಸಿದ ಕಾವ್ಯಭಾಗದ ಆರಂಭ ಸೊಗಸಾಗಿದ್ದರೂ ಇದೇ ಸೊಗಸನ್ನು ಬಹುಕಾಲ ತೋರು ಉಳಿಸಿಕೊಳ್ಳುವುದಿಲ್ಲ. ಕಾವ್ಯಭಾಗದ ಕೊನೆಯ ಹೊತ್ತಿಗೆ ಪದಗಳು ಕುಂಟಲಾರಂಭಿಸುತ್ತವೆ. ಅಲ್ಲದೆ ಕಥಾಭಾಗವನ್ನು ಮುಂದುವರಿಸುವ ಕಾತುರದಲ್ಲಿ ಕಾವ್ಯಮಾಧುರ್ಯ ಕುಂದುತ್ತದೆ. ಸಾಲುಗಳ ಇಂಪು ಕಡಮೆಯಾಗುತ್ತದೆ.

ತೋರು ಪ್ರಾಚೀನ ಭಾರತದ ದೇವರುಗಳನ್ನು ಗೌರವದಿಂದ ಕಂಡಳು. ಯಮಧರ್ಮನ ಹಾಗೂ ಉಳಿದ ದೇವತೆಗಳ ಬಗ್ಗೆ ಅವಳ ಮೆಚ್ಚುಗೆ ಎಲ್ಲೆಲ್ಲೂ ಸ್ಪಷ್ಟವಾಗಿದೆ. ಪ್ರಾಚೀನ ಸಂಸ್ಕೃತಿಯ ಬಗ್ಗೆ ಆಳವಾದ ನಂಬುಗೆಯಿದೆ. ತೋರುವಿನ ಕ್ರೈಸ್ತಮತ ಭಾವ ಎಲ್ಲಿಯೂ ಇದರೊಂದಿಗೆ ಹೋರಾಟಕ್ಕೆ ನಿಲ್ಲುವುದಿಲ್ಲ. ಬೇರಾವ ಧರ್ಮವನ್ನೂ ಸಂಕುಚಿತವಾದ ದೃಷ್ಟಿಯಿಂದ ನೋಡದ ತೋರು ನಿಜವಾದ ಕ್ರೈಸ್ತಳಾಗಿದ್ದಳು. ಅಂತೆಯೇ ತನ್ನದೇ ಸರಿಯೆಂದು ವಾದಿಸದ, ವಿಶಾಲ ಹೃದಯದ ಸಹನಾ ಮೂರ್ತಿ ತೋರು ಹಿಂದೂ ಧರ್ಮದ ನಿಜವಾದ ಕುವರಿಯಾಗಿದ್ದಳು.

ತೋರುವಿನ 'ಕಥನ ಕವನ'ಗಳು ಹಿಂದೂ ಸಂಸ್ಕೃತಿಯಲ್ಲಿ ಬೇರೂರಿವೆ. ಅವಳ ಕಾವ್ಯ ಮೂಲತಃ ಭಾರತೀಯವಾಗಿದ್ದರೂ ಕೆಲವು ವಿಮರ್ಶಕರು ಶ್ರೀಮಂತವಾದ ಸಂಸ್ಕೃತ ಭಾಷೆಯ ಸಾಹಿತ್ಯವನ್ನು ಅಷ್ಟೇ ಶ್ರೀಮಂತವಾಗಿ ಆಂಗ್ಲ ಭಾಷೆಗೆ ಅನುವಾದಿಸಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. 'ಘನವಾದ ಸಂಸ್ಕೃತದಲ್ಲಿದ್ದಾಗ ಅವುಗಳಿಗಿದ್ದ ದುಃಖಭರಿತವಾದ ಲಯವಾಗಲಿ, ಕವಯಿತ್ರಿಗೆ ತನ್ನದೇ ಆದ ಬಂಗಾಳಿ ಭಾಷೆಯಲ್ಲಿ ಸುಲಭವಾಗಿ ಕರಗತವಾಗಬಹುದಾಗಿದ್ದ ಸಹಜ ಸೌಂದರ್ಯವಾಗಲಿ ಆಂಗ್ಲ ಭಾಷೆಯ ಕವನಗಳಿಗೆ ಬಂದಿಲ್ಲ.'

'ಪ್ರತಿಮೆಗಳು, ಪ್ರಕೃತಿ ದೃಶ್ಯಗಳು ತಮ್ಮ ಮೆರುಗನ್ನೂ, ಸಮೃದ್ಧಿಯನ್ನೂ ಅಲಂಕಾರವನ್ನೂ ಕಳೆದುಕೊಂಡಿವೆ. ಆಂಗ್ಲ ಭಾಷೆ ತೋರುವಿನ ಕೈಯಲ್ಲಿ ಎಷ್ಟೇ ಲೀಲಾಜಾಲವಾಗಿ ಮೂಡಿದ್ದರೂ ಅದು ಫ್ರೆಂಚ್ ಭಾಷೆ ಅವಳಿಗೆ ತಂದುಕೊಟ್ಟ ಲಾಲಿತ್ಯವನ್ನೂ ನಯವನ್ನೂ ತಂದುಕೊಡಲಿಲ್ಲ. ಇದರಿಂದಾಗಿ ಭಾವನೆಗಳಲ್ಲೂ ಬರಹದಲ್ಲೂ ಇರಬಹುದಾಗಿದ್ದ ಅಭಿವ್ಯಕ್ತಿಯ ಆತ್ಮೀಯತೆ ಸಹಜವಾಗಿಯೇ ಕುಂದಿದೆ, ಕಂದಿದೆ.

ಕಾಳಿದಾಸನನ್ನೇ ಆಗಲಿ, ಬಾಣನನ್ನೇ ಆಗಲಿ, ಉಳಿದ ಯಾವ ಸಂಸ್ಕೃತ ಬರಹಗಾರನನ್ನೇ ಆಗಲಿ ಓದಿದಾಗಲೆಲ್ಲ ಓದುಗನಿಗೆ ಅಲ್ಲಿರುವ ಅಲಂಕಾರಿಕ ಶೈಲಿ, ನಾಯಕ ನಾಯಕಿಯರ ಮೇಲಿನ ಪ್ರಶಂಸೆಯ ಸುರಿಮಳೆ, ದೇವರುಗಳ, ರಾಜರ ವರ್ಣನೆಯಲ್ಲಿನ ಭವ್ಯತೆ, ಪ್ರಕೃತಿಯಲ್ಲಿನ ಸಮೃದ್ಧತೆ ಇವುಗಳ ಪರಿಚಯವಾಗದಿರುವುದಿಲ್ಲ. ಆದರೆ ವಿದೇಶಿ ಓದುಗರಿಗಾಗಿ ಬರೆದ ತೋರು ಇವನ್ನೆಲ್ಲ ಇರುವಂತೆಯೇ ಹೇಳದೆ ಅವರಿಗಾಗಿ ಮೊಟಕುಗೊಳಿಸಿದ್ದಾಳೆ. ಅಲ್ಲದೆ ಒಂದು ಆಧುನಿಕ ಮೆರುಗನ್ನೂ ಕೊಟ್ಟಿದ್ದಾಳೆ. ಆದರೆ ಈ ಕಥನ ಕವನಗಳ ವಸ್ತುವೇ ಪ್ರಾಚೀನವಾದ್ದರಿಂದ ಅವಳನ್ನೂ ಪ್ರಾಚೀನ ಕವಿ ಎನ್ನಲಡ್ಡಿ

ಯಿಲ್ಲ. ಯೂರೋಪಿನ ದೃಷ್ಟಿಯಲ್ಲಿ ಬಂಗಾಳ ಒಂದು ಕೆಳದರ್ಜೆಯ ನಾಡು ಎನಿಸಿಕೊಂಡಿದ್ದಾಗ ಅದನ್ನು ಐರೋಪ್ಯ ರಾಷ್ಟ್ರಗಳ ದೃಷ್ಟಿಯಲ್ಲಿ ಒಂದು ಉತ್ತಮ ಮಟ್ಟದ ಪೀಡನ್ನಾಗಿಸಿದ ಸಾಹಿತ್ಯ ನಾಯಕರಲ್ಲಿ ತೋರು ಕೂಡ ಒಬ್ಬಳು. ಬಂಗಾಳಿಗಳು ತಮ್ಮಲ್ಲಿ ತಾವೇ ನಂಬಿಕೆಯನ್ನು ಕಳೆದುಕೊಂಡವರಾಗಿ ತಮ್ಮನ್ನೂ ತಮ್ಮ ದೇಶವನ್ನೂ ಶಪಿಸುತ್ತಿದ್ದಾಗ ತೋರು ಪಾಶ್ಚಾತ್ಯ ಕಾವ್ಯಪರಂಪರೆಯಿಂದ ದೂರಸರಿದು ತನ್ನ ತಾಯಿ ನಾಡಿನ ಕಥೆಗಳನ್ನು ಕಾವ್ಯವಾಗಿ ಹಾಡಲು ಮೊದಲಿಟ್ಟಳು.'

'ಹಿಂದೂಸ್ಥಾನದ ಪ್ರಾಚೀನ ಲಾವಣಿಗಳು, ಪುರಾಣ ಕಥೆಗಳು' ಕೃತಿಯ ಐದನೆಯ ಮುದ್ರಣದಲ್ಲಿರುವ ಕವನಗಳನ್ನು ನೋಡಿದಾಗ 'ಸಾವಿತ್ರಿ' ಅತ್ಯಂತ ದೊಡ್ಡ ಕವನ. ಅಂತೆಯೇ ಅತ್ಯಂತ ಜನಪ್ರಿಯ ಕವನವೂ ಹೌದು. ಕಾವ್ಯ ಗಂಭೀರವಾಗಿದೆ. ಪ್ರಕೃತಿಸೌಂದರ್ಯದ ಶ್ರೀಮಂತಿಕೆ ಇಲ್ಲಿ ಭವ್ಯವಾಗಿ ಚಿತ್ರಿತವಾಗಿದೆ. ಅಷ್ಟಾಕ್ಷರಗಳ ಚತುಷ್ಪದಿಗಳು ಬೇಸರ ತರಿಸುವುದಿಲ್ಲ. ಕಾವ್ಯದಲ್ಲಿ ಮಹೋನ್ನತ ಕಾವ್ಯದ ಛಾಯೆಯಿದೆ. ಕಾವ್ಯ ಗಂಭೀರವಾಗಿ ಮಹಾಕಾವ್ಯದ ಜಾಡಿನಲ್ಲಿದ್ದರೂ ಭಾವಪೂರ್ಣವಾಗಿದೆ. ಇದು ಮಹಾಕಾವ್ಯದ ರೀತಿಯಲ್ಲೂ ಇದೆ. ಭಾವ ಪೂರ್ಣವಾಗಿಯೂ ಇದೆ.

ಮಹಾಕಾವ್ಯಗಳಿಂದಲೂ ಪುರಾಣಗಳಿಂದಲೂ ಆರಿಸಿರುವ ಉಳಿದ ಕಥೆಗಳೂ ಉತ್ತಮವಾಗಿವೆ. ತೋರು ಯಾವಾಗಲೂ ದೀನದಲಿತರ ಬಗ್ಗೆ ಅನಾಮಧೇಯರ ಬಗ್ಗೆ ಹೆಚ್ಚಿನ ಸಹಾನುಭೂತಿ ತೋರಿಸುತ್ತಿದ್ದಳು. ತೋರು ಆರಿಸಿರುವ ಕಥೆಗಳು, ಅವಳ ಆ ಕಥೆಗಳನ್ನು ರೂಪಿಸಿರುವ ರೀತಿ, ಅವುಗಳ ನೈತಿಕ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿವೆ. 'ಸೀತಾ' ಕಥೆಯಲ್ಲಿನಂತೆಯೇ 'ಸಾವಿತ್ರಿ' ಯಲ್ಲೂ ತೋರು ಭಾರತೀಯ ಮಹಿಳೆ, ಭಾರತೀಯ ಪತ್ನಿ ಇವರ ಬಗ್ಗೆ ತನ್ನ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾಳೆ. ಈ ಪಾತ್ರಗಳ ಸ್ಥಿರತೆ ತೋರುವಿನ ಮೇಲೆ ಅಸಾಧಾರಣ ಪ್ರಭಾವ ಬೀರಿತು. 'ಲಕ್ಷ್ಮಣ' ಎಂಬ ಕವನ 'ಸಾವಿತ್ರಿ' ಕವನದಷ್ಟು ನೀಳವಾಗಿಲ್ಲ. 'ಲಕ್ಷ್ಮಣ' ಕವನ ಸೀತಾ ಲಕ್ಷ್ಮಣ ಸಂವಾದ. ಈ ಕವನದಲ್ಲಿ ಸೀತೆ ತನ್ನನ್ನು ರಕ್ಷಿಸಲೆಂದೇ ಇರುವ ತನ್ನ ಮೈದುನನ ಬಗ್ಗೆ ಅಪಾರ್ಥ ಕಲ್ಪಿಸುತ್ತಾಳೆ. 'ಜೋಗಧ್ಯಉಮ' ಒಂದು ಜಾನಪದ ಕಥೆ. ಈ ಕಥೆಯನ್ನು ತೋರು ತನ್ನ ತಾಯಿಯಿಂದ ಕೇಳಿರಬೇಕು. ಕೊನೆಯಲ್ಲಿ ಹೀಗೆ ಹೇಳಿದ್ದಾಳೆ:

> ಅರ್ಥವಿದೆಯೇ ಈ ಕಥೆಗೆ ಹುಚ್ಚುಚ್ಚು ಎನಬಹುದು
> ಮುಂದೋಡುತ್ತಿರುವ ಜಗಕೆ ಹೊಂದದೇ ಇರಬಹುದು
> ಆದರಿದ ನುಡಿದ ಆ ಜೀವ ನಾನೊಲಿದ ಜೀವ
> ಅದಕೆಂದೆ ಇರಲೆಂದೆ ಈ ಕವನದ ಭಾವ.

ಆದರೆ ಈ ಕಥೆ ತುಂಬ ಸೊಗಸಾಗಿದೆ. ಸುಂದರ ಜಾನಪದ ಕಥೆಯಿದು. 'ಇದಂ ನಿಜವಾಗಿ ಸುಂದರವಾದ ಭಾವನೆ. ನಮ್ಮ ಭಾರತದಲ್ಲಿ ಇಂತಹ ನೂರಾರು ಭಾವನೆಗಳಿವೆ. ಸಾಧಾರಣ ಹಳ್ಳಿಯ ಹುಡುಗಿಯಂತೆ ದೇವಿ ಭುವಿಗೆ ಇಳಿದು ಬಂದ ಕಥೆಗೆ ತೋರು ಅಪಚಾರವೆಸಗದಂತೆ ಬರೆದಿದ್ದಾಳೆ.'

‘ರಾಜರ್ಷಿ’ ಹಾಗೂ ‘ಧ್ರುವ’ ಈ ಎರಡು ಕವನಗಳೂ ಮೊದಲಬಾರಿಗೆ ಬೆಂಗಾಲ್ ಮ್ಯಾಗಜೈನಿನಲ್ಲಿ ಪ್ರಕಟವಾದವು. ಈ ಎರಡು ಕವನಗಳೂ ಸರಳ ರಗಳೆಯಲ್ಲಿವೆ. ಈ ಛಂದಸ್ಸನ್ನು ತೋರು ಚೆನ್ನಾಗಿ ಬಳಸಿದ್ದಾಳೆ. ಈ ಎರಡು ಕಥೆಗಳೂ ವಿಷ್ಣು ಪುರಾಣದ ಕಥೆಗಳು. ಮೊದಲನೆಯದು ರಾಜ ಭರತ ಸನ್ಯಾಸಿಯಾಗಿ ಆಗತಾನೆ ಹುಟ್ಟಿದ ಹೆಣ್ಣು ಜಿಂಕೆಯೊಂದನ್ನು ನೀರಿನಲ್ಲಿ ಮುಳುಗದಂತೆ ಕಾಪಾಡಿದ ಕಥೆ. ಈ ಸನ್ಯಾಸಿಯ ಒಂಟಿ ಜೀವನದಲ್ಲಿ ಇದು ಆತನ ಏಕೈಕ ಜೊತೆಗಾತಿಯಾಗುತ್ತದೆ. ಅದನ್ನು ಆತ ಎಷ್ಟು ಪ್ರೀತಿಸುತ್ತಾನೆಂದರೆ ಈ ಪ್ರೀತಿ ಅವನ ತಪಸ್ಸಿಗೆ ಅಡ್ಡಿಯಾಗುತ್ತದೆ. ಆದರೆ ಸನ್ಯಾಸಿಯ ಪ್ರೇಮ ಸರಿ ಎನ್ನುತ್ತಾಳೆ ತೋರು. ಅಲ್ಲದೆ ಪ್ರಪಂಚದ ಆಗುಹೋಗುಗಳನ್ನು ಸಂಪೂರ್ಣವಾಗಿ ತ್ಯಜಿಸುವುದು — ಭಾರತದ ಸನ್ಯಾಸಿಗಳು ಮಾಡಲಿಚ್ಛಿಸುವಂತೆ — ಒಳ್ಳೆಯದೆ ಎಂದು ಪ್ರಶ್ನಿಸುತ್ತಾಳೆ.

ಧ್ರುವನ ಕಥೆ ಸುಪ್ರಸಿದ್ಧ. ತೋರು ಅದನ್ನು ಸರಳವಾಗಿ ಹಾಡಿ ಮುಗಿಸಿದ್ದಾಳೆ.

ತಪದಿಂದ ಜಪದಿಂದ ಧ್ರುವ ಕೊನೆಗೆ ಗಳಿಸಿದ
ಸ್ವರ್ಗಲೋಕಕೇರಿದ. ತಾರೆಯಾಗಿ ಅಮರನಾದ
ಇರುಳಿನಲ್ಲಿ ಕಾಣಬರುವ ಸಘನ ನಕ್ಷತ್ರವಾದ.

ತೋರುವಿನ ಕವನ ‘ಬುಟ್ಟೂ’ ಆಚಾರ್ಯ ದ್ರೋಣನಿಂದ ಬಿಲ್ಲುವಿದ್ಯೆಯನ್ನು ಕಲಿಯಲು ಬಯಸುವ ಬಡ ಬಿಲ್ಲುಗಾರನ ಮಗನೊಬ್ಬನ ಕಥೆ. ಈತನನ್ನು ಆಚಾರ್ಯನೂ ಅವನ ಶಿಷ್ಯರಾದ ರಾಜಕುಮಾರರೂ ಹಂಗಿಸುತ್ತಾರೆ. ಅವನು ಕಾಡಿಗೆ ಹಿಂದಿರುಗಿ ದ್ರೋಣಾಚಾರ್ಯನ ಪ್ರತಿಮೆಯೊಂದನ್ನು ಮಾಡಿಟ್ಟುಕೊಂಡು ಗುರುಭಕ್ತಿಯಿಂದ ಬಿಲ್ಲು ವಿದ್ಯೆಯನ್ನು ಅಭ್ಯಾಸಮಾಡುತ್ತಾನೆ. ಆದರೆ ತನ್ನ ಗುರುವಿಗೆ ಗುರುದಕ್ಷಿಣೆಯರ್ಪಿಸುವುದಾಗಿ ಮಾತುಕೊಟ್ಟ ಈ ಧೈರ್ಯಶಾಲಿ ಯುವಕ ಗುರು ಅರ್ಜುನನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ತಾನು ತನ್ನ ಬಿಲ್ಲುವಿದ್ಯೆಯನ್ನೇ ಗುರುದಕ್ಷಿಣೆಯಾಗಿ ಒಪ್ಪಿಸಿ ಬಿಡುತ್ತಾನೆ. ಇದಕ್ಕಾಗಿ ದ್ರೋಣ ಅವನನ್ನು ಆಶೀರ್ವದಿಸುತ್ತಾನೆ.

ಸಾಗರದಿಂ ಸಾಗರಕೆ ಹಬ್ಬಿಹರಡಲಿ ನಿನ್ನ ಕೀರ್ತಿ ಧೈರ್ಯ
ಎಂದೆಂದಿಗೂ ನೆನಪಿಡಲಿ ಜನತೆ ನಿನ್ನ ಸ್ಥೈರ್ಯ
ನೀನೆಂದರೆ ಸತ್ಯ, ವಿನಯ, ಸ್ವಸಹಾಯಮೂರ್ತಿ.

ಈ ರೀತಿಯಾಗಿ ತೋರು ನೂರುವರುಷ ಬಾಳುವ ಕೀರ್ತಿಯನ್ನು ಸಂಪಾದಿಸಿದಳು. ಈ ಕೀರ್ತಿ ಇನ್ನೂ ಬಹುಕಾಲ ಬಾಳುವುದರಲ್ಲಿ ಸಂದೇಹವಿಲ್ಲ. ತನ್ನ ನಾಡಿನ ಉಜ್ವಲ ಸಾಂಸ್ಕೃತಿಕ ಪರಂಪರೆಯಲ್ಲಿ ತುಂಬ ಅಭಿಮಾನದಿಂದಿದ್ದ ತೋರು ಅಪ್ಪಟ ಭಾರತೀಯಳು. ಅಷ್ಟೇ ಅಲ್ಲ. ಅವಳೇ ಭಾರತದ ಸಾಂಸ್ಕೃತಿಕ ಪರಂಪರೆಯ ಒಂದು ಭಾಗವಾಗಿದ್ದಾಳೆ. ತನ್ನ ತಾಯಿನಾಡಿಗೆ ಚಿರಾಯುವಾದ ಹೆಸರು ತಂದಿದ್ದಾಳೆ. ಈ ಸುಕೋಮಲ ಪುಷ್ಪ

ಅರಳಿದ ಅಲ್ಪ ಕಾಲದಲ್ಲೇ ಉದುರಿಹೋದರೂ ಅನುಗಾಲವೂ ಉಳಿಯಬಲ್ಲ ನಸುಗಂಪು ಬೀರಿತು.

ಲಾವಣಿಗಳ ಕೊನೆಯಲ್ಲಿ ಪ್ರಕಟವಾಗಿರುವ ಕಲಸುಮೇಲೋಗರ ಕವನಗಳಲ್ಲಿ 'ನಮ್ಮ ಕ್ಯಾಸುರೀನ ವೃಕ್ಷ' ತನ್ನ ಕೊನೆಯ ಸಾಲಿಗೆ ತಾನೇ ನಿದರ್ಶನವಾಗಿದೆ— 'ನನ್ನ ಒಲವಿನ ಬಲವು ವಿಸ್ಮೃತಿಯ ಶಾಪದಿಂ ನನಗೆ ಸಂರಕ್ಷಣೆಯ ತರಲಿ'— ಈ ಕವನವನ್ನು ಆಗಿಂದಾಗ್ಗೆ ಉದಹರಿಸುತ್ತಲೇ ಇರುತ್ತದೆ ಜನತೆ. ಅಲ್ಲದೆ ಸದಾಕಾಲವೂ ತನ್ನ ನೆನಪಿನಲ್ಲಿ ಉಳಿಸಿಕೊಂಡಿದೆ. ಇ. ಜೆ. ಥಾಮಸ್ ಹೇಳಿರುವಂತೆ 'ಈ ಕವನ ವಿದೇಶೀಯಳೊಬ್ಬಳಿಂದ ಬರೆಯಲ್ಪಟ್ಟ ಅತ್ಯುತ್ತಮ ಕವನ'. ಇದು ತೋರುವಿನ ಕವನಗಳಲ್ಲೆಲ್ಲ ಅತ್ಯಂತ ಸುವ್ಯಕ್ತ. ಇದರಲ್ಲಿ ಪ್ರಕಟಗೊಂಡಿರುವ 'ಹಿಂದಿನದರ ಹಂಬಲ ಅಂತಃಪ್ರಜ್ಞೆ, ಪರಮೋದಾತ್ತವಾಗಿದೆ. ತೋರುವನ್ನು ಅಮರಕವಿಗಳಲ್ಲಿ ಒಬ್ಬಳನ್ನಾಗಿಸಲು ಇದೊಂದು ಕವನ ಸಾಕು.'

ನಮ್ಮ ಕ್ಯಾಸುರೀನ ವೃಕ್ಷ

(ನಮ್ಮ ಸರ್ವೆ ಮರ)

ಒರಟು ಮರದಾ ಕಾಂಡವನು ಬಳಸಿ ಬಳಸಿ ಬಿಗಿದಪ್ಪಿ
ಮೇಲೇರಿ ತುದಿತಾಗಿ ತಾರೆಗಳ ಬಳಿಸಾರಿ ತೂಗುತಿದೆ
ಮಚ್ಚೆಮೈ ಹೆಬ್ಬಾವಿನೊಲು ಮರವನಪ್ಪಿದ್ದ ಬಳ್ಳಿ.
ಈ ಬಗೆಯ ಬರಸೆಳೆವ ಬಿಗಿತದಲ್ಲಿಲ್ಲ ಇನ್ನಾವ ಮರಕೂ ಉಳಿವು
ಆದರೀ ಕೆಚ್ಚೆದೆಯ ಹೆಮ್ಮರವು ಹೊದ್ದಿಹುದು ಲತೆಯ ಮೇಲ್ಸೆರಗು
ರೆಂಬೆರೆಂಬೆಯ ತುಂಬ ಇಳಿಬಿದ್ದ ಕಡುಗೆಂಪು ಹೂಗೊಂಚಲು
ಹಗಲೆಲ್ಲ ಇದರ ಮೇಲಿರೆ ಹಕ್ಕಿ ದುಂಬಿಗಳ ಮೇಳ
ಇರುಳಲ್ಲಿ ಆಗಾಗ ಗಾನದಿಂಪುಪವನದಿ ಹೊಮ್ಮಿ ಹೊರಸೂಸಿದಾಗ
ಹಾಡೊಂದು ಅಂತಗಾಣದ ಗೀತದಂತಿರಲು ಉಕ್ಕಿ ಹರಿಯುವುದು
ಮಲಗಿರೆ ಜನಸ್ತೋಮ, ಕತ್ತಲೆಯೆ ನಮ್ಮ ಮರದಿಂದ ಸ್ವರಗೈವುದು

ಮುಚ್ಚಿದ್ದ ಕಿಟಕಿಯದು ಮುಂಜಾನೆ ತೆರೆದೊಡನೆ
ನನ್ನ ಕಣ್ನೋಟ ಸಂತಸದಿ ಮೊದಲಲ್ಲೆ ನೆಲೆ ನಿಲ್ಲುವುದು
ಕೆಲವೊಮ್ಮೆ ಅದರಲ್ಲು ಚಳಿಗಾಲದಲ್ಲದರ ತುದಿಯನ್ನೆ ದಿಟ್ಟಿಸುವುದು
ಪ್ರತಿಮೆಯಂದದಿ ಕುಳಿತ ಕಂದು ಬಣ್ಣದ ಮಂಗ ಏಕಾಂಗಿ
ಅರುಣೋದಯವ ನೋಡುತಿರೆ ಆಗ ಕೆಳಗಿನ ರೆಂಬೆಗಳಲ್ಲಿರೆ
ಮರಿಕೋತಿಗಳ ಸೈನ್ಯ ಆಡುತ್ತ ರೆಂಬೆರೆಂಬೆಗೆ ಹಾರುತ.
ಹತ್ತಿರದಿ ಮತ್ತೆ ದೂರದಲಿ ಕೋಗಿಲೆಗಳುಲಿವುವು ಉಷೆಯ ಬರವ
ನಿದ್ದೆಗಣ್ಣೆನಲಿದ್ದ ನಮ್ಮ ಗೋವುಗಳು ಗೋಮಾಳದೆಡೆ ಸಾಗುವುವು
ವೃದ್ಧವೃಕ್ಷ ವಿಶಾಲ ಸುಂದರವು, ಮತ್ತೆ ವಿಸ್ತಾರದಾತೆರೆಯಂ ಹರಹಿನಲಿ
ಬಿದ್ದನೆರಳಿನಲೆದ್ದ ಜಲಕಮಲಗಳು ಹಿಮದ ಹೊದಿಕೆಯೊಲು ಮೆರೆವುವು

ಆದರದರಾ ಭವ್ಯತೆಗೆ ಅಲ್ಲ ಸರ್ವೆಮರ ಪ್ರಿಯ ನನಗೆ
ಆದರದಿಯುಲಾಡಿಹೆವು ನಾವು, ಉರುಳಿಹವು ನಿಜ ವರುಷಗಳು ಆದಿ
ಓ ಪ್ರಿಯ ಸುಕುಸಖಿಯರೆ, ಎದೆಯಾಳದಿಂದ ನಾ ಪ್ರೀತಿಸಿದೆ ನಿಮ್ಮನು
ನಿಮಗಾಗಿ ನಿಮ್ಮೊಲುಮೆಗಾಗಿ ಆ ಮರವು ಎಂದೆಂದಿಗೂ ಪ್ರಿಯ
ನಿಮ್ಮ ರೂಪದ ಜೊತೆಗೆ ಒಂದಾಗಿ ಬೆಸೆತು ಮೇಲೇಳುವುದು
ನನ್ನ ನೆನಪಿನ ಆಳದಲ್ಲಿ ಅದು ಮೂಡುವುದು ಹನಿಗೂಡಿ ಕಣ್ಣು
ಅವ ಶೋಕರವ ಮರ್ಮರವ ಕೇಳುತಿಹೆ ನಾನು
ದಿಂಡುರುಳಿ ದಂಡೆಗಪ್ಪಳಿಪ ಸಾಗರದ ಮೊರೆತದಂತೆ
ಅಲ್ಲವಿದು ಸಾಗರದ ಸರ, ವೃಕ್ಷರಾಜನು ಇಟ್ಟ ನಿಟ್ಟುಸಿರೆ ನಿಜ
ಮುಟ್ಟಬಹುದೀ ಮೊರೆತ ಕಂಡಿರದ ನಾಡಿಗೂ ಇವರ ಬಿಸಿ ಸಹಜ

ಅಪರಿಚಿತವಿದ್ದರೂ ಚಿರಪರಿಚಿತವು ನಂಬುಗೆಯ ನೋಟಕೆ !
ಕೇಳಿಹೆನು ನಾನು ಬಹು ದೂರದೂರಿಂದ ಬಹ ದುಃಖಿಧ್ವನಿಯನು.
ದೂರ ದೇಶಗಳ ಆ ತೀರ ಪ್ರದೇಶಗಳಲಿ.
ಜಲಧೂತ ಮಲಗಿ ನಿದ್ರಿಸಿದಾಗ ತಮ್ಮ ಗುಹೆಗಳಲಿ
ಬೆಳದಿಂಗಳಲಿ ಅಲೆಗಳಲಿ ಇಟಲಿ ಫ್ರಾನ್ಸ್ ತೀರಗಳಲಲ್ಲಿಗರೆದಾಗ
ಕನಸಿರದ ಎಚ್ಚರಳದಿಳಿಯು ಮೈಮರೆದೊರಗಿದಾಗ:
ಮೇಲೆದ್ದು ಅಲೆಯಾಗಿ ಹಾಡಿನಲಿ ತೇಲಿ ಬಂದಾಗೆಲ್ಲ
ನನ್ನ ಒಳಗಣ್ಣೆದುರು ಒಡಮೂಡುವುದು ಒಂದು ಭವ್ಯಾಕೃತಿ
ನಿನ್ನಾಪ್ರತಿಕೃತಿ. ಓ ವೃಕ್ಷ. ಸಂತಸದ ಆ ನನ್ನಯ ಮಯೋವಸಂತದಲಿ
ನಾನಿನ್ನ ಕಂಡಂತೆ. ನನ್ನ ಒಲುಮೆಯ ನಾಡ ಪರಿಸರದಲಿ

ಅದ್ದರಿಂದೀಬಯಕೆ. ಹಾಡಿಕೊಂಡಾಡಿ ನಿನ್ನನು ವೃಕ್ಷ. ಗೌರವಿಪಲವಲವಿಕೆ
ಈಗ ಚಿರ ನಿದ್ರೆಯಲಿ ಮಲಗಿಹರ ಒಲುಮೆ ಗಳಿಸಿದೆ ನೀನು
ಇದ್ದರವರೆನಗೆನ್ನ ಜೀವಕಿಂತಲು ಮಿಗಿಲು ಜೀವಿಗಳು ಹಾಯ್ !
ನಾ. ನನ್ನ ಕೊನೆಯುಸಿರನೆಳೆದಾಗ ನೀನಿರು ಚಿರಾಯು
ಬ್ಯಾರೊಡೇಲಿನ ವೃಕ್ಷದಂತಾಗು ಅವಿನಾಶಿತರುವು
ಯಾವ ತರುಗಳ ಭಯಂಕರ ರೆಂಬೆಕೊಂಬೆಗಳಡಿ
ಭೀತಿ ಅಸ್ಥಿರ ಆಶೆ. ಮೃತ್ಯು ಮತ್ತಸ್ಥಿ ಪಂಜರವು.
ಕಾಲನಾ-ನೆರಳು ನಿಂತಿವೆ ಬೀಡು ಬಿಟ್ಟು ನಿಟ್ಟುಸಿರನಿಟ್ಟು.
ನಿನ್ನ ಚೆಲುವಿನ ಮೇಲ್ಮೆಗಿಂತ ಬಲಹೀನವಾದರೂ ಇದು ಇರಲಿ
ನನ್ನ ಒಲವಿನ ಬಲವು ವಿಸ್ಮೃತಿಯ ಶಾಪದಿಂ ನಿನಗೆ ಸಂರಕ್ಷಣೆಯ ತರಲಿ.

ಗ್ರಂಥಸೂಚಿ

(1) ಫ್ರೆಂಚ್ ಹೊಲಗದ್ದೆಗಳ ಎಲೆಗೊಂಚಲು

1. ಸಾಪ್ತಾಹಿಕ್ ಸಂಬಂಧ್ ಮುದ್ರಣಾಲಯ, ಭವಾನಿಪುರ, ಕಲ್ಕತ್ತ ೧೮೭೬.
2. ಹೊಸ ಆವೃತ್ತಿ, ಸಾಪ್ತಾಹಿಕ್ ಸಂಬಂಧ್ ಮುದ್ರಣಾಲಯ, ೧೮೭೮.
3. ಮತ್ತೊಂದು ಆವೃತ್ತಿ, ಕೇಗನ್ ಪಾಲ್ ಕಂಪೆನಿ, ಲಂಡನ್ ೧೮೮೦.

(2) ಹಿಂದೂಸ್ಥಾನದ ಪುನರಾತ ಲಾವಣಿಗಳು ಮತ್ತು ಪುರಾಣಕಥೆಗಳು :

1. ಎಡ್‌ಮಂಡ್ ಗಾಸ್ ಅವರಿಂದ ಸ್ಮರಣಾರ್ಥ ಮುನ್ನುಡಿ, ಕೇಗನ್ ಪಾಲ್, ಲಂಡನ್ ೧೮೮೩.
2. ಇನ್ನೊಂದು ಆವೃತ್ತಿ, ಕೇಗನ್ ಪಾಲ್, ೧೯೩೭.
3. ಕಾಲಿದಾಸ್ ಕಂಪೆನಿ, ಮದರಾಸು.

(3) ಕುಮಾರಿ ಆರ್‌ವೆರಳ ದಿನಚರಿ :

ತೋರುದತ್‌ಳ ಫ್ರೆಂಚ್ ಕಾದಂಬರಿ. ಕ್ಲಾರಿಸ್ ಬಾದರ್‌ಳಿಂದ ಸ್ಮರಣಾರ್ಥ ಮುನ್ನುಡಿ. ದೀದೀಯರ್ ಪ್ಯಾರಿಸ್ ೧೮೭೯. ಬಂಗಾಳಿ ಅನುವಾದ—ರಾಜ್‌ಕುಮಾರ್ ಮುಖೋಪಾಧ್ಯಾಯ ೧೯೪೯.

ಪೃಥ್ವೀಂದ್ರನಾಥ್ ಮುಖೋಪಾಧ್ಯಾಯ ೧೯೫೮.

(4) ಬಿಯಾಂಕ ಅಥವಾ ಸ್ಪ್ಯಾನಿಷ್ ಯುವತಿ :

ಎಂಟು ಅಧ್ಯಾಯಗಳ ಅಪೂರ್ಣಕೃತಿ. ಬೆಂಗಾಲ್ ಮ್ಯಾಗಜೈನಿನಲ್ಲಿ ಜನವರಿ ೧೮೭೮ ರಿಂದ ಏಪ್ರಿಲ್ ವರೆಗೂ ಪ್ರಕಟವಾಯಿತು.

(5) ಸಮಕಾಲೀನ ಚರಿತ್ರೆಯಿಂದ ಒಂದು ದೃಶ್ಯ :

ವಿಕ್ಟರ್ ಹ್ಯುಗೊ ಹಾಗೂ ಥಿಯರ್ಸ್ ಮಾಡಿದ ಭಾಷಣಗಳ ಅನುವಾದ. ಬೆಂಗಾಲ್ ಮ್ಯಾಗಜೈನ್, ಜೂನ್—ಜುಲೈ ೧೮೭೫.

ಹೆನ್ರಿವಿನ್‌ಸೆಂಟ್ ಡೆರೋಜಿಯೊ ಹಾಗೂ ಲುಕೌಂಟ್ ಇವರನ್ನು ಕುರಿತು ಪ್ರಬಂಧಗಳು :

ಬೆಂಗಾಲ್ ಮ್ಯಾಗಜೈನ್, ಡಿಸೆಂಬರ್ ೧೮೭೪.

ತೋರುದತ್ತಳ ಬರಹಗಳು ಪ್ರಕಟವಾದ ಪತ್ರಿಕೆಗಳು:

ಸಾಟರ್‌ಡೆ ರಿವ್ಯೂ :

(ಲಂಡನ್) ೧೮೭೯.

ಫ್ರಾನ್ಸ್‌ನ ದಿನಚರಿ (ಪ್ಯಾರಿಸ್) ಜನವರಿ ೧೮೭೯.

ದಿ ಇಂಗ್ಲಿಷ್‌ಮನ್ :

(ಕಲ್ಕತ್ತ) ಏಪ್ರಿಲ್ ೧೯, ೧೮೭೬, ಮಾರ್ಚ್ ೨೧, ೧೮೭೯.

ದಿ ಸ್ಟೇಟ್ಸ್‌ಮನ್ :

(ಕಲ್ಕತ್ತ). ಅಕ್ಟೋಬರ್ ೨೬, ೧೮೭೭, ಜುಲೈ ೧೫, ೧೮೭೮ ಮತ್ತು ಮಾರ್ಚ್ ೩೧, ೧೮೭೯. 'ದಿ ಎಕ್ಸಾಮಿನರ್' (ಲಂಡನ್) ಆಗಸ್ಟ್ ೧೮೭೬ ಮತ್ತು ಜೂನ್ ೧೮೭೮, ತೋರುವಿನ ಜೀವನ ಹಾಗೂ ಪತ್ರಗಳು ಗ್ರಂಥಗಳಲ್ಲಿ ತೋರುವಿನ ಬರಹಗಳು ಪ್ರಕಟವಾದ ಪತ್ರಿಕೆಗಳ ಸಂಪೂರ್ಣ ಪಟ್ಟಿಯಿದೆ. ೧೮೭೭ ಮಾರ್ಚ್ ತಿಂಗಳಿಂದ ೧೮೭೮ ಏಪ್ರಿಲ್ ವರೆಗೂ ತೋರುವಿನ ಬರಹಗಳು ಬೆಂಗಾಲ್ ಮ್ಯಾಗಜೈನಿನಲ್ಲಿ ತಪ್ಪದೆ ಪ್ರಕಟವಾದವು. 'ಕಲ್ಕತ್ತ ರಿವ್ಯೂ' ಪತ್ರಿಕೆಗೂ ತೋರು ಆಗಿಂದಾಗ್ಗೆ ಬರೆಯುತ್ತಿದ್ದಳು.

ಸಾವಿತ್ರಿ :

ಇಂಟರ್‌ಮೀಡಿಯಟ್ ತರಗತಿಗಳಿಗೆ ಪಠ್ಯಪುಸ್ತಕ. ಸಂಪಾದಕ: ಜಿ. ಪಿ. ಸಿನ್ಹ, ವಿದ್ಯಾರ್ಥಿ ಪ್ರಕಾಶಕರು, ಮೀರತ್ ೧೯೫೬.

ತೋರುದತ್ತಳ ಜೀವನ ಹಾಗೂ ಪತ್ರಗಳು :

ಹರಿಹರದಾಸ್. ಮುನ್ನುಡಿ, ಎಚ್. ಎ. ಎಲ್. ಫಿಷರ್, ಒ.ಯು.ಪಿ. ೧೯೨೧.

ಆಂಗ್ಲ ಕಾವ್ಯದ ಬಂಗಾಳಿ ನಸಂಕಲಿ :

ಆಯ್ಕೆ ಥಿಯೊಡೋರ್ ಡಗ್ಲಸ್ ಡನ್. ಮುನ್ನುಡಿ, ರವೀಂದ್ರನಾಥ ಠಾಕೂರ್, ಲಾಂಗ್ ಮನ್ಸ್ ಗ್ರೀನ್ ಕಂಪೆನಿ, ಮದರಾಸು ೧೯೧೮.

ತೋರುದತ್ತಳ ಕಾವ್ಯದಲ್ಲಿ ಪ್ರಾಚೀನ ಸಂಪ್ರದಾಯ :

ಹರಿಹರದಾಸ್. ಏಷಿಯಾಟಿಕ್ ರಿವ್ಯೂ—ಅಕ್ಟೋಬರ್, ೧೯೪೧. ಇದು ಕಿರುಹೊತ್ತಿಗೆ ಯಾಗಿಯೂ ಪ್ರಕಟವಾಗಿದೆ.

ಆಂಗ್ಲ ಕಾವ್ಯವನ್ನು ಬರೆದ ಭಾರತೀಯರು :

ಲತಿಕ ಬೋಸ್, ೧೯೪೪.

ಕವಿ ತೋರುದತ್ :

(ಬಂಗಾಳಿ) ರಾಜ್‌ಕುಮಾರ್ ಮುಖ್ಯೋಪಾಧ್ಯಾಯ, ಏಷ್ಯಾ ಪಬ್ಲಿಷಿಂಗ್ ಹೌಸ್, ಕಲ್ಕತ್ತ ೧೯೫೯.

ವಿಶ್ವದ ಪ್ರಮುಖ ಪ್ರೌಢ ಪ್ರಾಚೀನ ನವೋದಯ :

ಕಲೋನಿಯಲ್ ಮುದ್ರಣಾಲಯ, ನ್ಯೂಯಾರ್ಕ್, ಸಂಪುಟ III ಭಾರತೀಯ ಸಾಹಿತ್ಯ.

ಭಾರತದಲ್ಲಿ ನವೋದಯ :

ಲಂಡನ್ ೧೯೧೨.

ಆಂಗ್ಲ ಭಾಷೆಯಲ್ಲಿ ಭಾರತೀಯ ಬರಹ :

ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಏಷ್ಯಾ ಪಬ್ಲಿಷಿಂಗ್ ಹೌಸ್, ೧೯೬೨.

ಆಂಗ್ಲ ಸಾಹಿತ್ಯಕ್ಕೆ ಭಾರತೀಯರ ಕಾಣಿಕೆ :

ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ೧೯೪೫.

ಭಾರತೀಯ ಸಾಹಿತ್ಯ :

ಏಪ್ರಿಲ್-ಜೂನ್ ೧೯೬೭ ಸಾಹಿತ್ಯ ಅಕಾದೆಮಿ. ಅಲೋಕ್ ರಂಜನ್ ದಾಸ್ ಗುಪ್ತ ಹಾಗೂ ದೀಪೇಂದ್ರನಾಥ್ ಮಿಶ್ರ ಇವರ ಲೇಖನಗಳು. ತೋರುದತ್ತಳ ಕಾವ್ಯದಿಂದ ಆಯ್ದ ಕೆಲವು ಭಾಗಗಳು.

ರಮೇಶ್ ಚಂದ್ರದತ್ತರ ಜೀವನ ಹಾಗೂ ಕಾರ್ಯ :

ಜೆ. ಎನ್. ಗುಪ್ತ. ಜೆ. ಎಮ್. ಸೆಂಟ್, ಲಂಡನ್ ೧೯೧೧.

ಭಾರತೀಯ ಮಹಿಳೆಯರ ಕವನಗಳು :

ಸಂಪಾದಕ : ಮಾರ್ಗರೆಟ್ ಮ್ಯಾರ್‌ನಿಕಾಲ್. ಅಸೋಸಿಯೇಷನ್ ಮುದ್ರಣಾಲಯ, ವೈ.ಎಂ. ಸಿ.ಯೆ. ಕಲ್ಕತ್ತ ಮತ್ತು ಒ.ಯು.ಪಿ. ೧೯೨೩.

ಭಾರತದ ಶ್ರೇಷ್ಠ ಮಹಿಳೆಯರು :

ಮಹಾಮಾತೆ ಜನ್ಮಶತಾಬ್ದಿ ಸಂಪುಟ. ಅದ್ವೈತ ಆಶ್ರಮ ಮಾಯವತಿ ಅಲ್ಮೋರ.

ಭಾರತದ ಮಹಿಳೆಯರಲ್ಲಿ ಮೊದಲಿಗರು :

ಪದ್ಮಿನಿ ಸೆನ್ ಗುಪ್ತ. ಥ್ಯಾಕರ್, ಬೊಂಬಾಯಿ ೧೯೪೪.

ಭಾರತದ ಸ್ತ್ರೀಯರ ಪತ್ರಿಕೆ :

ಸಂಪಾದಕಿ : ಕಮಲಾ ಸತ್ಯಾನಂದ್—೧೯೦೧-೧೯೩೪. ತೋರುದತ್ತಳ ಅನೇಕ ಕವನಗಳು ಪ್ರಕಟವಾದವು. ಅವಳ ಬಗ್ಗೆ ಅನೇಕ ಲೇಖನಗಳೂ ಪ್ರಕಟವಾದವು.

ಮುನ್ನಡೆ :

ಜೂನ್ ೧೯೪೭ : ತೋರುದತ್—ನಾಜೂ ಬಿಲ್ಲಿಮೋರಿಯ.

ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ :

ಮಾರ್ಚ್ ೪. ೧೯೫೬—ತೋರುದತ್—ನಾಜೂ ಬಿಲ್ಲಿಮೋರಿಯ. ಜುಲೈ ೫. ೧೯೩೧. ಆಂಗ್ಲ ಕಾವ್ಯವನ್ನು ಬರೆದ ಭಾರತೀಯರು—ಜೇನಸ್.

ಡಿಸೆಂಬರ್ ೧೦. ೧೯೬೧—ಹಾಡು ಹಕ್ಕಿಗಳ ಗೂಡು—ರಾಜಾರಾವ್.

ಸ್ಟೇಟ್ಸ್‌ಮನ್ :

ಮಾರ್ಚ್ ೧೪—೧೯೫೪. ತೋರುದತ್—ಲೇಖಕ : ಇಜ್ಜತ್ ಯಾರ್‌ಖಾನ್. ಟೈಮ್ಸ್ ಆಫ್ ಇಂಡಿಯ—ಮಾರ್ಚ್ ೭. ೧೯೫೪. 'ಪ್ರತಿಭಾಸ್ವಿತ ಕವಯಿತ್ರಿ'—ಅನಂತ್.

ಭಾರತೀಯ ಸಾಹಿತ್ಯದ ನಿರ್ಮಾಣಕಾರರು

ಈ ಮೇಲಣ ಶಿರೋನಾಮದಲ್ಲಿ ಚರಿತ್ರನಿಷ್ಠ ಪ್ರಬಂಧಗಳ ಮಾಲೆಯೊಂದನ್ನು ಇಂಗ್ಲಿಷ್ ಭಾಷೆಯಲ್ಲಿ ಅಣಿಗೊಳಿಸಿ ಸಾಮಾನ್ಯ ವಾಚಕರಿಗೆ ನೀಡುವ ಯೋಜನೆಯಿದೆ. ಈ ಪ್ರಬಂಧಗಳಲ್ಲಿ ಭಾರತದ ಪ್ರಾಚೀನ ಇಲ್ಲವೆ ಅರ್ವಾಚೀನ ಸಾಹಿತ್ಯದಲ್ಲಿಯ ಮಹತ್ತ್ವದ ಮೈಲಿಗಲ್ಲುಗಳಿಗೆ ಕಾರಣ ಪುರುಷರಾಗಿರುವವರ ಪರಿಚಯವನ್ನು ಮಾಡಿಕೊಡಲಾಗುವುದು. ಭಾರತೀಯ ಭಾಷೆಗಳಲ್ಲಿ ಅನುವಾದಿಸಲಾಗುವುದು. ಈ ಮಾಲೆಯಲ್ಲಿಯ ಪ್ರತಿಪ್ರಬಂಧವು ಯಾವುದೇ ಭಾರತೀಯ ಭಾಷಾಸಾಹಿತ್ಯದ ಅಭಿವೃದ್ಧಿ ಮತ್ತು ವಿಕಾಸಗಳಿಗಾಗಿ ಅಮೌಲ್ಯ ಕಾಣಿಕೆಯನ್ನಿತ್ತ ನಾಮಾಂಕಿತ ಭಾರತೀಯ ಲೇಖಕನೊಬ್ಬನ ಜೀವನ ಮತ್ತು ಕಾರ್ಯಗಳ ಕಥೆಯನ್ನು ಹೇಳುವುದು. ಅಂಥ ಪ್ರಬಂಧಗಳಲ್ಲಿ ಇದೂ ಒಂದಾಗಿದೆ. ಈಗಾಗಲೇ ಇಂಗ್ಲೀಷ್‌ನಲ್ಲಿ ಸಿದ್ಧವಾದ ಚರಿತ್ರನಿಷ್ಠ ಪ್ರಬಂಧಗಳು.

* **ರಾಜಾ ರಾಮಮೋಹನರಾಯ :** ಸೌಮ್ಯೇಂದ್ರನಾಥ ಟಾಗೋರ

* **ಕೇಶವಸುತರು :** ಪ್ರಭಾಕರ ಮಾಚ್ವೆ

* **ಇಳಂಗೋ ಅಡಿಗಳ್ :** ಎಂ. ವರದರಾಜನ್

ಲಕ್ಷ್ಮೀನಾಥ ಬೆಝ್ಬರೂವಾ : ಹೇಮಬರೂವಾ

ಕಬೀರ : ಪ್ರಭಾಕರ ಮಾಚ್ವೆ

* **ತೋರುದತ್ :** ಪದ್ಮಿನಿ ಸೆನ್ ಗುಪ್ತ

* **ಪ್ರೇಮಚಂದ್ :** ಪ್ರಕಾಶ ಚಂದ್ರಗುಪ್ತ

ವೀರೇಶಲಿಂಗಂ : ವಿ. ಆರ್. ನಾರ್ಲಾ

* **ವೇಮನ :** ವಿ. ಆರ್. ನಾರ್ಲಾ

ಗಾಲಿಬ್ : ಎಂ. ಮುಜೀಬ್

* **ಮೀರಾಬಾಯಿ :** ಉಷಾ ನಿಲ್ಸನ್

ಷಾ ಲತೀಫ್ : ಕಲ್ಯಾಣ್ ಬಿ. ಅದ್ವಾನಿ

* **ಈಶ್ವರಚಂದ್ರ ವಿದ್ಯಾಸಾಗರ :** ಹಿ. ಬ್ಯಾನರ್ಜಿ

ಚಂಡಿದಾಸ : ಸುಕುಮಾರ್‌ಸೇನ್

ಪ್ರಮಥಾಚೌದರಿ : ಅ. ಮುಕೊಪಾಧ್ಯಾಯ

ಭಾರತೇಂದು ಹರಿಶ್ಚಂದ್ರ : ಮದನಗೋಪಾಲ್

ಸಚಾಲ್ ಸರ್ಮಾಸ್ತ್ : ಕಲ್ಯಾಣ್ ಬಿ. ಅದ್ವಾನಿ

ಜೀವನಾನಂದ ದಾಸ್ : ಚಿದಾನಂದ ದಾಸ್‌ಗುಪ್ತ

ಕುಮಾರನ್ ಆಸಾನ್ : ಕೆ. ಮ. ಜಾರ್ಜ್

* ಇವು ಕನ್ನಡದಲ್ಲಿಯೂ ದೊರೆಯುತ್ತವೆ.